

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ


ಜುಲೈ 5 ಬುಧವಾರ 2023

ಸಂಪುಟ: 44 | ಸಂಚಿಕೆ: 80 | ಪುಟಗಳು: 12

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ: Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ/ಜಾಹೀರಾತಿಗಾಗಿ – ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4



ಯಾವ ಷರತ್ತಿಲ್ಲದೆ ಗ್ಯಾರಂಟಿ ಯೋಜನೆಗಳ ಜಾರಿಗೆ ಆಗ್ರಹಿಸಿ

ಸದನದ ಒಳ–ಹೊರಗೆ ಬಿಜೆಪಿ ಹೋರಾಟ

- ಮತಾಂತರ ನಿಷೇಧ ಕಾಯ್ದೆ ಹಿಂದಕ್ಕೆ ಪಡೆಯುವುದಕ್ಕೂ ವಿರೋಧ
- ವಿಧಾನಮಂಡಲ ಉಭಯ ಸದನಗಳಲ್ಲಿ ಸಭಾಧ್ಯಕ್ಷರ ಮುಂದಿನ ಬಾವಿಗಿಳಿದು ಧರಣಿ, ಸರ್ಕಾರದ ವಿರುದ್ಧ ಘೋಷಣೆ
- ಮತ್ತೊಂದೆಡೆ ಫ್ರೀಡಂ ಪಾರ್ಕ್‌ನಲ್ಲಿ ಯಡಿಯೂರಪ್ಪ, ಕಟೀಲ್ ನೇತೃತ್ವದಲ್ಲಿ ಧರಣಿ



ಬೆಂಗಳೂರು, ಜು.4(ಕೆಎಂಶಿ)– ಗ್ಯಾರಂಟಿ ಯೋಜನೆಗಳನ್ನು ಷರತ್ತಿಲ್ಲದೆ ಜಾರಿಗೊಳಿಸಬೇಕು, ಮತಾಂತರ ನಿಷೇಧ ಕಾಯ್ದೆ ಹಿಂದಕ್ಕೆ ಪಡೆಯಬಾರದು ಎಂದು ಒತ್ತಾಯಿಸಿ ರಾಜ್ಯ ಬಿಜೆಪಿ ಸದನದ ಒಳಗೆ–ಹೊರಗೆ ಕಾಂಗ್ರೆಸ್ ಸರ್ಕಾರದ ವಿರುದ್ಧ ಹೋರಾಟ ನಡೆಸಿತು.

ವಿಧಾನಸಭಾ ಚುನಾವಣೆಗೂ ಮುನ್ನ, ಅನ್ನಭಾಗ್ಯ, ಗೃಹಲಕ್ಷ್ಮಿ ಸೇರಿದಂತೆ ಐದು ಭರವಸೆಗಳನ್ನು ನೀಡಿ ಅಧಿಕಾರಕ್ಕೆ ಬಂದ ಕಾಂಗ್ರೆಸ್, ಇದೀಗ ನೀಡಿದ ಭರವಸೆಗಳನ್ನು ಈಡೇರಿಸಲು ಇನ್ನಿಲ್ಲದ ಷರತ್ತುಗಳನ್ನು ಒಡ್ಡುತ್ತಿದೆ. ಗ್ಯಾರಂಟಿಗಳನ್ನು ಮುಂದಿಟ್ಟುಕೊಂಡು ಅಧಿಕಾರಕ್ಕೆ ಬಂದ ನಂತರ ಅವುಗಳನ್ನು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನಗೊಳಿಸದೇ, ಮತದಾರರಿಗೆ ವಂಚನೆ ಮಾಡುತ್ತಿದೆ ಎಂದು ಆರೋಪಿಸಿದೆ. ವಿಧಾನ ಮಂಡಲದ ಅಧಿವೇಶನ ●9ನೇ ಪುಟಕ್ಕೆ



ಜು.21ರವರೆಗೆ ವಿಧಾನಮಂಡಲ ಅಧಿವೇಶನ ವಿಸ್ತರಣೆ

ಜು.7ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯರಿಂದ ಬಜೆಟ್ ಮಂಡನೆ



ಬೆಂಗಳೂರು: ವಿಧಾನಮಂಡಲ ಅಧಿವೇಶನವನ್ನು ಜುಲೈ 21ರವರೆಗೆ ವಿಸ್ತರಿಸಲಾಗಿದ್ದು, ಜುಲೈ 7ರಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು 14ನೇ ಬಾರಿ ಬಜೆಟ್ ಮಂಡಿಸಲಿದ್ದಾರೆ. ವಿಧಾನಮಂಡಲ ಅಧಿವೇಶನವನ್ನು ಜುಲೈ 21ರವರೆಗೆ ನಡೆಸಲು ಬಿಎಸಿ ಸಭೆಯಲ್ಲಿ ತೀರ್ಮಾನ ಮಾಡಲಾಗಿದೆ ಎಂದು ವಿಧಾನಸಭೆ ಸ್ಪೀಕರ್ ಯುಟಿ ಖಾದರ್ ಹೇಳಿದ್ದಾರೆ. ಈ ಮೊದಲು ಜುಲೈ 3ರಿಂದ ಜುಲೈ 14ರವರೆಗೆ ವಿಧಾನಮಂಡಲ ಅಧಿವೇಶನ ನಿಗದಿಯಾಗಿತ್ತು. ಇದೀಗ ಅದನ್ನು 21ರವರೆಗೆ ವಿಸ್ತರಿಸಲಾಗಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಚೇರಿಯಲ್ಲೇ ಲಂಚ ವಸೂಲಿ ದಂಧೆ

ಕುಮಾರಸ್ವಾಮಿ ಬಾಂಬ್: ಕಾಂಗ್ರೆಸ್‌ನಲ್ಲಿ ಸಂಚಲನ



ಬೆಂಗಳೂರು, ಜು.4(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಕಚೇರಿಯಲ್ಲಿ ಲಂಚ ಪಡೆಯಲಾಗುತ್ತಿದೆ ಎಂಬ ಮಾಜಿ ಸಿಎಂ ಹೆಚ್.ಡಿ. ಕುಮಾರಸ್ವಾಮಿ ಮಾಡಿರುವ ಆರೋಪ ಭಾರೀ ಸಂಚಲನವನ್ನುಂಟು ಮಾಡಿದೆ.

ಗಾಳಿಯಲ್ಲಿ ಗುಂಡು ಹೊಡೆಯುವ ಕೆಲಸ ಕುಮಾರಸ್ವಾಮಿ ಮುಂದುವರೆಸಿದ್ದಾರೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೇರಿದಂತೆ ಹಲವು ಕಾಂಗ್ರೆಸ್ ನಾಯಕರು ದೂರಿದ್ದಾರೆ. ನಾನು ಮಾಡಿರುವ ಆರೋಪವನ್ನು ಸದನದಲ್ಲೇ ಸಾಬೀತು ಮಾಡುತ್ತೇನೆ. ಅಧಿಕಾರಿಯ ವರ್ಗಾವಣೆಗೆ 30 ಲಕ್ಷ ರೂ. ಲಂಚ ಕೇಳಿರುವ ಸಂಬಂಧಪಟ್ಟ ಸಚಿವರನ್ನು ತಲೆದಂಡ ಮಾಡುತ್ತೀರಾ ಎಂದು ಕುಮಾರಸ್ವಾಮಿ ಮರು ಸವಾಲು ಹಾಕಿದ್ದಾರೆ. ಕುಮಾರಸ್ವಾಮಿ ಅವರ ಈ ಆರೋಪಕ್ಕೆ ರಾಜ್ಯ ಬಿಜೆಪಿಯು ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಒಂದು ಹೆಜ್ಜೆ ಮುಂದೆ ಹೋಗಿರುವ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಮುಂದೆ ಸಿದ್ದರಾಮಯ್ಯ ಸರ್ಕಾರದ ವಿರುದ್ಧ ಬಿಜೆಪಿ ಮತ್ತು ಜೆಡಿಎಸ್ ಜಂಟಿಯಾಗಿ ಹೋರಾಟ ನಡೆಸುತ್ತೇವೆ ಎಂದು ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮುಖ್ಯಮಂತ್ರಿ ಕಚೇರಿಯಲ್ಲಿ ಭ್ರಷ್ಟಾಚಾರ, ವರ್ಗಾವಣೆ ದಂಧೆ ನಡೆಯುತ್ತಿದೆ ಎಂದು ಕುಮಾರಸ್ವಾಮಿ ಮಾಡಿರುವ ಆರೋಪದಲ್ಲಿ ಸತ್ಯವಿದೆ. ಅವರ ಹೋರಾಟಕ್ಕೆ ನಮ್ಮ ಬೆಂಬಲವಿದೆ ಎಂದಿದ್ದಾರೆ. ಕುಮಾರಸ್ವಾಮಿ ಅವರು ಜವಾಬ್ದಾರಿಯುತವಾಗಿ ಹೋರಾಟ ಮಾಡುತ್ತಿದ್ದಾರೆ. ನಮ್ಮ ಹೋರಾಟಕ್ಕೂ ಅವರ ಬೆಂಬಲ ಪಡೆದು ಸದನದ ಒಳ–ಹೊರಗೆ ಹೋರಾಟ ನಡೆಸುತ್ತೇವೆ. ಅಷ್ಟೇ ಅಲ್ಲ, ಅವರು ನಡೆಸುವ ಎಲ್ಲಾ ಹೋರಾಟಕ್ಕೂ ನಮ್ಮ ಬೆಂಬಲವಿದೆ ಎಂದು ಹೇಳಿ ಅವರು ಅಚ್ಚರಿ ಮೂಡಿಸಿದ್ದಾರೆ. ಲೋಕಸಭಾ ಚುನಾವಣೆಗೂ ಮುನ್ನ ಜೆಡಿಎಸ್ ಎನ್‌ಡಿಎ ಮೈತ್ರಿಕೂಟ ಸೇರಲಿದೆ ಎಂಬ ವರದಿಗಳು ಬರುತ್ತಿರುವ ಬೆನ್ನಲ್ಲೇ ಯಡಿಯೂರಪ್ಪ ಮತ್ತು ಮಾಜಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೀಡುತ್ತಿರುವ ಹೇಳಿಕೆಗಳು ಇದಕ್ಕೆ ಪುಷ್ಟಿ ಕೊಡುತ್ತಿವೆ.

ಕಾಸಿಗಾಗಿ ಪೋಸ್ಟಿಂಗ್ ದಾಖಲೆ ಕೊಡ್ತೇನೆ

ಮಂತ್ರಿಯ ವಜಾ ಮಾಡ್ತೀರಾ...

- ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿ ಮರು ಸವಾಲು
- ನನ್ನ ಹತ್ತಿರ ವರ್ಗಾವಣೆ ದಂಧೆಯ ಎಲ್ಲಾ ದಾಖಲೆಗಳೂ ಇವೆ



ಬೆಂಗಳೂರು, ಜು.4(ಕೆಎಂಶಿ)– ಈ ಸರಕಾರ ಬಂದ ಮೇಲೆ ನಡೆಯುತ್ತಿರುವ ವರ್ಗಾವಣೆ ದಂಧೆ ಹಾಗೂ ಕಾಸಿಗಾಗಿ ಪೋಸ್ಟಿಂಗ್ ಬಗ್ಗೆ ನಾನು ದಾಖಲೆ ಕೊಡಲು ಸಿದ್ಧನಿದ್ದೇನೆ ಎಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮರು ಸವಾಲು ಹಾಕಿದ್ದಾರೆ. ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಯಾರೋ ಒಬ್ಬರು ತಾಕತ್ತು ಇದ್ದರೆ ಕುಮಾರಸ್ವಾಮಿ ದಾಖಲೆ ಕೊಡಲಿ ಎಂದು ಹೇಳಿದ್ದಾರೆ. ಅದಕ್ಕೆ ಇದೇ ನನ್ನ ಉತ್ತರ. ನನ್ನ ಹತ್ತಿರ ದಾಖಲೆಗಳೂ ಇವೆ. ದಾಖಲೆ ಕೊಡುವ ದಮ್ಮು, ತಾಕತ್ತು ನನಗೆ ಇದೆ. ತನಿಖೆ ಮಾಡುವ ದಮ್ಮು, ತಾಕತ್ತು ಇವರಿಗೆ ಇದೆಯಾ ಎಂದು ಅವರು ಖಾರವಾಗಿ ಪ್ರಶ್ನಿಸಿದರು.

ಈ ಸರಕಾರ ಇನ್ನೂ ಹನಿಮೂನ್ ಪೀರಿಯಡ್‌ನಲ್ಲಿ ಇದೆ ಎಂದು ಹೇಳುತ್ತಿದ್ದಾರೆ ಕಾಂಗ್ರೆಸ್‌ನವರು. ಸರಕಾರಕ್ಕೆ ಐದು ಆರು ತಿಂಗಳಾದರೂ ಸಮಯ ಕೊಡಬೇಡವೇ ಎಂದು ಕೆಲವರು ಕೇಳುತ್ತಿದ್ದಾರೆ. ಹನಿಮೂನ್ ಪೀರಿಯಡ್‌ನಲ್ಲಿದ್ದರೆ ಈಗೆಲ್ಲಾ ಮಾಡುತ್ತಾರೆಯೇ. ಹನಿಮೂನ್ ಪಿರಿಯಡ್‌ನಲ್ಲೇ ಹೀಗಾದರೆ ಮುಂದಿರುವ ಪೀರಿಯಡ್‌ಗಳ ಕಥೆ ಏನು ಎಂದು ಅವರು ತೀಕ್ಷ್ಣವಾಗಿ ಪ್ರಶ್ನಿಸಿದರು. ನನ್ನ ಆರೋಪಕ್ಕೆ ದಾಖಲೆ ಕೇಳುತ್ತಿದ್ದಾರೆ ಕಾಂಗ್ರೆಸ್ ನಾಯಕರು. ಅವರ ಕನಸು ನಾನು ಈಡೇರಿಸುತ್ತೇನೆ. ನಾನು ದಾಖಲೆ ಕೊಟ್ಟರೆ ಯಾವ ಮಂತ್ರಿಯ ಇಲಾಖೆಯಲ್ಲಿ ವರ್ಗಾವಣೆ ದಂಧೆ ನಡೆದಿದೆ ಎಂದು ಆ ಮಂತ್ರಿಯನ್ನು ವಜಾ ಮಾಡ್ತಿರಾ. ಆ ಮಂತ್ರಿಯನ್ನು ವಜಾ ಮಾಡುವ ತಾಕತ್ತು ಇವರಿಗೆ ಇದೆಯಾ. ನಾನು ನನ್ನ ಬಳಿ ಇರುವ ದಾಖಲೆಯನ್ನು ಸದನದಲ್ಲಿಯೇ ಇಡುತ್ತೇನೆ. ನಾನು ದಾಖಲೆ ●9ನೇ ಪುಟಕ್ಕೆ

ದೈನಂದಿನ ಹಣಕಾಸು ವಹಿವಾಟು ನಿರ್ವಹಣೆಗೆ ರಾಜಭವನ ಗ್ರೀನ್‌ಸಿಗ್ನಲ್

ಮೈಸೂರು ವಿವಿ ನೌಕರರು, ಪಿಂಚಣಿದಾರರು ನಿರಾಳ

ಮೈಸೂರು, ಜು.4(ಎಸ್‌ಬಿಡಿ)– ಮೈಸೂರು ವಿಶ್ವ ವಿದ್ಯಾನಿಲಯದ ಹಣಕಾಸು ಸಂಬಂಧಿತ ನಿರ್ವಹಣೆಗೆ ರಾಜ್ಯಪಾಲರ ವಿಶೇಷ ಕಾರ್ಯದರ್ಶಿ ಸೂಚನೆ ನೀಡಿದ್ದು, ಪಿಂಚಣಿ ಹಾಗೂ ವೇತನದಾರರು ನಿಟ್ಟುಸಿರು ಬಿಟ್ಟಿದ್ದಾರೆ.

ಮೈಸೂರು ವಿವಿ ಕುಲಪತಿ ನೇಮಕಾತಿಗೆ ಹೈಕೋರ್ಟ್ ನೀಡಿರುವ ತಡೆಯಾಜ್ಞೆ ಗಮನದಲ್ಲಿಟ್ಟುಕೊಂಡು, ಕುಲಸಚಿವರು (ಆಡಳಿತ) ಹಾಗೂ ಹಣಕಾಸು ಅಧಿಕಾರಿ ದೈನಂದಿನ ಅಗತ್ಯತೆ ಜೊತೆಗೆ ಬೋಧಕ ಮತ್ತು ಬೋಧಕೇತರ ಸಿಬ್ಬಂದಿಗೆ ವೇತನ ಪಾವತಿ, ಪಿಂಚಣಿ ಪಾವತಿ ಇನ್ನಿತರ ಅಗತ್ಯ ವಿಷಯಗಳ ಬಗ್ಗೆ ನಿರ್ಧಾರ ಕೈಗೊಳ್ಳಬಹುದು. ಆದರೆ ●9ನೇ ಪುಟಕ್ಕೆ

> “ ಮೈಸೂರು ವಿಶ್ವವಿದ್ಯಾನಿಲಯದ ನಿವೃತ್ತ ಉದ್ಯೋಗಿಗಳ ಒಕ್ಕೂಟದ ಮನವಿಗೆ ಸ್ಪಂದಿಸಿದ ಮುಖ್ಯಮಂತ್ರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಸಚಿವರು, ವಿಶೇಷ ಕಾಳಜಿ ವಹಿಸಿ ವಿವಿಯ ಕುಲಾಧಿಪತಿಗಳೂ ಆದ ರಾಜ್ಯಪಾಲರ ಗಮನಕ್ಕೆ ತಂದಿದ್ದರಿಂದ ದಿನಂಪ್ರತಿ ಕಾರ್ಯದ ಜೊತೆಗೆ ನೌಕರರಿಗೆ ವೇತನ ಹಾಗೂ ನಿವೃತ್ತರಿಗೆ ಪಿಂಚಣಿ ನೀಡಲು ಅನುಮತಿ ದೊರೆತಿದೆ. ಒಕ್ಕೂಟದ ಅಧ್ಯಕ್ಷ ಡಾ.ಕೆ.ಮಹದೇವ ಅವರು, ವಿವಿಯ ಅಧಿಕಾರಿಗಳನ್ನು ಭೇಟಿ ಮಾಡಿ ಆದೇಶದನುಸಾರ ಕೂಡಲೇ ಪಿಂಚಣಿ ನೀಡುವಂತೆ ಆಗ್ರಹಿಸಿದ್ದಾರೆ.
>
> –ಕೃಷ್ಣಮಲ್ಲೇಗೌಡ, ಒಕ್ಕೂಟದ ಕಾರ್ಯದರ್ಶಿ

ಕೊಡಗಲ್ಲಿ ಮಳೆ ಆರ್ಭಟ; ಮರಗಳು ಉರುಳಿ

ಮಡಿಕೇರಿ–ಮೈಸೂರು ಸಂಚಾರ ಕೆಲಕಾಲ ಬಂದ್

ವಿದ್ಯುತ್ ಕಂಬ ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು; ಆರೆಂಜ್ ಅಲರ್ಟ್ ಘೋಷಣೆ



ಮಡಿಕೇರಿ, ಜು.4– ಕೊಡಗಲ್ಲಿ ಕಳೆದ ಮೂರು ದಿನಗಳಿಂದ ಮುಂಗಾರು ಆರ್ಭಟಿಸುತ್ತಿದ್ದು, ಭಾರೀ ಗಾಳಿ–ಮಳೆಯಿಂದ ರಾಷ್ಟ್ರೀಯ ಹೆದ್ದಾರಿ 275ರಲ್ಲಿ ಮರಗಳು ಧರೆಗುರುಳಿ ಕೆಲಕಾಲ ಮಡಿಕೇರಿ–ಮೈಸೂರು ರಸ್ತೆ ಸಂಚಾರ ಸ್ಥಗಿತಗೊಂಡಿತ್ತು.

ಕುಶಾಲನಗರ–ಮಡಿಕೇರಿ ನಡುವೆ ಬೋಯಿಕೆರೆ ಬಳಿ ಹೆದ್ದಾರಿಯಲ್ಲಿ ಮರ, ವಿದ್ಯುತ್ ಕಂಬ ಉರುಳಿ ಬಿದ್ದ ಪರಿಣಾಮ ಸಂಚಾರ ಸಂಪೂರ್ಣ ಅಸ್ತವ್ಯಸ್ತಗೊಂಡು ಎರಡೂ ಕಡೆಯೂ ವಾಹನಗಳು ಸಾಲುಗಟ್ಟಿ ನಿಂತಿದ್ದವು. ತಕ್ಷಣ ಕಾರ್ಯಪ್ರವೃತ್ತವಾದ ಸ್ಥಳೀಯ ಆಡಳಿತ, ಪೊಲೀಸರು ಮತ್ತು ಸಾರ್ವಜನಿಕರ ಸಹಕಾರದೊಂದಿಗೆ ಮುರಿದು ಬಿದ್ದ ಮರ ಮತ್ತು ವಿದ್ಯುತ್ ಕಂಬವನ್ನು ತೆರವುಗೊಳಿಸಿತು. ಮರ ಬೀಳುತ್ತಿದ್ದ ಸಂದರ್ಭ ಎರಡು ವಾಹನಗಳಲ್ಲಿದ್ದವರು ಕೂದಲೆಳೆಯ ಅಂತರದಲ್ಲಿ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಇನ್ನೊಂದೆಡೆ ಮಳೆ ತೀವ್ರಗೊಳ್ಳುತ್ತಿದ್ದು, ರಾಷ್ಟ್ರೀಯ ಹೆದ್ದಾರಿ 275 ಬಿರುಕು ಬಿಟ್ಟಿದ್ದು, ಒಂದೆಡೆ ಸಂಚಾರ ಬಂದ್ ಮಾಡಲಾಗಿದೆ ಎಂಬ ವದಂತಿಯನ್ನು ತಳ್ಳಿಹಾಕಿದ ಕೊಡಗು ಜಿಲ್ಲಾಡಳಿತ, ಮಡಿಕೇರಿ–ಮೈಸೂರು ಹೆದ್ದಾರಿಯಲ್ಲಿ ಸುಗಮ ಸಂಚಾರಕ್ಕೆ ಯಾವ ಅಡ್ಡಿ ಇಲ್ಲ ಎಂದು ಸ್ಪಷ್ಟಪಡಿಸಿದೆ. ಮರ ತೆರವುಗೊಳಿಸುವವರೆಗೂ ಪರ್ಯಾಯ ಮಾರ್ಗದಲ್ಲಿ ವಾಹನ ಸಂಚಾರಕ್ಕೆ ಅವಕಾಶ ನೀಡಲಾಗಿತ್ತು. ಮಳೆ ಮತ್ತಷ್ಟು ತೀವ್ರಗೊಂಡರೆ ಈ ಬಾರಿಯೂ ಹೆದ್ದಾರಿ ಕುಸಿಯುವ ಸಂಭವವಿರುವುದರಿಂದ ಜಿಲ್ಲಾಡಳಿತವು ಇದಕ್ಕೆ ಸೂಕ್ತ ಸಿದ್ಧತೆ ಮಾಡಿ, ಪರ್ಯಾಯ ಮಾರ್ಗಗಳ ಕಲ್ಪಿಸಲು ಚಿಂತನೆ ನಡೆಸಿದೆ ಎಂದು ಹೇಳಲಾಗಿದೆ.

ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ

ಸಾರಿಗೆ ಬಸ್‌ಗಳ ವೇಗಕ್ಕೆ ಬ್ರೇಕ್

ಸ್ಪೀಡ್ ಗವರ್ನರ್ ಅಳವಡಿಸುವ ಮೂಲಕ ಪವರ್ ಪ್ಲಸ್‌ಗೆ 80 ಕಿ.ಮೀ., ಸಾಮಾನ್ಯ ಬಸ್‌ಗಳಿಗೆ 65 ಕಿ.ಮೀ. ವೇಗದ ಮಿತಿ ನಿಗದಿ




ಮೈಸೂರು, ಜು.4(ಬಿಎಲ್‌ಯು)– ಮೈಸೂರು–ಬೆಂಗಳೂರು ಎಕ್ಸ್‌ಪ್ರೆಸ್ ವೇಯಲ್ಲಿ ಸಂಚರಿಸುವ ತನ್ನ ಬಸ್‌ಗಳ ಅತೀ ವೇಗಕ್ಕೆ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬ್ರೇಕ್ ಹಾಕಿದೆ. ಪ್ರಯಾಣಿಕರ ಸುರಕ್ಷತೆ ದೃಷ್ಟಿಯಿಂದ ಕೆಎಸ್‌ಆರ್‌ಟಿಸಿ ಬಸ್‌ಗಳು ಅತೀ ವೇಗವಾಗಿ ಚಾಲನೆಯಾಗದಂತೆ ಎಲ್ಲಾ ಬಸ್‌ಗಳಿಗೆ ವೇಗ ನಿಯಂತ್ರಣ ಉಪಕರಣ (ಸ್ಪೀಡ್ ಗವರ್ನರ್) ಅಳವಡಿಸಿದೆ.

ಮೈಸೂರು ಬೆಂಗಳೂರು ಎಕ್ಸ್‌ಪ್ರೆಸ್ ವೇನಲ್ಲಿ ಸರಣಿ ಅಪಘಾತವಾಗುತ್ತಿದೆ. ಕಳೆದ ವಾರ ಮೈಸೂರಿನಿಂದ ಬೆಂಗಳೂರಿಗೆ ಹೋಗುತ್ತಿದ್ದ ಕೆಎಸ್‌ಆರ್‌ಟಿಸಿಯ ಪವರ್ ಪ್ಲಸ್ ಎಲೆಕ್ಟ್ರಿಕ್ ಬಸ್ ಅಪಘಾತಕ್ಕೀಡಾಗಿ ನಿರ್ವಾಹಕ ಸಾವನ್ನಪ್ಪಿ, ಹತ್ತಾರು ಪ್ರಯಾಣಿಕರು ಗಾಯಗೊಂಡಿದ್ದರು. ಅಲ್ಲದೆ, ಈ ಮೊದಲು ಕೂಡ ಹಲವು ಕೆಎಸ್‌ಆರ್‌ಟಿಸಿ ಬಸ್‌ಗಳು ಅಪಘಾತಕ್ಕೀಡಾಗಿದ್ದವು. ಈ ಹಿನ್ನೆಲೆಯಲ್ಲಿ ಪ್ರಯಾಣಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಕೆಎಸ್‌ಆರ್‌ಟಿಸಿ ಬಸ್‌ಗಳ ಅತೀ ವೇಗಕ್ಕೆ ಬ್ರೇಕ್ ಹಾಕಿದೆ. ಚಾಲಕ ಅತೀ ವೇಗವಾಗಿ ಚಾಲನೆ ಮಾಡಲು ಯತ್ನಿಸಿದರೂ ಈ ಉಪಕರಣ ಅದಕ್ಕೆ ಅವಕಾಶ ನೀಡುವುದಿಲ್ಲ.

ಈ ಮೊದಲು ಪವರ್ ಪ್ಲಸ್ ಎಲೆಕ್ಟ್ರಿಕ್ ಬಸ್‌ಗಳು ಗಂಟೆಗೆ 120ರಿಂದ 130 ಕಿಲೋಮೀಟರ್ ವೇಗದಲ್ಲಿ ಓಡುತ್ತಿದ್ದವು. ಇನ್ನು ವೋಲ್ವೊ ಬಸ್‌ಗಳು ಸಹ 110ರಿಂದ 120 ಕಿಲೋಮೀಟರ್ ವೇಗದಲ್ಲಿ ಚಲಿಸುತ್ತಿದ್ದವು. ಆದರೆ ಈಗ ಬಸ್‌ಗಳ ಅತೀ ವೇಗಕ್ಕೆ ಕಡಿವಾಣ ಹಾಕಲಾಗಿದೆ. ಪವರ್ ಪ್ಲಸ್ ಎಲೆಕ್ಟ್ರಿಕ್ ಬಸ್ ಹಾಗೂ ವೋಲ್ವೊ ಬಸ್‌ಗಳ ಗರಿಷ್ಠ ವೇಗದ ಮಿತಿಯನ್ನು 80 ಕಿಲೋಮೀಟರ್‌ಗೆ ನಿಗದಿ ಮಾಡಲಾಗಿದೆ. ಇನ್ನು ಸಾಮಾನ್ಯ ಬಸ್‌ಗಳ ವೇಗದ ಮಿತಿಯನ್ನು 65 ಕಿಲೋಮೀಟರ್‌ಗೆ ನಿಗದಿ ಮಾಡಲಾಗಿದೆ. ಅತೀ ವೇಗಕ್ಕೆ ಬ್ರೇಕ್ ಹಾಕಿದರೆ ಅಪಘಾತಗಳನ್ನು ತಡೆಗಟ್ಟಬಹುದು ಎಂಬ ಕಾರಣದಿಂದ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಈ ಕ್ರಮ ಕೈಗೊಂಡಿದೆ. ಮೈಸೂರಿನ ಗ್ರಾಮಾಂತರ ವಿಭಾಗದಲ್ಲಿ 8 ಪವರ್ ಪ್ಲಸ್ ಹಾಗೂ 100 ವೋಲ್ವೊ ಬಸ್‌ಗಳಿದ್ದು, ಎಲ್ಲಾ ಬಸ್‌ಗಳಿಗೂ ವೇಗದ ಮಿತಿ ಉಪಕರಣ ಅಳವಡಿಸಲಾಗಿದೆ ಎಂದು ಕೆಎಸ್‌ಆರ್‌ಟಿಸಿ ಗ್ರಾಮಾಂತರ ವಿಭಾಗದ ವಿಭಾಗೀಯ ನಿಯಂತ್ರಣಾಧಿಕಾರಿ ಶ್ರೀನಿವಾಸ್ ತಿಳಿಸಿದ್ದಾರೆ.

ಮೈಸೂರಿನಲ್ಲಿ ಒಟ್ಟು 1071 ಬಸ್‌ಗಳಿವೆ. ಈ ಮೊದಲು ಪ್ರತಿದಿನ 4.05 ಲಕ್ಷ ಜನರು ಪ್ರಯಾಣ ಮಾಡುತ್ತಿದ್ದರು. ಆದರೆ ಈಗ 'ಶಕ್ತಿ' ಯೋಜನೆ ಅನುಷ್ಠಾನಗೊಂಡ ಮೇಲೆ 4.65 ಲಕ್ಷ ಜನ ಪ್ರಯಾಣ ಮಾಡುತ್ತಿದ್ದಾರೆ. ಅದರಂತೆ ಈಗ ಹೆಚ್ಚುವರಿಯಾಗಿ ಸುಮಾರು 60 ಸಾವಿರ ಜನರು ಪ್ರಯಾಣ ಮಾಡುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಬಸ್‌ಗಳಲ್ಲಿ ಪ್ರಯಾಣಿಕರ ಸಂಖ್ಯೆ ಹೆಚ್ಚಾಗಿದೆ. ಇದರಿಂದ ಹೆಚ್ಚುವರಿಯಾಗಿ 120 ಹೊಸ ಬಸ್ ನೀಡುವಂತೆ ನಿಗಮಕ್ಕೆ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ಶ್ರೀನಿವಾಸ್ ತಿಳಿಸಿದರು.

ಪವಾರ್ v/s ಪವಾರ್: ಇಂದಿನ ಸಭೆಯಲ್ಲಿ ಎನ್‌ಸಿಪಿ ಯಾವ ಬಣದ್ದು ನಿರ್ಧಾರ


ಅಜಿತ್ ಪವಾರ್


ಶರದ್ ಪವಾರ್

ಮುಂಬೈ: ಮಹಾರಾಷ್ಟ್ರ ರಾಜಕೀಯ ಕ್ಷಣಕ್ಕೊಂದು ತಿರುವು ಪಡೆದುಕೊಳ್ಳುತ್ತಿದ್ದು, ದಿಢೀರ್ ರಾಜಕೀಯ ಬೆಳವಣಿಗೆಯಲ್ಲಿ ಏಕನಾಥ್ ಶಿಂಧೆ ಸರ್ಕಾರದಲ್ಲಿ ಉಪ ಮುಖ್ಯಮಂತ್ರಿಯಾಗಿ ಅಧಿಕಾರ ವಹಿಸಿಕೊಂಡ ಎನ್‌ಸಿಪಿ ಬಂಡಾಯ ನಾಯಕ ಅಜಿತ್ ಪವಾರ್ ಹಾಗೂ ಎನ್‌ಸಿಪಿ ವರಿಷ್ಠ ಶರದ್ ಪವಾರ್ ಇಬ್ಬರೂ ಬುಧವಾರ ಪಕ್ಷದ ನಾಯಕರ ಸಭೆ ಕರೆದಿದ್ದು, ಶಕ್ತಿ ಪ್ರದರ್ಶನಕ್ಕೆ ಮುಂದಾಗಿದ್ದಾರೆ.

ಅಜಿತ್ ಪವಾರ್ ಅವರು ಎಲ್ಲಾ ಎನ್‌ಸಿಪಿ ಸಂಸದರು, ಎಂಎಲ್‌ಎಗಳು, ಎಂಎಲ್‌ಸಿಗಳು, ಜಿಲ್ಲಾ ಮುಖ್ಯಸ್ಥರು ಮತ್ತು ರಾಜ್ಯ ಪ್ರತಿನಿಧಿಗಳ ಸಭೆ ಕರೆದಿದ್ದಾರೆ. ಜುಲೈ 5 ರಂದು ●9ನೇ ಪುಟಕ್ಕೆ

ಮೈಸೂರು ಮಿತ್ರ ಬುಧವಾರ 5 ಜುಲೈ 2023

ರಸಗೊಬ್ಬರ, ಕೀಟನಾಶಕ, ಕೃಷಿ ಉಪಕರಣ ಮೇಲಿನ ಜಿಎಸ್‌ಟಿ ಕೈಬಿಡಬೇಕು

ರಾಜ್ಯ ರೈತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹ

ಮೈಸೂರು,ಜು.4(ಪಿಎಂ)– ರೈತರಿಗೆ ಅಗತ್ಯವಿರುವ ರಸಗೊಬ್ಬರ, ಕೀಟನಾಶಕ ಮತ್ತು ಕೃಷಿ ಉಪಕರಣಗಳ ಖರೀದಿಗೆ ಕೇಂದ್ರ ಸರ್ಕಾರ ಜಿಎಸ್‌ಟಿ ವಿಧಿಸುತ್ತಿದ್ದು, ಇದನ್ನು ರದ್ದುಪಡಿಸಲು ರಾಜ್ಯ ಸರ್ಕಾರ ಒತ್ತಾಯಿಸಬೇಕೆಂದು ರಾಜ್ಯ ರೈತ ಸಂಘಟನೆಗಳ ಒಕ್ಕೂಟ ಮತ್ತು ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಆಗ್ರಹಿಸಿದರು.



ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ರಾಜ್ಯ ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್ ಮಾತನಾಡಿದರು.

ಮೈಸೂರಿನ ಜಲದರ್ಶಿನಿ ಅತಿಥಿಗೃಹದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜೂಜಾಟ, ಕುದುರೆ ಜೂಜಿಗೆ ಜಿಎಸ್‌ಟಿ ವಿಧಿಸಿಲ್ಲ. ಆದರೆ ದೇಶಕ್ಕೆ ಅನ್ನ ಹಾಕುವ ರೈತರಿಗೆ ಅಗತ್ಯವಿರುವ ವಸ್ತುಗಳಿಗೆ ಜಿಎಸ್‌ಟಿ ಹಾಕಿದೆ. ಮೋಜು ಮಾಡುವ ಜನರಿಗೆ ಜಿಎಸ್‌ಟಿ ಬೇಡ ಎನ್ನುವುದು ನ್ಯಾಯವೇ ಎಂದು ಪ್ರಶ್ನಿಸಿದರು.

ಚೀನಾದಿಂದ ರೇಷ್ಮೆ ನೂಲು ಮತ್ತು ಮಲೇಷ್ಯಾದಿಂದ ಪಾಮ್ ಆಯಿಲ್ ಆಮದು ಮೂಲಕ ಕೇಂದ್ರ ಸರ್ಕಾರ ದೇಶದ ರೈತರನ್ನು ಬಲಿಕೊಡುತ್ತಿದೆ. ವಿಶ್ವ ವ್ಯಾಪಾರ ಒಪ್ಪಂದದ ಪ್ರಕಾರ ದೇಶಕ್ಕೆ ಆಮದು ಆಗುವಂತಹ ವಿದೇಶಿ ಉತ್ಪನ್ನಗಳ ಮೇಲೆ ಹೆಚ್ಚು ತೆರಿಗೆ ವಿಧಿಸಲು ಕೇಂದ್ರ ಸರ್ಕಾರಕ್ಕೆ ಅಧಿಕಾರವಿದೆ. ಆದರೆ ತೆರಿಗೆ ವಿನಾಯಿತಿ ನೀಡಿದ್ದು, ಇದರಿಂದ ದೇಶದ ರೇಷ್ಮೆ ಮತ್ತು ತೆಂಗು ಬೆಳೆಗಾರರು ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ವಿದೇಶಿ ಆಮದು ವಿರುದ್ಧ ಹೋರಾಟ: ಈ ಉತ್ಪನ್ನಗಳ ಆಮದಿಗೆ ತೆರಿಗೆ ವಿನಾಯಿತಿ ಕೊಟ್ಟಿದ್ದು ಏಕೆಂದು ಕೇಂದ್ರ ಸರ್ಕಾರ ಸ್ಪಷ್ಟಪಡಿಸಬೇಕು. ಶೀಘ್ರದಲ್ಲಿ ತುಮಕೂರು ಅಥವಾ ರಾಮನಗರದಲ್ಲಿ ರೇಷ್ಮೆ ಮತ್ತು ತೆಂಗು ಬೆಳೆಗಾರರ ಜಾಗೃತಿ ಸಮಾವೇಶ ಆಯೋಜಿಸುವ ಮೂಲಕ ರೈತರಲ್ಲಿ ಜಾಗೃತಿ ಮೂಡಿಸಿ, ರಾಜ್ಯಾದ್ಯಂತ ದೊಡ್ಡ ಹೋರಾಟ ರೂಪಿಸಲಾಗುವುದು ಎಂದು ತಿಳಿಸಿದರು.

ಕೇಂದ್ರ ಸರ್ಕಾರವು ಪ್ರತಿ ಕ್ವಿಂಟಾಲ್ ಕಬ್ಬಿಗೆ ಹೆಚ್ಚುವರಿ 10 ರೂ. ಎಫ್‌ಆರ್‌ಪಿ ಏರಿಕೆ ಮಾಡಿರುವುದು ಅವೈಜ್ಞಾನಿಕ. ಈ ವರ್ಷದ ಕಬ್ಬಿನ ಎಫ್‌ಆರ್‌ಪಿಯನ್ನು ರೈತರ ಹೊಲದಲ್ಲಿನ ದರ ಎಂದು ನಿಗದಿ ಮಾಡಬೇಕು. ರೈತರ ಹೋರಾಟದ ಮೇರೆಗೆ ಈ ಹಿಂದಿನ ರಾಜ್ಯ ಬಿಜೆಪಿ ಸರ್ಕಾರದ ಅವಧಿಯಲ್ಲಿ ಎಫ್‌ಆರ್‌ಪಿ ಜೊತೆಗೆ ಹೆಚ್ಚುವರಿಯಾಗಿ 150 ರೂ.ಗಳನ್ನು ಕಾರ್ಖಾನೆಗಳು ನೀಡಬೇಕೆಂದು ಆದೇಶ ಹೊರಡಿಸಲಾಗಿತ್ತು. ಈ ಸಂಬಂಧ ಕಬ್ಬು ಕಾರ್ಖಾನೆ ಮಾಲೀಕರು ಕೋರ್ಟ್‌ನಿಂದ ತಡೆಯಾಜ್ಞೆ ತಂದಿದ್ದು, ಸರ್ಕಾರ ತಡೆಯಾಜ್ಞೆ ತೆರವಿಗೆ ಕ್ರಮ ವಹಿಸಿ, ಬಾಕಿ ಕೊಡಿಸಬೇಕು ಎಂದು ಒತ್ತಾಯಿಸಿದರು.

ರಾಜ್ಯ ಬಜೆಟ್ ರೈತಪರವಿರಲಿ: ವಿತ್ತ ಖಾತೆಯನ್ನೂ ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಬಜೆಟ್ ಮಂಡನೆ ಮಾಡುತ್ತಿದ್ದು, ಈ ಹಿನ್ನೆಲೆಯಲ್ಲಿ ರೈತಪರವಾದ ಅನೇಕ ಅಂಶಗಳನ್ನು ಅವರಿಗೆ ಈಗಾಗಲೇ ಪತ್ರ ಮುಖೇನ ತಿಳಿಸಲಾಗಿದೆ. ಅನ್ನಭಾಗ್ಯ ಯೋಜನೆಗೆ ಅಕ್ಕಿ, ರಾಗಿ, ಜೋಳ ಸೇರಿದಂತೆ ಸಿರಿಧಾನ್ಯಗಳನ್ನು ರಾಜ್ಯದ ರೈತರಿಂದ ಖರೀದಿಸಬೇಕು. ಸ್ವಾಮಿನಾಥನ್ ವರದಿಯಂತೆ ಎಂಎಸ್‌ಪಿ ನಿಗದಿ ಮಾಡಬೇಕು. ರಾಜ್ಯದಲ್ಲಿ ಎಲ್ಲಾ ಹೋಬಳಿ ಮಟ್ಟದಲ್ಲಿ ಖರೀದಿ ಕೇಂದ್ರ ತೆರೆದು ಅನ್ನಭಾಗ್ಯ ಯೋಜನೆಗೆ ಧಾನ್ಯ ಖರೀದಿಸಬೇಕು. ಇದರಿಂದ ಸಾಗಾಣಿಕೆ ವೆಚ್ಚ ಭರಿಸುವುದು ತಪ್ಪುತ್ತದೆ. ಬಜೆಟ್‌ನಲ್ಲಿ ಈ ಕುರಿತು ನಿರ್ಧಾರ ಘೋಷಣೆ ಮಾಡಬೇಕು ಎಂದು ಆಗ್ರಹಿಸಿದರು.

ರೈತರಿಗೆ ನೀಡುವ ಸಾಲದ ನೀತಿ ಸರಳೀಕರಣಗೊಳಿಸಬೇಕು. ಕೃಷಿ ಸಾಲ ಪಡೆಯಲು ಇರುವ ಸಿಬಿಲ್ ಸ್ಕೋರ್ ಕೈಬಿಡಬೇಕು. ಕಳೆದ ವರ್ಷಕ್ಕಿಂತಲೂ ಶೇ.60ರಷ್ಟು ಮಳೆ ಪ್ರಮಾಣ ನಮ್ಮಲ್ಲಿ ಕಡಿಮೆಯಾಗಿದೆ. ಹೀಗಾಗಿ ರಾಜ್ಯದಲ್ಲಿ ಬರಗಾಲದ ಛಾಯೆ ಕಂಡು ಬರುತ್ತಿದ್ದು, ಸರ್ಕಾರ ಮುನ್ನೆಚ್ಚರಿಕೆ ಕ್ರಮ ವಹಿಸಬೇಕು. ಬರಗಾಲದ ನಿರ್ವಹಣೆ ಸಂಬಂಧ ಸೂಕ್ತ ನಿರ್ಧಾರ ಕೈಗೊಳ್ಳಬೇಕು ಎಂದು ಕುರುಬೂರು ಶಾಂತಕುಮಾರ್ ಮನವಿ ಮಾಡಿದರು.

ಎಲ್ಲಾ ಕೃಷಿ ಉತ್ಪನ್ನಗಳಿಗೆ ಬೆಳೆ ವಿಮೆ ಜಾರಿಗೊಳಿಸಬೇಕು. ತೆಲಂಗಾಣ ಸರ್ಕಾರದ ಮಾದರಿಯಲ್ಲಿ ರೈತ ಕುಟುಂಬಗಳಿಗೆ ಜೀವವಿಮೆ ಸೌಲಭ್ಯ ಕಲ್ಪಿಸಬೇಕು. ಕೃಷಿ ಕ್ಷೇತ್ರ ಉಳಿಸುವ ನಿಟ್ಟಿನಲ್ಲಿ ಎಪಿಎಂಸಿ ತಿದ್ದುಪಡಿ ಕಾಯ್ದೆ, ಭೂ ಸುಧಾರಣಾ ತಿದ್ದುಪಡಿ ಕಾಯ್ದೆ ಮಾರ್ಪಾಡು ಮಾಡಬೇಕು. ಗೋ ಹತ್ಯೆ ನಿಷೇಧ ಕಾಯ್ದೆಯಲ್ಲಿ ಕೆಲ ಲೋಪದೋಷಗಳು ಇದ್ದು, ರೈತರಿಗೆ ಅನುಕೂಲವಾಗುವ ನಿಟ್ಟಿನಲ್ಲಿ ಈ ಕಾಯ್ದೆಗೆ ತಿದ್ದುಪಡಿಗಳನ್ನು ಮಾಡಬೇಕೆಂದು ಆಗ್ರಹಿಸಿದರು.

ಸಂಘಟನೆಯ ಮುಖಂಡರಾದ ಬರಡನಪುರ ನಾಗರಾಜ್, ಮಹದೇವಸ್ವಾಮಿ, ಕಮಲಮ್ಮ ಗೋಷ್ಠಿಯಲ್ಲಿದ್ದರು.

ಭಾರತದಿಂದ ಗೋ ಮಾಂಸವೇ ರಫ್ತು ಆಗುತ್ತಿಲ್ಲ

ಮೈಸೂರು,ಜು.4(ಪಿಎಂ)– ಎಮ್ಮೆ ಮತ್ತು ಕೋಣದ ಮಾಂಸ ಮಾತ್ರ ಭಾರತದಿಂದ ವಿದೇಶಗಳಿಗೆ ರಫ್ತು ಮಾಡಲು ಅವಕಾಶ ನೀಡಲಾಗಿದೆ. ಹಸು ಮಾಂಸ ವಿದೇಶಕ್ಕೆ ರಫ್ತು ಮಾಡಲು ಇಂದಿಗೂ ಅವಕಾಶವಿಲ್ಲ ಎಂದು ಕುರುಬೂರು ಶಾಂತಕುಮಾರ್ ತಿಳಿಸಿದರು.

ಭಾರತದಿಂದ ಹೆಚ್ಚಿನ ಪ್ರಮಾಣದಲ್ಲಿ ಗೋ ಮಾಂಸ ರಫ್ತು ಮಾಡಲಾಗುತ್ತಿದೆ ಎಂಬ ವಾದವಿದೆ. ಇದನ್ನು ತಡೆಯುವ ನಿಟ್ಟಿನಲ್ಲಿ ಕೇಂದ್ರ ಸರ್ಕಾರಕ್ಕೆ ಒತ್ತಾಯ ಮಾಡುತ್ತೀರಾ ಎಂಬುದಕ್ಕೆ ಪ್ರತಿಕ್ರಿಯಿಸಿದ ಅವರು, ಎಮ್ಮೆ ಮತ್ತು ಕೋಣದ ಮಾಂಸ ಮಾತ್ರ ರಫ್ತಿಗೆ ಅವಕಾಶವಿದೆ ಹಸು ಮಾಂಸ ವಿದೇಶಕ್ಕೆ ರಫ್ತು ಮಾಡಲು ಸುಪ್ರೀಂಕೋರ್ಟ್ ಅವಕಾಶ ಕೊಟ್ಟಿಲ್ಲ. ಭಾರತದಿಂದ ವಿದೇಶಗಳಿಗೆ ರಫ್ತು ಆಗುತ್ತಿರುವುದು ಗೋ ಮಾಂಸವಲ್ಲ ಎಂಬುದು ತುಂಬಾ ಜನಕ್ಕೆ ಗೊತ್ತಿಲ್ಲ ಎಂದರು.

10 ಲಕ್ಷ ಕೋಟಿ ರೂ. ಸಾಲವನ್ನು 70 ಉದ್ಯಮಿಗಳಿಗೆ ಮನ್ನಾ ಮಾಡಲಾಗಿದೆ. ಆದರೆ ರೈತರ ಸಾಲ ಮನ್ನಾ ಮಾಡಿ ಎಂದರೆ ಜನಪ್ರತಿನಿಧಿಗಳು ದೇಶದ ಹಣಕಾಸಿನ ಪರಿಸ್ಥಿತಿ ಸಂಕಷ್ಟಕ್ಕೆ ಸಿಲುಕುತ್ತದೆ ಎನ್ನುತ್ತಾರೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಹೆಚ್.ಎಸ್.ವಿಶ್ವನಾಥರ ಜೀವನ ಸಂದೇಶ

ಸಂತೃಪ್ತಿಯೆಂಬುದೇ ಸಂತೋಷದ ರಹಸ್ಯ




ಮನುಷ್ಯನು ತನ್ನ ಆಸೆ–ಆಕಾಂಕ್ಷೆಗಳಿಗೆ ಇತಿಮಿತಿಯನ್ನು ವಿಧಿಸಿಕೊಳ್ಳುವುದು ಒಳ್ಳೆಯದೆಂದು ಜ್ಞಾನಿಗಳು ಹೇಳುತ್ತಾರೆ. ಶ್ರೀ ಭ್ರಮರಾಂಬಾಷ್ಟಕ ಎಂಬ ದೇವೀ ಸ್ತೋತ್ರಮಾಲೆಯಲ್ಲಿ ದುರಾಸೆಯ ದುಷ್ಪರಿಣಾಮದ ಬಗ್ಗೆ ಹೀಗೆ ಹೇಳಿದೆ:–

ದುಂಬಿಯೊಂದು ಒಂದು ಹೂವಿನಿಂದ ಇನ್ನೊಂದು ಹೂವಿಗೆ ಹಾರುತ್ತಾ ಮಕರಂದವನ್ನು ಅರಸುತ್ತಾ ಹೋಗುತ್ತದೆ. ಹಾಗೆ ಮಾಡುವಾಗ ಮಲ್ಲಿಗೆ ಹೂವಿನಲ್ಲಿ ಒಂದು ಕ್ಷಣ ಕುಳಿತು ಅಲ್ಲಿಂದ ಸೂಜಿ ಮಲ್ಲಿಗೆ ಹೂವಿನ ಮೇಲೆ ಹಾರಿ ಕೆಲವೇ ಕ್ಷಣಗಳಲ್ಲಿ ಚಂದನವನ್ನು ಪ್ರವೇಶಿಸುತ್ತದೆ. ಅಷ್ಟೊತ್ತಿಗೆ ಸೂರ್ಯಾಸ್ತವಾಗಿ ರಾತ್ರಿ ಸಮೀಪಿಸಿದ ಕಾರಣ ಕಮಲದ ಹೂವಿನ ದಳಗಳು ಮುದುಡಿ ಹೋಗಿ ಅದರೊಳಗೆ ದುಂಬಿಯು ಬಂಧಿತವಾಗುತ್ತದೆ. ಬಂಧನಕ್ಕೊಳಗಾದ ದುಂಬಿಯು ದುಃಖದ ತಾಪಕ್ಕೆ ಒಳಗಾಗಿ ರೋದಿಸಲು ಪ್ರಾರಂಭಿಸುತ್ತದೆ. ಹೀಗೆಯೇ ಮನುಷ್ಯನಾದವನು ತನ್ನ ಆಸೆ–ಆಕಾಂಕ್ಷೆಗಳಿಗೆ ಮಿತಿ ಇಟ್ಟುಕೊಳ್ಳದೇ ಅತೃಪ್ತಿ ಹೊಂದಿದರೆ, ಜೀವಿತದ ಅಂತ್ಯಕಾಲದಲ್ಲಿ ದುಃಖಪಡಬೇಕಾಗುತ್ತದೆ. ನಮಗೆ ಲಭ್ಯವಾಗುವುದರಲ್ಲಿ ಸಂತೋಷಪಡುವುದೇ ಉತ್ತಮವಾದುದು ಎಂದು ಗೀತಾ ವಾಕ್ಯದಲ್ಲಿ ಉಕ್ತವಾಗಿರುವಂತೆ ನಾವು ಸಂತೃಪ್ತ ಜೀವನ ನಡೆಸಲು ಕಾರ್ಯೋನ್ಮುಖರಾಗಬೇಕೆಂದು ಹೇಳಲಾಗುತ್ತದೆ.

ಪ್ರಶಸ್ತಿ ಬಂದ ಬೆನ್ನಲ್ಲೇ ಡಿಹೆಚ್‌ಓ ಡಾ.ಕೆ.ಹೆಚ್.ಪ್ರಸಾದ್ ವರ್ಗಾವಣೆ

ಡಾ.ಪಿ.ಸಿ.ಕುಮಾರಸ್ವಾಮಿ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ



ಡಾ.ಕೆ.ಹೆಚ್.ಪ್ರಸಾದ್



ಡಾ.ಪಿ.ಸಿ.ಕುಮಾರಸ್ವಾಮಿ

ಮೈಸೂರು,ಜು.4(ಆರ್‌ಕೆ)–ರಾಜ್ಯದಲ್ಲೇ 'ಉತ್ತಮ ಜಿಲ್ಲಾ ಆರೋಗ್ಯಾಧಿಕಾರಿ' ಪ್ರಶಸ್ತಿ ನೀಡಿ ಗೌರವಿಸಿದ ಬೆನ್ನಲ್ಲೇ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕೆ.ಹೆಚ್.ಪ್ರಸಾದ್ ಅವರನ್ನು ಸರ್ಕಾರ ಸೋಮವಾರ ವರ್ಗಾವಣೆ ಮಾಡಿದೆ.

ಬೆಂಗಳೂರಿನ ವಿಧಾನಸೌಧದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಜುಲೈ 1ರಂದು ಏರ್ಪಡಿಸಿದ್ದ ರಾಷ್ಟ್ರೀಯ ವೈದ್ಯರ ದಿನಾಚರಣೆ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಡಾ.ಪ್ರಸಾದ್ ಅವರಿಗೆ 'ಉತ್ತಮ ಜಿಲ್ಲಾ ಆರೋಗ್ಯಾಧಿಕಾರಿ' ಎಂಬ ಪ್ರಶಸ್ತಿ ನೀಡಿ, ಗೌರವಿಸಿದ್ದರು. ಪ್ರಶಸ್ತಿ ನೀಡಿದ ಎರಡೇ ದಿನದಲ್ಲಿ, ಜುಲೈ 3ರಂದು ಡಾ.ಪ್ರಸಾದ್ ಅವರನ್ನು ವರ್ಗಾವಣೆ ಮಾಡಿದ್ದು, ಅವರ ಸ್ಥಾನಕ್ಕೆ ಚಿತ್ರದುರ್ಗ ಜಿಲ್ಲಾ ಸಂತಾನೋತ್ಪತ್ತಿ ಹಾಗೂ ಮಕ್ಕಳ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಅವರನ್ನು ನಿಯೋಜಿಸಲಾಗಿದೆ. ಆದರೆ, ಡಾ.ಕೆ.ಹೆಚ್.ಪ್ರಸಾದ್ ಅವರಿಗೆ ಸ್ಥಳ ನಿಯೋಜಿಸದೇ ಇಲಾಖೆ ಆಯುಕ್ತರ ಕಚೇರಿಯಲ್ಲಿ ವರದಿ ಮಾಡಿಕೊಳ್ಳುವಂತೆ ವರ್ಗಾವಣೆ ಆದೇಶದಲ್ಲಿ ತಿಳಿಸಲಾಗಿದೆ.

ಕೇರಳ ಸ್ಟೋರಿ' ಸಿನಿಮಾ ನೋಡಿದರೆ ಕಾಂಗ್ರೆಸ್ ಸರ್ಕಾರ ಖಂಡಿತಾ ಮತಾಂತರ ನಿಷೇಧ ಕಾಯ್ದೆ ತಿದ್ದುಪಡಿ ಮಾಡಲ್ಲ



ಬೆಂಗಳೂರು: 'ದಿ ಕೇರಳ ಸ್ಟೋರಿ' ಸಿನಿಮಾ ನೋಡಿದರೆ ಕಾಂಗ್ರೆಸ್ ಸರ್ಕಾರ ಖಂಡಿತಾ ಮತಾಂತರ ನಿಷೇಧ ಕಾಯ್ದೆಯನ್ನು ತಿದ್ದುಪಡಿ ಮಾಡಲ್ಲ ಎಂದು ಮಾಜಿ ಸಚಿವ ಕೆ.ಎಸ್.ಈಶ್ವರಪ್ಪ ಗುಡುಗಿದ್ದಾರೆ.

ಮಾಜಿ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ ಅವರ ನೇತೃತ್ವದಲ್ಲಿ ಫ್ರೀಡಂ ಪಾರ್ಕ್‌ನಲ್ಲಿ ಕಾಂಗ್ರೆಸ್ ಗ್ಯಾರಂಟಿ ವಿರೋಧಿ ಪ್ರತಿಭಟನೆಯನ್ನುದ್ದೇಶಿಸಿ ಅವರು ಮಾತನಾಡಿದ ಅವರು, ಬೇಕಿದ್ದರೆ ಕಾಂಗ್ರೆಸ್ ಮಂತ್ರಿಗಳು ಬರಲಿ. ನಾನೇ ಕರೆದುಕೊಂಡು ಹೋಗಿ ಇಡೀ ಮಂತ್ರಿ ಮಂಡಲಕ್ಕೆ ಕೇರಳ ಸ್ಟೋರಿ ಸಿನಿಮಾವನ್ನು ಉಚಿತವಾಗಿ ತೋರಿಸ್ತೀನಿ ಬನ್ನಿ. ಕಾಂಗ್ರೆಸ್‌ನವರು ಈ ಸಿನಿಮಾ ನೋಡಿದರೆ ಮತಾಂತರ ನಿಷೇಧ ಕಾಯ್ದೆಯನ್ನು ತಿದ್ದುಪಡಿ ಮಾಡಲ್ಲ ಎಂದಿದ್ದಾರೆ.


ಅಲ್ಲದೇ ಗೋ ಹತ್ಯೆ ನಿಷೇಧ ಕಾಯ್ದೆ ರದ್ದು ಮಾಡಿ ನೋಡೋಣ ಅಂತ ಸವಾಲ್ ಹಾಕಿದ್ದಾರೆ. ಗೋವು ತಾಯಿ ಸಮಾನ, ಮೊದಲು ನಿಮ್ಮ ಮನೆಗೆ ಹೋಗಿ ನಿಮ್ಮ ತಾಯಿ, ಅಕ್ಕ–ತಂಗಿಗೆ ಕೇಳಿ. ಗೋ ಹತ್ಯೆ ನಿಷೇಧ ಮಾಡ್ತೀವಿ ಅಂದ್ರೆ ನಿಮ್ಮನ್ನು ಮನೆಬಿಟ್ಟು ಓಡಿಸ್ತಾರೆ. ಮೋಸ ಮಾಡಿದ ಸರ್ಕಾರ ಬಹಳ ದಿನ ಇರಲ್ಲ ಅನ್ನೋದಕ್ಕೆ ಮಹಾರಾಷ್ಟ್ರ ಸಾಕ್ಷಿ. ಮಹಾರಾಷ್ಟ್ರದಂತೆಯೇ ಕರ್ನಾಟಕದಲ್ಲಿಯೂ ಆಗಲಿದೆ ಎಂದು ಭವಿಷ್ಯ ನುಡಿದಿದ್ದಾರೆ.

188 ಗ್ರಾಮ ಪಂಚಾಯಿತಿಗಳ 430 ಸ್ಥಾನಗಳಿಗೆ ಜು.23ರಂದು ಚುನಾವಣೆ



ಬೆಂಗಳೂರು: ರಾಜ್ಯ ಚುನಾವಣಾ ಆಯೋಗ (ಎಸ್‌ಇಸಿ) ರಾಜ್ಯದಾದ್ಯಂತ 188 ಗ್ರಾಮ ಪಂಚಾಯಿತಿಗಳ 430 ಸ್ಥಾನಗಳಿಗೆ ಚುನಾವಣೆಯನ್ನು ಪ್ರಕಟಿಸಿದೆ. ಜು.23ರಂದು ಚುನಾವಣೆ ನಡೆಯಲಿದ್ದು, ಜು.26ರಂದು ಮತ ಎಣಿಕೆ ನಡೆಯಲಿದೆ. 14 ಗ್ರಾಮ ಪಂಚಾಯಿತಿಗಳ 207 ಸ್ಥಾನಗಳಿಗೆ ಚುನಾವಣೆ ನಡೆಯುತ್ತಿದ್ದು, ಆಗಸ್ಟ್‌ನಲ್ಲಿ ಇವುಗಳ ಅವಧಿ ಮುಕ್ತಾಯವಾಗಲಿದೆ. ಅಲ್ಲದೆ, ವಿವಿಧ ಕಾರಣಗಳಿಂದ ತೆರವಾಗಿರುವ 174 ಗ್ರಾಮ ಪಂಚಾಯಿತಿಗಳ 223 ಸ್ಥಾನಗಳಿಗೆ ಉಪಚುನಾವಣೆ ನಡೆಯುತ್ತಿದೆ ಎಂದು ಎಸ್‌ಇಸಿ ತಿಳಿಸಿದೆ.

ಸಂತಾಪ ಸೂಚಕ ಸಭೆ



ದೊಡ್ಡವೀರಪ್ಪ

ಮೈಸೂರು, ಜು.4– ಇತ್ತೀಚೆಗೆ (ಜು.1) ನಿಧನರಾದ ನಿವೃತ್ತ ರೈಲ್ವೆ ನೌಕರರು, ಶ್ರೀ ಕಾಳಿದಾಸ ವಿದ್ಯಾರ್ಥಿನಿಲಯದ ಧರ್ಮದರ್ಶಿಗಳೂ ಆದ ದೊಡ್ಡವೀರಪ್ಪನವರಿಗೆ ಸಂತಾಪ ಸೂಚಕ ಸಭೆ ಮಂಗಳವಾರ ಮಾನಂದವಾಡಿ ರಸ್ತೆಯಲ್ಲಿನ ಶ್ರೀ ಕಾಳಿದಾಸ ಸಾರ್ವಜನಿಕ ವಿದ್ಯಾರ್ಥಿನಿಲಯದ ಆವರಣದಲ್ಲಿ ನಡೆಯಿತು.

ಸಭೆಯಲ್ಲಿ ಶ್ರೀಯುತರು ನಿಲಯದ ಕಾರ್ಯದರ್ಶಿ, ಅಧ್ಯಕ್ಷರಾಗಿ ಸಲ್ಲಿಸಿದ ಅವಿರತ ಸೇವೆಯನ್ನು ಸ್ಮರಿಸಿ, ಅವರ ಆತ್ಮಕ್ಕೆ ಚಿರಶಾಂತಿ ಕೋರಲಾಯಿತು ಎಂದು ನಿಲಯದ ಕಾರ್ಯದರ್ಶಿ ಪಿ.ಜಯಚಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವೋದಯ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನ

ಮೈಸೂರು,ಜು.4–ಡಿ.ಎಂ.ಜಿ.ಹಳ್ಳಿಯಲ್ಲಿರುವ ಜವಾಹರ್ ನವೋದಯ ವಿದ್ಯಾಲಯಕ್ಕೆ 6ನೇ ತರಗತಿಗಾಗಿ 2024–25ರ ಶೈಕ್ಷಣಿಕ ವರ್ಷದ ಪ್ರವೇಶ ಪರೀಕ್ಷೆಗೆ www.navodaya.gov.in, https://navodaya.gov.in/nvs/nvs-school/MYSURU/en/contact-us/JNV ಮೂಲಕ ಆಹ್ವಾನಿಸಿದ್ದು, ಅರ್ಜಿ ಸಲ್ಲಿಸಲು ಆ.10 ಕಡೇ ದಿನ. ಮಾಹಿತಿಗೆ ದೂ.ಸಂ.0821–2970040 ಸಂಪರ್ಕಿಸಿ.

ನಿಧನ

ಗೋವಿಂದರಾಜು



ಮೈಸೂರು,ಜು.4–ಮೈಸೂರಿನ ಗಾಂಧಿನಗರದ ಶ್ರೀ ದುರ್ಗಾದೇವಿ ದೇವಸ್ಥಾನ ರಸ್ತೆಯ ನಿವಾಸಿ ಎನ್.ಗೋವಿಂದರಾಜು (56) ಅವರು ಸೋಮವಾರ ಬೆಳಗ್ಗೆ ಅನಾರೋಗ್ಯದಿಂದ ಮೈಸೂರಿನ ಕೆ.ಆರ್. ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ ಸುವರ್ಣ, ಪುತ್ರರಾದ ಪುನಂದರಾಜ್, ಗಗನ್‌ರಾಜ್, ಸಂತೋಷ್‌ರಾಜ್ ಸೇರಿದಂತೆ ಅಪಾರ ಬಂಧು–ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆಯು ಸೋಮವಾರ ಸಂಜೆ ಗಾಂಧಿನಗರದ ಆದಿಜಾಂಬವ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬ ವರ್ಗ ತಿಳಿಸಿದೆ.

ಪಾಲಂಗಡ ಲಲಿತಾ ಸುಬ್ಬಯ್ಯ



ಮೈಸೂರಿನ ಗೋಕುಲಂ 3ನೇ ಹಂತ, 4ನೇ ಮೇನ್, ನಂ.541/ಬಿ ನಿವಾಸಿ ಹಾಗೂ ದಿವಂಗತ ಪಾಲಂಗಡ ಕೆ.ಸುಬ್ಬಯ್ಯ ಅವರ ಪುತ್ರಿ ಪಾಲಂಗಡ ಲಲಿತಾ ಸುಬ್ಬಯ್ಯ (74) ಸೋಮವಾರ ನಿಧನರಾದರು. ಮೃತರು ಇಬ್ಬರು ಸಹೋದರಿಯರು, ಇಬ್ಬರು ಸಹೋದರರು ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಗೋಕುಲಂನ ಚಿರಶಾಂತಿಧಾಮದಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜು.9ರಿಂದ 16ರವರೆಗೆ ಜಿ20 ಶೃಂಗಸಭೆಯ 3ನೇ ಶೆರ್ಪಾ ಸಭೆ




ಹೊಸಪೇಟೆ, ಜು.4– ಜುಲೈ 9ರಿಂದ 16ರವರೆಗೆ ಹಂಪಿಯಲ್ಲಿ ನಡೆಯುವ ಜಿ20 ಶೃಂಗಸಭೆಯ ಮೂರನೇ ಪ್ರಮುಖ ಸಭೆಯಲ್ಲಿ ಜಾಗತಿಕ ಮಟ್ಟದ ಒಟ್ಟು ಜಿ20 ಶೃಂಗಸಭೆಯ 20 ಸದಸ್ಯ ರಾಷ್ಟ್ರಗಳು, 9 ಆಹ್ವಾನಿತ ರಾಷ್ಟ್ರಗಳು ಸೇರಿ 43 ರಾಷ್ಟ್ರಗಳು ಭಾಗವಹಿಸಲಿವೆ. ಭಾನುವಾರ ನೀತಿ ಆಯೋಗದ ಸಿಇಓ ಮತ್ತು ಜಿ20 ಶೃಂಗಸಭೆ ಆಯೋಜನೆಯ ಮುಖ್ಯಸ್ಥ (ಶೆರ್ಪಾ) ಅಮಿತಾಭ್ ಕಾಂತ್ ಅವರು ಹಂಪಿಗೆ ಭೇಟಿ ನೀಡಿ, ಸ್ಥಳ ಪರಿಶೀಲನೆ ನಡೆಸಿದರು. ಸಿದ್ಧತೆ ಕುರಿತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಯನ್ನೂ ನಡೆಸಿದರು.

ಈಗಾಗಲೇ ಹಂಪಿ ಪಾರಂಪರಿಕ ಪ್ರದೇಶದಲ್ಲಿ ಶೆರ್ಪಾ ಸಭೆಗಾಗಿ ಅಂತಿಮ ಹಂತದ ಸಿದ್ಧತೆ ಕೈಗೊಳ್ಳಲಾಗುತ್ತಿದ್ದು, ಈ ಶೆರ್ಪಾ ಸಭೆಯು 'ವಸುಧೈವ ಕುಟುಂಬಕಂ' ಧ್ಯೇಯದಡಿ, 'ಒಂದು ಭೂಮಿ, ಒಂದು ಕುಟುಂಬ, ಒಂದೇ ಭವಿಷ್ಯ' ಘೋಷವಾಕ್ಯದಡಿ ಶೃಂಗಸಭೆಯನ್ನು ಆಯೋಜನೆ ಮಾಡಲಾಗುತ್ತಿದೆ. ಜಿ20 ಶೃಂಗಸಭೆಯ ಮೂರನೇ ಶೆರ್ಪಾ ಸಭೆಗಳು ಜು.9ರಿಂದ 16ರವರೆಗೆ ಹಂಪಿಯಲ್ಲಿ ನಡೆಯಲಿವೆ. ನಾನು ಅಧಿಕಾರಿಗಳೊಂದಿಗೆ ಸಿದ್ಧತೆಗಳ ಬಗ್ಗೆ ಚರ್ಚಿಸಿದ್ದೇನೆ ಎಂದು ಕಾಂತ್ ಹೇಳಿದರು.

ಹಂಪಿಯಲ್ಲಿ 43 ರಾಷ್ಟ್ರಗಳು ಭಾಗಿ


ಈ ಬಾರಿ ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ್ದು, ಜಿ20 ಶೃಂಗಸಭೆಯ ಮೂರನೇ ಪ್ರಮುಖ ಸಭೆ ವಿಶ್ವ ಪಾರಂಪರಿಕ ತಾಣ ಹಂಪಿಯಲ್ಲಿ ಜು.9ರಿಂದ 16ರವರೆಗೆ ನಡೆಯಲಿದೆ. ಇದರಲ್ಲಿ 43 ದೇಶಗಳ ಉನ್ನತಮಟ್ಟದ ಅಧಿಕಾರವುಳ್ಳ ಪ್ರತಿನಿಧಿಗಳು ಭಾಗವಹಿಸಲಿದ್ದು, ಅಂತರರಾಷ್ಟ್ರೀಯ ಮಟ್ಟದ ಹಲವಾರು ಉನ್ನತ ಸಭೆಗಳು ನಡೆಯಲಿವೆ ಎಂದರು.

ಈಗಾಗಲೇ ರಾಜಸ್ಥಾನದ ಉದಯಪುರ, ಅಸ್ಸಾಮಿನ ಕುಮಾರ್ಗಮ್‌ನಲ್ಲಿ ಶೆರ್ಪಾ ಸಭೆಗಳು ನಡೆದಿವೆ. ಜಾಗತಿಕ ಮಟ್ಟದಲ್ಲಿ ಕರ್ನಾಟಕ ರಾಜ್ಯದ ಪ್ರವಾಸೋದ್ಯಮ ಹಾಗೂ ಸಾಂಸ್ಕೃತಿಕ ಹಿರಿಮೆ ಮತ್ತು ಉತ್ಪನ್ನಗಳನ್ನು ಉನ್ನತೀಕರಿಸಲು 3ನೇ ಶೆರ್ಪಾ ಸಭೆ ವಿಶ್ವವಿಖ್ಯಾತ ಪಾರಂಪರಿಕ ತಾಣ ಹಂಪಿಯಲ್ಲಿ ನಡೆಯಲಿದೆ. ವಿಜಯನಗರ ಜಿಲ್ಲಾಧಿಕಾರಿ ವೆಂಕಟೇಶ್ ಟಿ.ಮಾತನಾಡಿ, ಸಭೆಗಳನ್ನು ಯಶಸ್ವಿಗೊಳಿಸಲು ನಾವು ಶ್ರಮಿಸುತ್ತಿದ್ದೇವೆ. ಇದು ನಮಗೆ ಹೆಮ್ಮೆಯ ಕ್ಷಣವಾಗಿದೆ ಎಂದರು.



ಮಾನಂದವಾಡಿ ರಸ್ತೆಯಲ್ಲಿರುವ ಕರ್ನಾಟಕ ರೇಷ್ಮೆ ನೇಯ್ಗೆ ಕಾರ್ಖಾನೆಯಲ್ಲಿ 40 ವರ್ಷ ಸೇವೆ ಸಲ್ಲಿಸಿ ನಿವೃತ್ತಿಗೊಂಡ ನೌಕರರಾದ ಪ್ರೊಡಕ್ಷನ್ ಮ್ಯಾನೇಜರ್ ಸಂಗಮ್, ಮಹಾದೇವಯ್ಯ, ಗೋಪಿಕೃಷ್ಣ, ಮುರುಳಿ, ಧರ್ಮಲಿಂಗು, ಲಕ್ಷ್ಮಣ್ ಸ್ವಾಮಿ, ಗೋಪಿನಾಥ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಪ್ರಧಾನ ವ್ಯವಸ್ಥಾಪಕ ಸಿದ್ದಲಿಂಗ ಪ್ರಸಾದ್, ಕೃಷ್ಣರಾಜ ಕ್ಷೇತ್ರದ ಯೂತ್ ಕಾಂಗ್ರೆಸ್ ಉಪಾಧ್ಯಕ್ಷ ಎಂ.ನವೀನ್, ಕೆಂಪಿ, ಕೆ.ಆರ್.ಬ್ಯಾಂಕ್‌ನ ಉಪಾಧ್ಯಕ್ಷ ಬಸವರಾಜು (ಬಸಪ್ಪ), ನಿವೃತ್ತರ ಕುಟುಂಬದವರು ಉಪಸ್ಥಿತರಿದ್ದರು.

ಮೈಸೂರಿನ ಯಾದವಗಿರಿಯ ಹೃದಯದ ದೇವಾಲಯದಲ್ಲಿ ವಾರ್ಷಿಕ ಮಹೋತ್ಸವ



ಡಾ.ಬರ್ನಾರ್ಡ್ ಮೊರಸ್



ಮೈಸೂರು,ಜು.4 (ಬಿಎಲ್‌ಯು)– ಮೈಸೂರಿನ ಯಾದವಗಿರಿಯ ಪವಿತ್ರ ಹೃದಯದ ದೇವಾಲಯದಲ್ಲಿ ಜುಲೈ 9 ರಂದು ಧರ್ಮ ಕೇಂದ್ರದ ವಾರ್ಷಿಕ ಮಹೋತ್ಸವವು ಧಾರ್ಮಿಕ ಹಾಗೂ ಸಾಂಪ್ರದಾಯಿಕ ವಿಧಿ ವಿಧಾನದಂತೆ ಅದ್ದೂರಿಯಾಗಿ ನಡೆಯಲಿದೆ.

ಮೈಸೂರು ಧರ್ಮಕ್ಷೇತ್ರದ ನಿಕಟಪೂರ್ವ ಮಹಾಧರ್ಮಾಧ್ಯಕ್ಷರೂ ಆದ ಪ್ರೇಷಿತ ಆಡಳಿತಾಧಿಕಾರಿ ಡಾ.ಬರ್ನಾರ್ಡ್ ಮೊರಸ್ ಅವರ ಸಾನ್ನಿಧ್ಯದಲ್ಲಿ ಈ ಕಾರ್ಯಕ್ರಮಗಳು ನಡೆಯಲಿವೆ.

ಮಹೋತ್ಸವದ ಹಿನ್ನೆಲೆ ಜುಲೈ 6ರಂದು ತ್ರಿದಿನದ ಬಲಿ ಅರ್ಪಣೆಯ ಕಾರ್ಯಕ್ರಮ ನಡೆಯಲಿದೆ. ಅಂದು ಸಂಜೆ 5.30 ಗಂಟೆಗೆ ನಡೆಯುವ ಜಪಸರ, ಧ್ವಜಾರೋಹಣ ಹಾಗೂ ದಿವ್ಯ ಬಲಿ ಅರ್ಪಣೆ ಕಾರ್ಯಕ್ರಮದಲ್ಲಿ ಮೈಸೂರಿನ ಕ್ಸೇವಿಯರ್ ಸದನದ ನಿರ್ದೇಶಕರಾದ ಫಾದರ್ ಎಡ್ವರ್ಡ್ ಫಿಲಿಪ್ ಎಸ್.ಜೆ ಭಾಗವಹಿಸಲಿದ್ದಾರೆ.

ಜುಲೈ 7ರಂದು ಸಂಜೆ 5.40 ಗಂಟೆಗೆ ನಡೆಯುವ ಜಪಸರ ದಿವ್ಯ ಬಲಿ ಅರ್ಪಣೆ ಕಾರ್ಯಕ್ರಮದಲ್ಲಿ ಸಂತ ಜೋಸೆಫರ ನರ್ಸಿಂಗ್ ಸಂಸ್ಥೆ ನಿರ್ದೇಶಕ ಫಾದರ್ ಟಿ.ಬಾರೋಸ್ ಪಾಲ್ಗೊಳ್ಳಲಿದ್ದಾರೆ.

ಜುಲೈ 8ರಂದು ಸಂಜೆ 5.40 ಗಂಟೆಗೆ ಜಪಸರ ಹಾಗೂ ದಿವ್ಯ ಬಲಿ ಅರ್ಪಣೆ ಕಾರ್ಯಕ್ರಮದಲ್ಲಿ ಮೈಸೂರಿನ ಕ್ಯಾಥೋಲಿಕ್ ಕೇಂದ್ರದ ಫಾದರ್ ಡಿ.ಜಯರಾಜ್ ಭಾಗವಹಿಸಲಿದ್ದಾರೆ. ಸಮಾರೋಪದ ದಿನವಾದ ಜುಲೈ 9ರಂದು ಹಬ್ಬದ ದಿನವಾಗಿದ್ದು, ಅಂದು 5 ಗಂಟೆಗೆ ದಿವ್ಯ ಬಲಿ ಅರ್ಪಣೆ, ಮಕ್ಕಳಿಗೆ ಪ್ರಥಮ ಪರಮ ಪ್ರಸಾದ ವಿತರಿಸಲಾಗುವುದು. ನಂತರ ಅಲಂಕೃತ ತೇರಿನ ಮೆರವಣಿಗೆ ನಡೆಯಲಿದ್ದು, ಅಂತಿಮವಾಗಿ ಪರಮ ಪ್ರಸಾದ ಆಶೀರ್ವಾದ ಮಾಡಲಾಗುವುದು.

ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಿಗೆ ಅರ್ಜಿ ಆಹ್ವಾನ

ಮೈಸೂರು,ಜು.4–2023–24ನೇ ಸಾಲಿನ ಮೆಟ್ರಿಕ್ ನಂತರದ ವಿದ್ಯಾರ್ಥಿ ನಿಲಯಗಳಲ್ಲಿ ಹೊಸ ಪ್ರವೇಶಾತಿ ಪಡೆಯಲು ಬಯಸುವ ಪ.ಜಾತಿ/ ಪ.ವರ್ಗದ ಹಾಗೂ ಪ್ರವರ್ಗ–1 2ಎ, 2ಬಿ, 3ಎ, 3ಬಿ ಮತ್ತು ಇತರೆ ಜನಾಂಗಗಳಿಗೆ ಸೇರಿದ ವಿದ್ಯಾರ್ಥಿಗಳ ಪ್ರವೇಶ ಪ್ರಕ್ರಿಯೆಗೆ https://shp.karnataka.gov.in ಮೂಲಕ ಜುಲೈ 15ರೊಳಗೆ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಪಡುವಾರಹಳ್ಳಿಯಲ್ಲಿರುವ ಸಮಾಜ ಕಲ್ಯಾಣ ಇಲಾಖೆ ಕಚೇರಿ ಅಥವಾ ದೂ.ಸಂ.0821–2520910 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

05.7.2023 ಬುಧವಾರ, ಮಳೆ ನಕ್ಷತ್ರ: ಆರಿದ್ರಾ 22.06.2023ರಿಂದ 7.07.2023
ಶ್ರೀ ಶೋಭಕೃತ್ ನಾಮ ಸಂವತ್ಸರ, ಉತ್ತರಾಯಣ, ಗ್ರೀಷ್ಮ ಋತು, ಆಷಾಢ ಮಾಸ, ಕೃಷ್ಣ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಉಷಾ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಕತ್ತು ನೋವು, ಸೊಂಟ ನೋವು ತಪಾಸಣಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9.30ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ನೆಗಡಿ, ಸೀನು ಬರುವಿಕೆ, ಮೂಗು ಸೋರುವಿಕೆ, ತಲೆನೋವು/ತಲೆ ಬ್ಲಾಕ್ ಮತ್ತು ಬೆನ್ನುಮೂಳೆಯ ಅಸ್ವಸ್ಥತೆಗಳಿಗೆ ಪ್ರತ್ಯೇಕ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ, ಬೆಳಗ್ಗೆ 9 ಗಂಟೆಗೆ.
- **ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ, ಮಹಾರಾಣಿ ಮಹಿಳಾ ಕಲಾ ಕಾಲೇಜು:** ಬೆಳಗ್ಗೆ 10.30ಕ್ಕೆ ಸಾಂಸ್ಕೃತಿಕ ವೇದಿಕೆ ಉದ್ಘಾಟನಾ ಸಮಾರಂಭ, ಉದ್ಘಾಟನೆ: ಎಸ್‌ಬಿಐ ಮ್ಯಾನೇಜರ್ ರಾಘವೇಂದ್ರ ಬಲ್ಲಾಳ್, ಅಧ್ಯಕ್ಷತೆ: ಕಾಲೇಜು ಪ್ರಾಚಾರ್ಯ ಡಾ.ಬಿ.ವಿ.ವಸಂತಕುಮಾರ್, ಮಧ್ಯಾಹ್ನ 2.30ಕ್ಕೆ ಸಮಾರೋಪ ಸಮಾರಂಭ, ಬಹುಮಾನ ವಿತರಣೆ: ಇಂಡಿಯನ್ ಆಯಿಲ್ ಕಾರ್ಪೋರೇಷನ್ ನಿವೃತ್ತ ಹಿರಿಯ ವಿಭಾಗೀಯ ವ್ಯವಸ್ಥಾಪಕ ಮಹೇಶ್ ಎನ್.ಅರಸ್, ಅಧ್ಯಕ್ಷತೆ: ಪ್ರಾಚಾರ್ಯ ಡಾ.ಬಿ.ವಿ. ವಸಂತಕುಮಾರ್, ಸ್ಥಳ: ನಾಲ್ವಡಿ ಕೃಷ್ಣರಾಜ ಒಡೆಯರ್ ವೇದಿಕೆ, ಬೆಳಗ್ಗೆ 10.30ಕ್ಕೆ.
- **ಜೆಎಸ್‌ಎಸ್ ಶುಶ್ರೂಷ ಶಾಲೆ:** 35ನೇ ಸಾಲಿನ ಜಿಎನ್‌ಎಂ ವಿದ್ಯಾರ್ಥಿಗಳಿಗೆ ಜ್ಯೋತಿ ಬೆಳಗುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ, ಮುಖ್ಯ ಅತಿಥಿಗಳು: ಮೇಯರ್ ಶಿವಕುಮಾರ್, ಅಧ್ಯಕ್ಷತೆ: ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕ ಆರ್.ಮಹೇಶ್, ಗೌರವ ಅತಿಥಿಗಳು : ಜೆಎಸ್‌ಎಸ್ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕ ಡಾ.ಸಿ.ಪಿ.ಮಧು, ಫೋರ್ಟಿಸ್ ಆಸ್ಪತ್ರೆ ಶುಶ್ರೂಷ ವಿಭಾಗದ ಮುಖ್ಯಸ್ಥೆ ಶ್ರೀಮತಿ ಲತಾ ಸೋನಿಸ್, ಜೆಎಸ್‌ಎಸ್ ಆಸ್ಪತ್ರೆ ಶುಶ್ರೂಷ ಸೇವೆಗಳ ಮುಖ್ಯಾಧಿಕಾರಿ ಶ್ರೀಮತಿ ಜೆನೆಟ್ ಮಥಾಯಸ್, ಸ್ಥಳ: ಶ್ರೀ ರಾಜೇಂದ್ರ ಶತಮಾನೋತ್ಸವ ಭವನ, ಜೆಎಸ್‌ಎಸ್ ಆಸ್ಪತ್ರೆ, ಬೆಳಗ್ಗೆ 11ಕ್ಕೆ.
- **ಜೆಎಸ್‌ಎಸ್ ಮಹಾವಿದ್ಯಾಪೀಠ, ಜೆಎಸ್‌ಎಸ್ ವಾಕ್ ಮತ್ತು ಶ್ರವಣ ಸಂಸ್ಥೆ :** ಆಡಿಟೋರಿ ಪ್ರೊಸೆಸಿಂಗ್ ಇನ್ ಚಿಲ್ಡ್ರನ್: ಓವರ್‌ಕಮಿಂಗ್ ದಿ ಲಿಮಿಟೇಷನ್ಸ್ ಆಫ್ ಆನ್‌ಲೈನ್ ಟೀಚಿಂಗ್ ಕುರಿತು ಮೂರು ದಿನಗಳ ಕಾರ್ಯಾಗಾರ, ಮುಖ್ಯ ಅತಿಥಿಗಳು: ಸಾರ್ವಜನಿಕ ಶಿಕ್ಷಣ ಇಲಾಖೆ ಉಪನಿರ್ದೇಶಕ ಹೆಚ್.ಕೆ.ಪಾಂಡು, ಅಧ್ಯಕ್ಷತೆ: ಜೆಎಸ್‌ಎಸ್ ಮಹಾವಿದ್ಯಾಪೀಠದ ಶಾಲಾ ಶಿಕ್ಷಣ ವಿಭಾಗದ ನಿರ್ದೇಶಕ ಬಿ.ಎ. ರಾಜಶೇಖರ್, ಸ್ಥಳ: ಶ್ರೀ ರಾಜೇಂದ್ರ ಭವನ, ಎಂ.ಜಿ. ರಸ್ತೆ, ಬೆಳಗ್ಗೆ 11ಕ್ಕೆ.
- **ಶ್ರೀರಾಘವೇಂದ್ರಸ್ವಾಮಿ ಸೇವಾ ಸಮಿತಿ:** ಪಂಡಿತ್ ಬೇ.ನಾ.ವಿಜಯೇಂದ್ರಾಚಾರ್ ಅವರಿಂದ ಮಹಾಭಾರತ ಕುರಿತು ಪ್ರವಚನ, ಸ್ಥಳ: ಶ್ರೀ ರಾಘವೇಂದ್ರಸ್ವಾಮಿಗಳ ಮಠ, ಜಯಲಕ್ಷ್ಮಿಪುರಂ, ಸಂಜೆ 5 ರಿಂದ.
- **ಶ್ರೀ ನೃತ್ಯಾನಿಕೇತನ :** ನಾಟ್ಯಸೆಲ್ವಿ ಪ್ರಸನ್ನ ಲಕ್ಷ್ಮಿ ಕಳಾಧರ್ ಅವರ ನಿರ್ದೇಶನದಲ್ಲಿ ನೃತ್ಯ ಸಿಂಚನ ಭರತನಾಟ್ಯ ಮತ್ತು ಕೂಚುಪುಡಿ ನೃತ್ಯ ಪ್ರದರ್ಶನ, ಸ್ಥಳ: ರಮಾಗೋವಿಂದ ಕಲಾವೇದಿಕೆ, ಗಾನಭಾರತಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ, ಸಂಜೆ 6ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಜಿ.ಎಸ್.ಎಸ್. ಯೋಗದ ಮಾತು, ಪ್ರಸ್ತುತಿ–ಡಿ.ಶ್ರೀಹರಿ, 6.40 ಪದಸಂಸ್ಕೃತಿ, ಪ್ರಸ್ತುತಿ–ಡಾ.ಟಿ.ವಿ.ವೆಂಕಟಾಚಲಶಾಸ್ತ್ರಿ, 7.15 ಭಾವಗೀತೆ–ಮೈಸೂರು ಅನಂತಸ್ವಾಮಿ, ಸಿ.ಅಶ್ವಥ್, 9.05 ವಸುಧೈವ ಕುಟುಂಬಕಂ–ಭಾರತ ಜಿ20 ಶೃಂಗಸಭೆಯ ಅಧ್ಯಕ್ಷತೆ ವಹಿಸಿದ ಸಂದರ್ಭದಲ್ಲಿ ವಿಶೇಷ ಸರಣಿ ಕಾರ್ಯಕ್ರಮ, 9.10 ಮನೋನಂದನ–ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ ಪ್ರಾಯೋಜಿತ ಕಾರ್ಯಕ್ರಮ, 9.30 ಚಿತ್ರಗೀತೆ, 10.00 ಹಿಂದೂಸ್ಥಾನಿ ಸಂಗೀತ–ಪ್ರಭಾಕರ್ ದಾಖಡೆ–ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ನಿತಿನ್ ರಾಜಾರಾಂ ಶಾಸ್ತ್ರಿ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ಅಭಿವೃದ್ಧಿ ಯೋಜನೆಗಳನ್ನು ಕುರಿತ ಕಾರ್ಯಕ್ರಮ, 1.20 ಭಾವಗೀತೆಗಳು–ನಿತಿನ್ ರಾಜಾರಾಂಶಾಸ್ತ್ರಿ, 1.30 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 3.00 ಲಯ ಸಂಭ್ರಮ, ಪ್ರಸ್ತುತಿ–ಹೆಚ್.ಎಲ್.ಶಿವಶಂಕರಸ್ವಾಮಿ, 4.00 ಮಹಿಳಾ ರಂಗ–ಸ್ತ್ರೀ ಚೇತನ, ಪ್ರಸ್ತುತಿ–ಅಬ್ದುಲ್ ರಶೀದ್, 4.45 ಹಿಂದಿ ಪಾಠ–ಶಾಂತಾ ಡಿ.ಕಿಣಿ, 5.05 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.55 ಕೃಷಿರಂಗ–ಕಿಸಾನ್‌ವಾಣಿ, ದತ್ತು ಗ್ರಾಮ ಯೋಜನೆಯಿಂದ ಗ್ರಾಮೀಣ ಅಭಿವೃದ್ಧಿ ಕುರಿತು ಸಂವಾದ. ಭಾಗವಹಿಸುತ್ತಾರೆ ಡಾ.ಜಿ.ಎಸ್. ಯೋಗೀಶ್ ಹಾಗೂ ಎಂ. ಶಶಿಕುಮಾರ್, 9.30 ಹಿಂದೂಸ್ಥಾನಿ ಸಂಗೀತ, 10.00 ಜನಪದ ಸಂಗೀತ–ಭಾಗವಹಿಸುವವರು ಮೈಸೂರು ಜಿ. ಗುರುರಾಜ್ ಮತ್ತು ಸಂಗಡಿಗರು, 10.30 ಸವಿನೆನಪು

ಯಶೋಧರಪುರದಲ್ಲಿಂದು

ಹುಣಸೂರು ತಾಲೂಕು

- **ವಿದ್ಯಾವರ್ಧಕ ಕಾನೂನು ಕಾಲೇಜು, ಹೆಚ್.ಸಿ.ದಾಸಪ್ಪ ಸಾರ್ವಜನಿಕ ವಿಚಾರ ಸಂಸ್ಥೆ, ಮೈಸೂರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ವಿದ್ಯಾವಿಕಾಶ ಕಾನೂನು ಅಧ್ಯಯನ ಸಂಸ್ಥೆ:** ಆರೋಗ್ಯಕರ ಸಮಾಜಕ್ಕಾಗಿ ಆರೋಗ್ಯಕರ ಯುವಜನತೆ ಮತ್ತು ಗಾಂಧಿ–ಯಶೋಧರಮ್ಮ ದಾಸಪ್ಪದಕವತ್ತ ವಿಚಾರಗಳ ಪ್ರಸ್ತುತತೆ ಕುರಿತು ರಾಸೇಯೋ ವಾರ್ಷಿಕ ವಿಶೇಷ ಶಿಬಿರ, ರೈತ ಮುಖಂಡರಾದ ಶ್ರೀಮತಿ ಸುನಂದ ಜಯರಾಮ್ ಮತ್ತು ರೈತ ಮುಖಂಡ ಬೋರಯ್ಯರಿಂದ ಗ್ರಾಮೀಣ ಕೃಷಿ ಬದುಕು–ಸಮಸ್ಯೆ–ಪರಿಹಾರ ಕುರಿತು ಉಪನ್ಯಾಸ, ಅಧ್ಯಕ್ಷತೆ: ವಿಶ್ರಾಂತ ಪ್ರಾಚಾರ್ಯ ಪ್ರೊ.ವೀರಪ್ಪ, ಮುಖ್ಯ ಅತಿಥಿಗಳು: ಜಯರಾಮ್, ಡಾ.ಸಂಜಿತ, ಶ್ರೀನಿವಾಸ್, ಪಾಪಣ್ಣ, ಸ್ಥಳ: ಯಶೋಧರಪುರ, ಹುಣಸೂರು ತಾಲೂಕು ಸಂಜೆ 5 ಗಂಟೆಗೆ.

ಮೈಸೂರು ಸ್ಯಾಂಡಲ್ ಸೋಪ್ 'ಬ್ರ್ಯಾಂಡ್ ಮೌಲ್ಯ' ಹೆಚ್ಚಿಸಲು ಸಲಹೆಗಳಿಗೆ ಆಹ್ವಾನ



ಬೆಂಗಳೂರು, ಜು.4– ಮೈಸೂರು ಸ್ಯಾಂಡಲ್ ಸೋಪ್‌ನ ಬ್ರ್ಯಾಂಡ್ ಮೌಲ್ಯವನ್ನು ಮತ್ತಷ್ಟು ಹೆಚ್ಚಿಸುವ ಉದ್ದೇಶದಿಂದ ಉದ್ಯಮ ಪರಿಣಿತರಿಂದ ಸಲಹೆಗಳನ್ನು ಮುಕ್ತವಾಗಿ ಆಹ್ವಾನಿಸಲಾಗಿದೆ. ಆಸಕ್ತರು karnatakavision2030@gmail.comಗೆ ತಮ್ಮ ಸಲಹೆಗಳನ್ನು ಕಳಿಸಬಹುದು' ಎಂದು ಕೈಗಾರಿಕೆ ಸಚಿವ ಎಂ.ಬಿ.ಪಾಟೀಲ ತಿಳಿಸಿದ್ದಾರೆ.



ಈ ಬಗ್ಗೆ ಟ್ವೀಟ್ ಮಾಡಿರುವ ಅವರು, 'ಮಹಾರಾಜರಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಮೈಸೂರು ಸ್ಯಾಂಡಲ್ ಸೋಪ್ ಉತ್ಪನ್ನ ಆರಂಭಿಸಿದ್ದರು. ಅದು ರಾಜ್ಯದ ಮಕುಟಮಣಿಯ ಅನರ್ಘ್ಯ ರತ್ನವಾಗಿದೆ. ಅವರ ಆಶಯಕ್ಕೆ ತಕ್ಕಂತೆ ಈ ಹೆಜ್ಜೆ ಇಡಲು ತೀರ್ಮಾನಿಸಲಾಗಿದೆ. ಉದ್ಯಮಿಗಳು ಈ ನಿಟ್ಟಿನಲ್ಲಿ ಸೂಕ್ತ ಸಲಹೆಗಳನ್ನು ಕೊಟ್ಟು, ಸರ್ಕಾರದ ಪ್ರಯತ್ನಕ್ಕೆ ಕೈಜೋಡಿಸಬೇಕು' ಎಂದಿದ್ದಾರೆ. ಮೈಸೂರು ಸ್ಯಾಂಡಲ್ ಸೋಪ್ ರಾಜ್ಯದ ಸಾಬೂನು ಮಾರುಕಟ್ಟೆಯಲ್ಲೂ ಸಿಂಹಪಾಲು ಹೊಂದಿಲ್ಲ. ಅಲ್ಲದೆ, ಈ ಬ್ರ್ಯಾಂಡ್ ಉತ್ಪನ್ನವು ದಕ್ಷಿಣ ಭಾರತಕ್ಕಷ್ಟೇ ಸೀಮಿತವಾಗಿದೆ. ಮಾರುಕಟ್ಟೆಯಲ್ಲಿ ಉಳಿದ ಹೆಸರಿನ ಸಾಬೂನುಗಳು ಅತ್ಯಧಿಕ ಪ್ರಮಾಣದಲ್ಲಿ ಮಾರಾಟವಾಗುತ್ತಿವೆ. ಜೊತೆಗೆ ಒಟ್ಟು ವಹಿವಾಟಿನಲ್ಲಿ ಶೇ.3ರಷ್ಟು ಮಾತ್ರ ರಫ್ತು ವಹಿವಾಟಿನ ಮೂಲಕ ಬರುತ್ತಿದೆ. ಇದು ನಿಜಕ್ಕೂ ಬೇಸರದ ಸಂಗತಿ ಎಂದಿದ್ದಾರೆ.

ಇದು ಸ್ಪರ್ಧಾತ್ಮಕ ಮಾರುಕಟ್ಟೆಯ ಯುಗ. ನಮ್ಮ ಬಳಿ ಮೈಸೂರು ಸ್ಯಾಂಡಲ್ ಸೋಪ್‌ನಂಥ ಉತ್ಕೃಷ್ಟ ಉತ್ಪನ್ನ ವಿದ್ದೂ ನಾವು ಅವಕಾಶವನ್ನು ಬಳಸಿಕೊಳ್ಳುವಲ್ಲಿ ಸೋತಿದ್ದೇವೆ. ಈ ನಿರಾಶಾದಾಯಕ ಪರಿಸ್ಥಿತಿಯನ್ನು ನಿವಾರಿಸಲು ಸರ್ಕಾರ ಉತ್ಸುಕವಾಗಿದೆ. ಒಟ್ಟಿನಲ್ಲಿ ರಾಜ್ಯದ ಈ ಹೆಮ್ಮೆಯ ಉತ್ಪನ್ನಕ್ಕೆ ಮರುಜೀವ ತುಂಬಿ, ಮಾರುಕಟ್ಟೆಯನ್ನು ಸೃಷ್ಟಿಸಲು ಹಲವು ಉಪಕ್ರಮಗಳನ್ನು ಸದ್ಯದಲ್ಲೇ ಆರಂಭಿಸಲಾಗುವುದು ಎಂದು ಸಚಿವರು ಹೇಳಿದ್ದಾರೆ.

ಸಿಎಂ ತವರು ಜಿಲ್ಲೆಯಲ್ಲಿ ನಿಗಮ–ಮಂಡಳಿ ಸ್ಥಾನಮಾನಕ್ಕೆ ಆಕಾಂಕ್ಷಿಗಳ ಪೈಪೋಟಿ

ಮೈಸೂರು, ಜು.4(ಜಿಎ)–ರಾಜ್ಯದಲ್ಲಿ ನೂತನ ಕಾಂಗ್ರೆಸ್ ಸರ್ಕಾರ ಅಧಿಕಾರ ಹಿಡಿದ ನಂತರ ನಿಗಮ–ಮಂಡಳಿಗಳಿಗೆ ಅಧ್ಯಕ್ಷರು ಮತ್ತು ಸದಸ್ಯರಾಗುವ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಾಗುತ್ತಿದೆ. ಅದರಲ್ಲೂ ಮುಖ್ಯಮಂತ್ರಿಗಳ ತವರು ಜಿಲ್ಲೆ ಮೈಸೂರಲ್ಲಿ ಆಕಾಂಕ್ಷಿಗಳ ದೊಡ್ಡ ಪಟ್ಟಿಯೇ ಇದೆ.

ಸರ್ಕಾರ ರಚನೆಯಾದ ನಂತರ ಸಚಿವ ಸಂಪುಟದಲ್ಲಿ ಸೂಕ್ತ ಸ್ಥಾನಕ್ಕೆ ಶಾಸಕರು ಕಾಯುವುದು ವಾಡಿಕೆ. ಅದರಂತೆ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ದುಡಿದ ಪಕ್ಷದ ಕಾರ್ಯಕರ್ತರು, ಮುಖಂಡರು, ಮಾಜಿ ಶಾಸಕರು, ಪಾಲಿಕೆ ಸದಸ್ಯರು ಮತ್ತು ಚುನಾವಣೆಯಲ್ಲಿ ಟಿಕೆಟ್ ಕೈ ತಪ್ಪಿದವರು ರಾಜ್ಯದ ವಿವಿಧ ನಿಗಮ ಮಂಡಳಿಗಳಲ್ಲಿ ಸ್ಥಾನ ಗಿಟ್ಟಿಸಿಕೊಳ್ಳುವ ಕಸರತ್ತಿನಲ್ಲಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ, ಕೆಪಿಸಿಸಿ ಅಧ್ಯಕ್ಷರು ಹಾಗೂ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸುತ್ತೋಲೆ ಮೇರೆಗೆ ನಿಗಮ ಮಂಡಳಿಗಳ ಜಿಲ್ಲಾ ಹಾಗೂ ತಾಲೂಕು ಮಟ್ಟದ ವಿವಿಧ ಸಮಿತಿಗಳ ನಾಮನಿರ್ದೇಶನ ಸದಸ್ಯರು ಮತ್ತು ನಿರ್ದೇಶಕರಿಗೆ ಸಂಬಂಧಿಸಿದಂತೆ ಆಕಾಂಕ್ಷಿಗಳು ಪಕ್ಷದಲ್ಲಿ ತಾವು ಸಲ್ಲಿಸಿರುವ ಸೇವೆಯ ಸಂಕ್ಷಿಪ್ತ ಅಧಿಕೃತ ದಾಖಲೆಗಳೊಂದಿಗೆ ಅರ್ಜಿಯನ್ನು ತಮ್ಮ ವ್ಯಾಪ್ತಿಯ ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಿಗೆ ಸಲ್ಲಿಸಲು ಸೂಚಿಸಿದ್ದಾರೆ.

ಮೈಸೂರು ಜಿಲ್ಲೆಯ ವಿವಿಧ ತಾಲೂಕುಗಳಿಂದ ಈಗಾಗಲೇ ಅರ್ಜಿಗಳು ಸಲ್ಲಿಕೆಯಾಗುತ್ತಿದ್ದು, ಇತ್ತ ಜಿಲ್ಲಾ ಕಾಂಗ್ರೆಸ್ ಸಮಿತಿಗೆ ಈವರೆಗೂ 150 ಅರ್ಜಿಗಳು ಸಲ್ಲಿಕೆಯಾಗಿವೆ. ಅರ್ಜಿ ಸಲ್ಲಿಸಲು ಜು.15ರಂದು ಕಡೆಯ ದಿನವಾಗಿದ್ದು, ಜು.16ರಂದು ಅಂತಿಮವಾಗಿ ಒಟ್ಟು ಅರ್ಜಿಗಳ ಸಂಖ್ಯೆ ತಿಳಿಯುತ್ತದೆ. ನಂತರ ಈ ಅರ್ಜಿಗಳನ್ನು ಜಿಲ್ಲಾ ಅಧ್ಯಕ್ಷರು, ಜಿಲ್ಲಾ ಕಾಂಗ್ರೆಸ್ ಸಮಿತಿ ಪದಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವ ಸಮ್ಮುಖದಲ್ಲಿ ಪರಿಶೀಲಿಸಿ ಕೆಪಿಸಿಸಿ ಅಧ್ಯಕ್ಷರಿಗೆ ಅಂತಿಮ ಪಟ್ಟಿಯನ್ನು ಗೌಪ್ಯವಾಗಿ ಕಳುಹಿಸುವ ಪ್ರಕ್ರಿಯೆ ನಡೆಯಲಿದೆ. ಸದಸ್ಯರ ಆಯ್ಕೆ ಪ್ರಕ್ರಿಯೆ ಈ ರೀತಿ ನಡೆಯುತ್ತಿದ್ದು, ಮತ್ತೊಂದೆಡೆ ಅಧ್ಯಕ್ಷ ಸ್ಥಾನಕ್ಕಾಗಿ ತೀವ್ರ ಪೈಪೋಟಿ ನಡೆಯುತ್ತಿದೆ. ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ದುಡಿದ ಪಕ್ಷದ ಕಾರ್ಯಕರ್ತರು, ಮುಖಂಡರು, ಮಾಜಿ ಶಾಸಕರು, ಪಾಲಿಕೆ ಸದಸ್ಯರು ಮತ್ತು ಚುನಾವಣೆಯಲ್ಲಿ ಟಿಕೆಟ್ ಕೈ ತಪ್ಪಿದವರು ಮೈಸೂರು ಜಿಲ್ಲೆಯಿಂದಲ್ಲೇ ಮೈಸೂರು ನಗರಾಭಿವೃದ್ಧಿ, ಕರ್ನಾಟಕ ವಸ್ತು ಪ್ರದರ್ಶನ ಮತ್ತು ಮೃಗಾಲಯ ಪ್ರಾಧಿಕಾರ, ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್ ಹಾಗೂ ಚಾಮರಾಜನಗರದ ಜಂಗಲ್ ಅಂಡ್ ಲಾಡ್ಜ್ ರೆಸಾರ್ಟ್ ಸೇರಿದಂತೆ ವಿವಿಧ ನಿಗಮ ಮಂಡಳಿಗೆ 25ಕ್ಕೂ ಅಧಿಕ ಮಂದಿ ಈ ಪೈಪೋಟಿಯಲ್ಲಿದ್ದು, ಯಾರು ಅಧ್ಯಕ್ಷರಾಗುತ್ತಾರೆ ನೋಡಬೇಕಿದೆ.

ಕೆ.ಮರೀಗೌಡರಿಗೆ ಮುಡಾ ಅಧ್ಯಕ್ಷಗಾದಿ?



ಮೈಸೂರು, ಜು.4– ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷಗಾದಿ, ಮೈಸೂರು ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷ ಕೆ.ಮರೀಗೌಡರಿಗೆ ಒಲಿಯುವುದು ಖಚಿತ ಎಂದು ವಿಶ್ವಾಸಾರ್ಹ ಮೂಲಗಳು ತಿಳಿಸಿವೆ. ಚಾಮುಂಡೇಶ್ವರಿ ಕ್ಷೇತ್ರದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿದ್ದ ಮರೀಗೌಡರಿಗೆ ಕೊನೆ ಘಳಿಗೆಯಲ್ಲಿ ಟಿಕೆಟ್ ಕೈತಪ್ಪಿತ್ತು.

ಮುಖ್ಯಮಂತ್ರಿ ಸಿದ್ದರಾಮಯ್ಯನವರ ಆಪ್ತರೂ ಆದ ಕೆ.ಮರೀಗೌಡರು, ನಿಷ್ಠಾವಂತ ಕಾಂಗ್ರೆಸ್ ಮುಖಂಡರಾಗಿದ್ದು, ಅವರಿಗೆ ಸೂಕ್ತ ಸ್ಥಾನಮಾನ ಕಲ್ಪಿಸಬೇಕೆಂಬ ಒತ್ತಾಯವಿದೆ. ಹಾಗಾಗಿ ಅವರನ್ನು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರನ್ನಾಗಿ ನೇಮಿಸಲು ಸಿದ್ದರಾಮಯ್ಯನವರು ನಿರ್ಧರಿಸಿದ್ದಾರೆಂದು ಹೇಳಲಾಗುತ್ತಿದೆ.



"ಮುಡಾ ಅಧ್ಯಕ್ಷ ಸ್ಥಾನಕ್ಕೆ ಸಿಎಂ ಬಳಿ ಮನವಿ ಮಾಡಿದ್ದು ವಿಧಾನಸಭಾ ಕಲಾಪ ಮುಕ್ತಾಯವಾದ ನಂತರ ತಿಳಿಸುವುದಾಗಿ ವಿಶ್ವಾಸದ ಮಾತುಗಳನ್ನಾಡಿದ್ದಾರೆ.
–ರಾಕೇಶ್ ಪಾಪಣ್ಣ, ಜಿಲ್ಲಾ ಪಂಚಾಯತ್ ಮಾಜಿ ಸದಸ್ಯ

"ಮುಖ್ಯಮಂತ್ರಿ ಸಿದ್ದರಾಮಯ್ಯನವರು ಯಾರೆಲ್ಲಾ ಪಕ್ಷಕ್ಕಾಗಿ ದುಡಿದಿದ್ದಾರೆ ಎಂಬುದನ್ನು ಗಮನಿಸಿದ್ದಾರೆ. ಹಾಗಾಗಿ ಅವರೇ ಪಕ್ಷ ನಿಷ್ಠರಿಗೆ ಸೂಕ್ತ ಸ್ಥಾನಮಾನ ನೀಡಲಿದ್ದಾರೆ.
–ಕೆ.ಮರಿಗೌಡ, ಕೆಪಿಸಿಸಿ ಸದಸ್ಯ



"14 ವರ್ಷದಿಂದ ಪ್ರಧಾನ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸುತ್ತಿದ್ದು ಪಕ್ಷ ನನ್ನ ಸೇವೆ ಗುರುತಿಸಿ ಸ್ಥಾನಮಾನ ನೀಡುವ ಆಶಯವಿದೆ.
–ಎಂ.ಶಿವಣ್ಣ, ಪ್ರಧಾನ ಕಾರ್ಯದರ್ಶಿ, ಕಾಂಗ್ರೆಸ್



"ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಸ್ಥಾನಕ್ಕಾಗಿ ಮುಖ್ಯಮಂತ್ರಿಗಳ ಬಳಿ ಮನವಿ ಮಾಡಿದ್ದೇನೆ. ಅವರು ಸಕಾರಾತ್ಮಕವಾಗಿ ಸ್ಪಂದಿಸಿದ್ದು, ಸ್ಥಾನ ನೀಡುವ ಭರವಸೆ ಇದೆ. –ಕೃಷ್ಣಕುಮಾರ್ ಸಾಗರ್, ಪ್ರಧಾನ ಕಾರ್ಯದರ್ಶಿ, ಕೆಪಿಸಿಸಿ



"ಕಳೆದ ಬಾರಿ ಮೈಸೂರು ಪೇಂಟ್ಸ್ ಅಂಡ್ ವಾರ್ನಿಷ್‌ಗೆ ಅಧ್ಯಕ್ಷನಾಗಿ ಮಾಡಿದ್ದರು. ಈ ಬಾರಿ ಯಾವುದೇ ಅರ್ಜಿ ಸಲ್ಲಿಸಿಲ್ಲ ಮತ್ತು ಬೇಡಿಕೆ ಇಟ್ಟಿಲ್ಲ. ಮುಖ್ಯಮಂತ್ರಿಗಳು ನಮ್ಮ ಜಿಲ್ಲೆಯವರೇ ಆಗಿರುವುದರಿಂದ ಅವರೇ ನಿರ್ಧರಿಸುತ್ತಾರೆ. ಆದರೆ, ಪಕ್ಷ ನನ್ನ ಕೆಲಸ ಕಾರ್ಯ ಪರಿಗಣಿಸುವ ನಿರೀಕ್ಷೆಯಿದೆ. –ಎಚ್.ಎ.ವೆಂಕಟೇಶ್, ಕಾಂಗ್ರೆಸ್ ವಕ್ತಾರ



"ನಾನು ಯಾವುದೇ ಸ್ಥಾನದ ಆಕಾಂಕ್ಷಿಯಲ್ಲ. ವಿಧಾನಸಭೆಗೆ ಟಿಕೆಟ್ ಕೈತಪ್ಪಿದ್ದಕ್ಕೆ ಬೇಸರವಿದೆ. ಆದರೆ, ಪಕ್ಷದ ಹಿರಿಯರ ಸೂಚನೆಯಂತೆ ನಿಷ್ಠೆಯಿಂದ ದುಡಿದಿದ್ದೇನೆ. ಅದನ್ನು ಗುರುತಿಸಿ ಪಕ್ಷ ನೀಡುವ ಜವಾಬ್ದಾರಿಯನ್ನು ನಿರ್ವಹಿಸುತ್ತೇನೆ. ಮಹಿಳೆಯರಿಗೆ ಸೂಕ್ತ ಅವಕಾಶ ನೀಡಬೇಕು. –ಡಾ.ಪುಷ್ಪಾ ಅಮರನಾಥ್, ರಾಜ್ಯ ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ



"ನಾನು ಯಾವುದೇ ಬೇಡಿಕೆ ಇಟ್ಟಿಲ್ಲ. ಆದರೆ, ಮೈಸೂರು ಭಾಗದಲ್ಲಿ ಈ ಬಾರಿ ಲಿಂಗಾಯಿತ ಸಮುದಾಯದವರಿಗೆ ಟಿಕೆಟ್ ನೀಡಿಲ್ಲ. ನನಗೂ ಟಿಕೆಟ್ ಕೈತಪ್ಪಿದೆ. ಆದರಿಂದ ನಾನು ಲಿಂಗಾಯಿತ ಸಮುದಾಯದ ಯುವಕನಾಗಿರುವುದರಿಂದ ಯಾವುದೇ ಜವಾಬ್ದಾರಿ ನೀಡಿದರೂ ನಿಭಾಯಿಸುತ್ತೇನೆ. –ಪ್ರದೀಪ್‌ಕುಮಾರ್, ಕಾಂಗ್ರೆಸ್ ಮುಖಂಡ

ನಕ್ಕರೆ ಅದೇ ಸ್ವರ್ಗ

ಮಗು : ಒಂದು ಕಥೆ ಹೇಳಮ್ಮಾ?
ತಾಯಿ : ಇರು, ನಿಮ್ಮ ಅಪ್ಪ ಬಂದ್ರು. ಯಾಕ್ ಲೇಟ್ ಅಂಥ ಕೇಳೋಣ. ಅವರೇ ಕಥೆ ಹೇಳ್ತಾರೆ.

ಮೈಸೂರು ಮಿತ್ರ

ಬುಧವಾರ, 5 ಜುಲೈ 2023

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನೀತಿ ಎಂಬುದು ವ್ಯಕ್ತಿಗತವಾದ ಬಹು ಬೆಲೆಯುಳ್ಳ ವಸ್ತು –ಆಡಮ್ಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ದುರ್ಯೋಧನನಿದ್ದಲ್ಲಿ ಕೌರವನ ಬಳಗಕ್ಕೆ ಕೊರತೆಯೇ?

ನಿಮ್ಮ ಪತ್ರಗಳು

ಗ್ಯಾರಂಟಿಗಳಿಗೇಕೆ ಷರತ್ತು...?

ಮಾನ್ಯರೆ,

ಚುನಾವಣೆ ಪೂರ್ವದಲ್ಲಿ ಐದು ಗ್ಯಾರಂಟಿ ಯೋಜನೆಗಳನ್ನು ಗ್ಯಾರಂಟಿಯಾಗಿ ಜಾರಿಗೊಳಿಸುತ್ತೇವೆ ಎಂದು ಕಾಂಗ್ರೆಸ್ ಹೇಳಿತ್ತು. ಆದರೆ ಗೆದ್ದ ಮೇಲೆ ಗ್ಯಾರಂಟಿ ಯೋಜನೆಗಳಿಗೆ ನಿಬಂಧನೆಗಳನ್ನು ಹೇರಿ ಜನರಿಗೆ ಮಂಕು ಬೂದಿ ಎರಚುವ ಕೆಲಸ ಮಾಡುತ್ತಿದೆ. ಈ ಕೂಡಲೇ ಸಿದ್ದರಾಮಯ್ಯ ಅವರ ಸರ್ಕಾರ ಗ್ಯಾರಂಟಿ ಯೋಜನೆಗಳಲ್ಲಿ ಇರುವಂತಹ ಎಲ್ಲ ಸಮಸ್ಯೆಗಳನ್ನು ನಿವಾರಿಸಿ ಎಲ್ಲರಿಗೂ ಅವಕಾಶ ಕಲ್ಪಿಸಬೇಕು.

ಚುನಾವಣೆಗೂ ಮೊದಲು ನೀವು ನೀಡಿದ ಆಶ್ವಾಸನೆಗಳಲ್ಲಿ ಶಕ್ತಿ ಯೋಜನೆ ಬಿಟ್ಟರೆ ಉಳಿದೆಲ್ಲವೂ ಗೊಂದಲದ ಗೂಡಾಗಿದೆ. 2000 ರೂ. ಪ್ರತಿ ಮನೆಯ ಯಜಮಾನಿಗೆ ನೀಡುತ್ತೇನೆ ಎಂದು ಹೇಳಿದ್ದೀರಿ. ಆದರೆ ಗೆದ್ದ ಬಳಿಕ ವಿಪರೀತ ನಿಯಮಗಳನ್ನು ಮಾಡಿ, ಜನರನ್ನು ಸರದಿ ಸಾಲಿನಲ್ಲಿ ನಿಂತು ಬಳಲುವಂತೆ ಮಾಡುತ್ತಿದ್ದೀರಿ. ಅಲ್ಲದೇ ಪ್ರತಿ ಮನೆಗೂ 200 ಯೂನಿಟ್ ಉಚಿತವಾಗಿ ವಿದ್ಯುತ್ ನೀಡುತ್ತೇವೆ ಎಂದು ಹೇಳಿದ್ದೀರಿ. ಅದರಲ್ಲೂ ಕೆಲವು ಷರತ್ತುಗಳನ್ನು ವಿಧಿಸಿ ತೊಂದರೆ ನೀಡುತ್ತಿದ್ದೀರಿ.

ಪ್ರತಿಯೊಬ್ಬ ಪದವೀಧರ ನಿರುದ್ಯೋಗಿಗಳಿಗೂ ನಿರುದ್ಯೋಗ ಭತ್ಯೆ ನೀಡುತ್ತೇವೆ ಎಂದು ಹೇಳಲಾಗಿತ್ತು. ಆದರೆ 2022–23ನೇ ಸಾಲಿನಲ್ಲಿ ತೇರ್ಗಡೆ ಹೊಂದಿದವರಿಗೆ ಮಾತ್ರ ಎಂದು ಷರಾ ಬರೆಯಲಾಗಿದೆ. ಎಲ್ಲಾ ಪದವೀಧರ ನಿರುದ್ಯೋಗಿಗಳನ್ನು ಒಂದೇ ತಕ್ಕಡಿಯಲ್ಲಿ ಏಕೆ ತೂಗಬಾರದು? ಮಲತಾಯಿ ಧೋರಣೆ ಅನುಸರಿಸುವುದು ಎಷ್ಟರ ಮಟ್ಟಿಗೆ ಸರಿ?

10 ಕೆಜಿ ಅಕ್ಕಿ ವಿಚಾರಕ್ಕೆ ಬರುವುದಾದರೇ, ಈ ಮೊದಲು 10 ಕೆಜಿ ಅಕ್ಕಿ ಉಚಿತವಾಗಿ ನೀಡುವುದಾಗಿ ಘೋಷಣೆ ಮಾಡಿದ್ದೀರಿ. ಕೇಂದ್ರ ಸರ್ಕಾರ ನೀಡುವ 5 ಕೆ.ಜಿ ಅಕ್ಕಿಯನ್ನು ಒಳಗೊಂಡಿದೆ ಎಂದು ಹೇಳಿರಲಿಲ್ಲ. ಅಂದರೆ ಕೇಂದ್ರದ 5 ಕೆ.ಜಿ ಹಾಗೂ ಈ ಸರ್ಕಾರದ 10 ಕೆ.ಜಿ ಸೇರಿ ಒಟ್ಟಾರೆ 15 ಕೆ.ಜಿ ಅಕ್ಕಿ ವಿತರಣೆ ಮಾಡ ಬೇಕಿತ್ತು. ಈಗ ಕೆಜಿಗೆ 34 ರೂ. ನೀಡುತ್ತೇವೆ ಎಂದಿದ್ದೀರಿ. ಆದರೆ ಮಾರುಕಟ್ಟೆಯಲ್ಲಿ ಅಕ್ಕಿ ಬೆಲೆ ಒಂದು ಕೆಜಿಗೆ 54 ರೂ. ಇದೆ. ಆದರೆ ಈಗ 34 ರೂ, ಮಾತ್ರ ನೀಡುತ್ತಿದ್ದೀರಿ. ಸರ್ಕಾರ ಎಲ್ಲಾ ವಿಚಾರಗಳನ್ನು ಸ್ಪಷ್ಟವಾಗಿ ಜನರಿಗೆ ಮನದಟ್ಟು ಮಾಡಬೇಕು. ಜೊತೆಗೆ ಅರೆ ಸರ್ಕಾರಿ ಉದ್ಯೋಗಿಗಳ ನೇಮಕಾತಿಯೂ, ಹೊರಗುತ್ತಿಗೆ ಹೆಸರಲ್ಲಿ ಉಳ್ಳವರ ಪಾಲಾಗದೇ ಪಾರದರ್ಶಕ ನೇಮಕಾತಿ ಆಗಬೇಕಿದೆ.

– ಕೂಡ್ಲೂರು ಶ್ರೀಧರ್ ಮೂರ್ತಿ, ಮೈಸೂರು.

'ಸರ್ವ ಜನಾಂಗದ ಶಾಂತಿಯ ತೋಟ'

ಮಾನ್ಯರೆ,

'ಸರ್ವ ಜನಾಂಗದ ಶಾಂತಿಯ ತೋಟ' ಕುವೆಂಪುರವರು ಕೊಟ್ಟ ಅಮೂಲ್ಯವಾದ ವಾಕ್ಯವಿದು. ಅವರು ಬರೆದಿರುವ ಜಯ ಹೇ ಕರ್ನಾಟಕ ಮಾತೆ ಪದ್ಯದಲ್ಲಿನ ಒಂದು ಸಾಲು. ಇದಕ್ಕೆ ಸಮನಾಗಿ ಅರ್ಥ ಕೊಡುವ ವಾಕ್ಯ ಬಹುಶಃ ಯಾವ ಸಾಹಿತ್ಯದಲ್ಲೂ ಕಾಣಸಿಗದು. ಇದೊಂದು ಸರಳ ಪದಗಳ ಗುಚ್ಛವಾದರೂ ಅರ್ಥವು ಅತ್ಯದ್ಭುತ. ರಾಜಕೀಯ ಗಣ್ಯರು ಸದನ, ಸಭೆ ಸಮಾರಂಭಗಳಲ್ಲಿ ಆಗಾಗ್ಗೆ ಈ ವಾಕ್ಯವನ್ನು ಮಂತ್ರದ ರೀತಿ ಪ್ರಯೋಗಿಸುವರು (ಅವರ ಉದ್ದೇಶವೂ ಅದೇ ಆಗಿರುವುದರಿಂದ). ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಸಮಬಾಳು, ಸಮಪಾಲು ಮುಖ್ಯವಾಗುವುದು. ಸರ್ವಜನಾಂಗದ ಶಾಂತಿಯ ತೋಟದಲ್ಲಿನ ಎಲ್ಲಾ ಗಿಡಮರಗಳಿಗೂ ಸಮೃದ್ಧವಾಗಿ ತಾರತಮ್ಯ ಇಲ್ಲದೆ ಗೊಬ್ಬರವಿಟ್ಟು ನೀರುಣಿಸಿದಾಗ ಮಾತ್ರ ಶಾಂತಿಯ ತೋಟವಾಗುವುದು, ಇಲ್ಲವಾದಲ್ಲಿ ಕೆಲವು ಗಿಡಮರಗಳು ಸಮರ್ಪಕವಾಗಿ ಫಲ ನೀಡವು. ಸಮಾಜವೂ ಹಾಗೆಯೇ, ಸರ್ವೇಜನ ಸುಖಿನೋ ಭವಂತು ನಿರಾಮಯಾಃ, ಎಲ್ಲರೂ ಸುಖಿಗಳಾಗಿ, ನಿರೋಗಿಗಳಾಗಿ ಮಂಗಲವನ್ನೇ ಹೊಂದಿ ದುಃಖಿಗಳಾಗದಿದ್ದರೆ ಮಾತ್ರ ಸಮಾಜ ಸರ್ವಜನಾಂಗದ ಶಾಂತಿ ತೋಟವಾಗುವುದು. ಕುವೆಂಪುರವರ ಶಾಂತಿಯ ಮಂತ್ರವನ್ನು ಜಪಿಸಿದರಷ್ಟೇ ಸಾಲದು ಜಾರಿ ಆಗಬೇಕು.

–ಮಿರ್ಲೆ ಚಂದ್ರಶೇಖರ, ಲೇಖಕರು, ಮೈಸೂರು.

ಕೆ.ಆರ್. ಕ್ಷೇತ್ರದ ಶಾಸಕರಲ್ಲಿ ಮನವಿ

ಮಾನ್ಯರೆ,

ಈ ಹಿಂದೆ ಮೈಸೂರು ನಗರ ಸಾರಿಗೆ ಬಸ್ ರೂಟ್ ನಂ. 10 ಜೆ.ಪಿ.ನಗರ ಮಾರ್ಗವಾಗಿ ಚಾಮುಂಡಿಪುರಂ, ರಾಮಸ್ವಾಮಿ ವೃತ್ತ, ರೈಲು ನಿಲ್ದಾಣ, ಒಂಟಿಕೊಪ್ಪಲು, ವಿಜಯನಗರ 2ನೇ ಹಂತ, ಲಕ್ಷ್ಮೀಕಾಂತನಗರ ಮಾರ್ಗವಾಗಿ ಹೆಬ್ಬಾಳು ಕೈಗಾರಿಕಾ ಬಡಾವಣೆಗೆ ಸಂಚರಿಸುತ್ತಿತ್ತು. ಇದರಿಂದ ರೈಲು ನಿಲ್ದಾಣಕ್ಕೆ ತೆರಳುವವರಿಗೆ ವಿದ್ಯಾರ್ಥಿಗಳಿಗೆ, ಗಾರ್ಮೆಂಟ್ಸ್ ಕಾರ್ಮಿಕರಿಗೆ, ಹಿರಿಯ ನಾಗರಿಕರಿಗೆ ಅನುಕೂಲವಾಗಿತ್ತು. ಹಾಗೂ ಮಾರ್ಗ ಸಂಖ್ಯೆ 11ಎಫ್ ವಿಕ್ರಾಂತ್ ಕಾರ್ಖಾನೆಯಿಂದ ಜೆ.ಪಿ.ನಗರಕ್ಕೆ ನೇರವಾಗಿ ಸಂಚರಿಸುತ್ತಿತ್ತು. ಈ ಬಸ್‌ಗಳಿಂದ ಜನರಿಗೆ ಹಣ ಮತ್ತು ಸಮಯದ ಉಳಿತಾಯವಾಗುತ್ತಿತ್ತು. ಕೋವಿಡ್ ಸಮಯದಲ್ಲಿ ಇವುಗಳ ಸಂಚಾರವನ್ನು ರದ್ದುಗೊಳಿಸಲಾಗಿದೆ. ಶಾಸಕರು ಸಾರಿಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ಮತ್ತೆ ಈ ಬಸ್ಸುಗಳ ಮರು ಸಂಚಾರಕ್ಕೆ ಅನುವು ಮಾಡಿಕೊಡಬೇಕು ಎಂದು ಮನವಿ.

–ನೊಂದ ವಿದ್ಯಾರ್ಥಿಗಳು, ಮೈಸೂರು.

ಕಾಂಗ್ರೆಸ್ಸಿಗೆ ವಕ್ತಾರರು ಯಾರು?


ಮಾನ್ಯರೇ,

ಉಚಿತ ಕೊಡುಗೆಗಳನ್ನು ಮುಂದಿಟ್ಟುಕೊಂಡು ಅಧಿಕಾರಕ್ಕೆ ಬಂದಿರುವ ಸಿದ್ದರಾಮಯ್ಯ ಅವರ ಸರ್ಕಾರ ಬಂದಾಗಿನಿಂದಲೂ ಅವರ ಭಾಗ್ಯಗಳನ್ನು ಜನರಿಗೆ ತಲುಪಿಸಲು ಹರಸಾಹಸ ಪಡುತ್ತಿದ್ದಾರೆ. ಅವರ ಜನಪರ ಕೆಲಸಗಳಿಗೆ ನನ್ನ ಅಭಿನಂದನೆಗಳು.

ಸಮಸ್ಯೆ ಏನಾಗುತ್ತಿದೆ ಎಂದರೆ ಅವರ ಕಾರ್ಯಕ್ರಮ ಹಾಗೂ ಸವಲತ್ತುಗಳನ್ನು ಹೇಗೆ ಜಾರಿ ತರುತ್ತಾರೆ ಎಂದು ಜನರಿಗೆ ತಿಳಿಸಲು ಒಬ್ಬ ವಕ್ತಾರರ ಅವಶ್ಯಕತೆ ಇದೆ ಎಂದು ನನ್ನ ಅಭಿಪ್ರಾಯ. ಏಕೆಂದರೆ ಒಂದೇ ವಿಷಯ ಅಥವಾ ಭಾಗ್ಯಗಳ ಜಾರಿಯ ಬಗ್ಗೆ ಅವರ ಪಕ್ಷದಲ್ಲಿ ಇರುವ ಎಲ್ಲಾ ಸಚಿವರು ಸಂಬಂಧ ಪಡದ ಶಾಸಕರು ಹಾಗೂ ಸರಕಾರಿ ಅಧಿಕಾರಿಗಳು ತಮಗೆ ಇಷ್ಟ ಬಂದ ರೀತಿಯಲ್ಲಿ ವ್ಯಾಖ್ಯಾನಿಸುತ್ತಿದ್ದಾರೆ.

ಮಾನ್ಯ ಮುಖ್ಯಮಂತ್ರಿಗಳಲ್ಲಿ ಜನತೆಯ ಪರವಾಗಿ ನನ್ನ ವಿನಂತಿ ಏನೆಂದರೆ ಸರ್ಕಾರದ ಪರವಾಗಿ ಯಾವುದೇ ಘೋಷಣೆ ಅಥವಾ ಸಂದೇಶ ರವಾನೆ ಮಾಡುವುದಿದ್ದರೆ ದಯವಿಟ್ಟು ನೀವು ಅಥವಾ ವಕ್ತಾರನ ಮುಖಾಂತರ ಜನರಿಗೆ ತಿಳಿಸಿ. ಹೀಗೇ ಒಬ್ಬೊಬ್ಬರು ಒಂದೊಂದು ರೀತಿಯಲ್ಲಿ ಹೇಳಿಕೆ ನೀಡಿ ಜನತೆಯನ್ನೂ ಅನ್ಯಥಾ ದಾರಿ ತಪ್ಪಿಸುವ ಕೆಲಸ ಮಾಡಬೇಡಿ. ಈ ರೀತಿ ಹೇಳಿಕೆಗಳಿಂದ ಅನಕ್ಷರಸ್ಥರು ಹಾಗೂ ಈ ಆನ್‌ಲೈನ್ ವಿಷಯ ಗೊತ್ತಿಲ್ಲದ ಜನರು ಅಲ್ಲಿ ಇಲ್ಲಿ ಅಲೆದು ಅಲೆದು ತೊಂದರೆಗೆ ಒಳಗಾಗುತ್ತಿದ್ದಾರೆ. ಮುಂದಾದರೂ ಇದರ ಬಗ್ಗೆ ನಿಗಾ ವಹಿಸಲು ಸೂಚನೆ ನೀಡಿ.

–ರಾಘವೇಂದ್ರ, ಸಾಮಾಜಿಕ ಕಾರ್ಯಕರ್ತ, ಕುವೆಂಪುನಗರ



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು

ಸಂಸ್ಕೃತಿ ಚಿಂತನಾ

ಕೃಷ್ಣ ಕರ್ಣಾಮೃತ

ಲೀಲಾಶುಕ ಎಂಬ ಕವಿಯು ರಚಿಸಿರುವ ಕೃಷ್ಣ ಕರ್ಣಾಮೃತ ಎಂಬ ಕಾವ್ಯವು ಭಕ್ತರಿಗೆ ಅತ್ಯಂತ ಪ್ರಿಯವಾದ ಸಂಸ್ಕೃತ ಭಾಷೆಯ ಕೃತಿ. ಇದನ್ನು ರಚಿಸಿದ ಲೀಲಾಶುಕನು ಯಾವ ಪ್ರದೇಶಕ್ಕೆ ಸೇರಿದವನು, ಯಾವ ಶತಮಾನದಲ್ಲಿ ಜೀವಿಸಿದ್ದನು ಎಂಬುದು ಅಜ್ಞಾತವಾಗಿಯೇ ಉಳಿದಿದೆ. ಇದರ ಮೊದಲನೆಯ ಪದ್ಯವು ಹೀಗಿದೆ –

ಚಿಂತಾಮಣಿರ್ಜಯತಿ
ಸೋಮಗಿರಿರ್ಗುರುರ್ಮೇ
ಶಿಕ್ಷಾಗುರುಶ್ಚ ಭಗವಾನ್ ಶಿಖಿಪಿಂಛಮೌಲಿಃ।
ಯತ್ಪಾದಕಲ್ಪತರುಪಲ್ಲವ ಶೇಖರೇಷು
ಲೀಲಾಸ್ವಯಂವರರಸಂ ಲಭತೇ ಜಯಶ್ರೀಃ॥

(ಎಲ್ಲಾ ವಸ್ತುಗಳನ್ನು ಕೊಡುವ ಚಿಂತಾಮಣಿಯಂತಿರುವ ನನ್ನ ಗುರು ಸೋಮಗಿರಿ, ವಿದ್ಯಾಗುರುವೇ ಆಗಿರುವ, ನವಿಲುಗರಿಯನ್ನು ತಲೆಯ ಮೇಲೆ ಧರಿಸಿರುವ ಭಗವಾನ್ ಶ್ರೀಕೃಷ್ಣ – ಇವರು ಜಯಶಾಲಿಗಳು. ಅವರ ಪಾದಗಳು ಕಲ್ಪವೃಕ್ಷದ ಚಿಗುರುಗಳಂತೆ ಇವೆ. ಅವುಗಳ ಮೇಲೆ ಜಯಲಕ್ಷ್ಮಿಯು ಲೀಲಾಸ್ವಯಂವರರಸವನ್ನು ಅನುಭವಿಸುತ್ತಿದ್ದಾಳೆ)

ಇದರಿಂದ ಕವಿ ಲೀಲಾಶುಕನ ಗುರುವಿನ ಹೆಸರು ಸೋಮಗಿರಿ ಎಂಬುದು ಸ್ಪಷ್ಟ. ಈ ಕವಿಯು ಮೊದಲು ಯಾರೋ ರಾಜರ ಅಥವಾ ಶ್ರೀಮಂತರ ಸೇವೆಯಲ್ಲಿದ್ದು ಅದಕ್ಕಾಗಿ ಪಶ್ಚಾತ್ತಾಪ ಪಟ್ಟು ಭಗವಂತ ಶ್ರೀಕೃಷ್ಣನ ಭಕ್ತನಾಗಿ ಅವನ ಸೇವೆಯನ್ನು ಮಾಡಿದನೆಂದು ಎರಡನೆಯ ಆಶ್ವಾಸದ ನಾಲ್ಕನೆಯ ಪದ್ಯದಿಂದ ತಿಳಿದುಬರುತ್ತದೆ. ಆ ಪದ್ಯ ಹೀಗಿದೆ–

ಮಾತರ್ನಾತಃ ಪರಮನುಚಿತಂ
ಯತ್ಖಲಾನಾಂ ಪುರಸ್ತಾದ್
ಅಸ್ತಾಶಂಕಂ ಜಠರಪಿಠರೀಪೂರ್ತಯೇ
ನರ್ತಿತಾಸಿ।
ತತ್ ಕ್ಷಂತವ್ಯಂ ಸಹಜಸರಲೇ
ವತ್ಸಲೇ ವಾಣಿ ಕುರ್ಯಾಂ
ಪ್ರಾಯಶ್ಚಿತ್ತಂ ಗುಣಗಣನಯಾ
ಗೋಪವೇಷಸ್ಯ ವಿಷ್ಣೋಃ॥

(ತಾಯಿ, ಸರಸ್ವತಿ, ದುಷ್ಟ ಜನರ ಮುಂದೆ ನಿನ್ನನ್ನು ಲಜ್ಜಾರಹಿತನಾಗಿ ನನ್ನ ಹೊಟ್ಟೆಯೆಂಬ ಗುಡಾಣವನ್ನು ತುಂಬಿಸಲು ಕುಣಿಸಿದೆನು. ಇದಕ್ಕಿಂತ ದೊಡ್ಡ ಅನುಚಿತ ಕಾರ್ಯ ಏನಿದೆ? ಅದನ್ನು ಕ್ಷಮಿಸು. ಈಗ ಗೋಪವೇಷವನ್ನು ಧರಿಸಿದ ವಿಷ್ಣುವಿನ ಗುಣಗಣಗಳನ್ನು ಹೊಗಳಿ ಪ್ರಾಯಶ್ಚಿತ್ತವನ್ನು ಮಾಡಿಕೊಳ್ಳುತ್ತಿದ್ದೇನೆ.)

ಕೃಷ್ಣ ಕರ್ಣಾಮೃತದಲ್ಲಿ ಆಶ್ವಾಸಗಳೆಂಬ ಮೂರು ಭಾಗಗಳಿವೆ. ಒಟ್ಟು ಮುನ್ನೂರಿಪ್ಪತ್ತೆಂಟು ಸುಂದರ ಪದ್ಯಗಳು ಈ ಕಾವ್ಯದಲ್ಲಿವೆ. ಎಲ್ಲವೂ ಮುಕ್ತಕ ಪದ್ಯಗಳಂತೆ ಸ್ವತಂತ್ರವಾಗಿರುವುದರಿಂದ ಜನಪ್ರಿಯವಾಗಿವೆ. ಕವಿ ಲೀಲಾಶುಕನು ಕೃಷ್ಣಭಕ್ತನಾದರೂ ಅವನಿಗೆ ಶಿವನಲ್ಲೂ ಭಕ್ತಿಯಿತ್ತು. ಅವನ ಒಂದು ಪದ್ಯವಿಂತಿದೆ–

ಸಂಸಾರೇ ಕಿಂ ಸಾರಂ?
ಕಂಸಾರೇಶ್ಚರಣಕಮಲಪರಿಭಜನಮ್।
ಜ್ಯೋತಿಃ ಕಿಮಂಧಕಾರೇ?
ಯದಂಧಕಾರೇರನುಸ್ಮರಣಮ್॥

(ಸಂಸಾರದಲ್ಲಿ ಸಾರ ಯಾವುದು? ಕಂಸಾರಿ (ಕಂಸನ ಶತ್ರುವಾಗಿದ್ದ ಕೃಷ್ಣನ) ಪಾದಕಮಲಗಳ ಸೇವೆ. ಅಂಧಕಾರದಲ್ಲಿ ಯಾವುದು ಬೆಳಕು? ಅಂಧಕಾರಿಯ (ಅಂಧಕಾಸುರನ ಶತ್ರುವಾದ ಶಿವನ ಸ್ಮರಣೆ). ಇದರಿಂದ ಅವನು ಹರಿಯ ಮತ್ತು ಹರನ ಸಮಾನ ಭಕ್ತ ಎಂಬುದು ಸ್ಪಷ್ಟ. ಕವಿಯು ತನ್ನ ಹೆಸರನ್ನು ಒಂದನೆಯ ಆಶ್ವಾಸದ ಕೊನೆಯ ಪದ್ಯದಲ್ಲಿ ಹೇಳಿದ್ದಾನೆ–

ಈಶಾನದೇವಚರಣಾಭರಣೇನ ನೀವೀ–
ದಾಮೋದರಸ್ಥಿರಯಶಃ ಸ್ತಬಕೋದ್ಗಮೇನ।
ಲೀಲಾಶುಕೇನ ರಚಿತಂ ತವ ದೇವ ಕೃಷ್ಣ
ಕರ್ಣಾಮೃತಂ ವಹತು ಕಲ್ಪ ಶತಾಂತರೇಽಪಿ॥

(ಈಶಾನದೇವನ ಚರಣಗಳಿಗೆ ಆಭರಣನಾಗಿರುವ ದಾಮೋದರ ಕೃಷ್ಣನ ಸ್ಥಿರವಾದ ಕೀರ್ತಿಯ ಹೂಗೊಂಚಲಿನಿಂದ ಹುಟ್ಟಿರುವ, ಲೀಲಾಶುಕನಿಂದ ರಚಿತವಾದ ಶ್ರೀ ಕೃಷ್ಣ ಕರ್ಣಾಮೃತವು ಕಲ್ಪಾಂತರಗಳಲ್ಲಿ ಸದಾ ಹರಿಯುತ್ತಿರಲಿ)

ಕೃಷ್ಣ ಕರ್ಣಾಮೃತದ ಪದ್ಯಗಳಲ್ಲಿ ಕೆಲವು ತುಂಬ ಜನಪ್ರಿಯವಾಗಿ ಎಲ್ಲರ ನಾಲಗೆಯ ಮೇಲೆ ನಲಿಯುತ್ತಿವೆ. ಅವುಗಳಲ್ಲೊಂದು–

ಕರಾರವಿಂದೇನ ಪದಾರವಿಂದಂ
ಮುಖಾರವಿಂದೇ ವಿನಿವೇಶಯಂತಮ್ ।
ವಟಸ್ಯ ಪತ್ರಸ್ಯ ಪುಟೇ ಶಯಾನಂ
ಬಾಲಂ ಮುಕುಂದಂ ಮನಸಾ ಸ್ಮರಾಮಿ॥

(ಕೈಯೆಂಬ ತಾವರೆಯಿಂದ ಅಡಿದಾವರೆಯನ್ನು ಮೊಗದಾವರೆಯಲ್ಲಿ ಇಟ್ಟುಕೊಳ್ಳುತ್ತಿರುವ, ಆಲದ ಎಲೆಯ ಮೇಲೆ ಮಲಗಿರುವ ಮಗು ಮುಕುಂದನನ್ನು ಮನಸಾರೆ ನೆನಪಿಸಿಕೊಳ್ಳುತ್ತಿರುತ್ತೇನೆ) ಮಗು ಕೃಷ್ಣನಿಗೆ ತಾಯಿ ಯಶೋಧೆ ರಾಮಾಯಣದ ಕಥೆಯನ್ನು ಹೇಳುವ ಸಂದರ್ಭವನ್ನು ಕವಿ ವಿನೋದ ಸಹಿತವಾಗಿ ಹೇಳಿದ್ದಾನೆ–

ರಾಮೋ ನಾಮ ಬಭೂವ ಹುಂ
ತದಬಲಾ ಸೀತೇತಿ ಹುಂ ತೌಪಿತುಃ
ವಾಚಾ ಪಂಚವಟೀ ತಟೇ ವಿಹರತಃ
ತಾಮಾಹರದ್ ರಾವಣಃ।
ನಿದ್ರಾರ್ಥಂ ಜನನೀಕಥಾಂ
ಇತಿ ಹರೇ ಹುಂಕಾರತಃ ಶೃಣ್ವತಃ
ಸೌಮಿತ್ರೇ ಕ್ವ ಧನುರ್ಧನುರ್ಧನುರಿತ
ವ್ಯಗ್ರಾ ಗಿರಃ ಪಾಂತು ವಃ॥

(ಮಗು ಕೃಷ್ಣನಿಗೆ ನಿದ್ರೆ ಬರಲೆಂದು ಯಶೋದೆ ರಾಮಾಯಣದ ಕಥೆಯನ್ನು ಹೇಳುತ್ತಿದ್ದಾಳೆ. ಕೃಷ್ಣನು ಹೂಂ ಹೂಂ ಎನ್ನುತ್ತಿದ್ದಾನೆ. ರಾಮ ಎಂಬುವವನಿದ್ದ. ಹೂಂ. ಅವನ ಹೆಂಡತಿ ಸೀತೆ. ಹೂಂ. ತಂದೆಯ ಮಾತನ್ನು ಪಾಲಿಸಲು ಅವರು ಕಾಡಿಗೆ ಹೋದರು. ಹೂಂ. ಅಲ್ಲಿ ರಾವಣನೆಂಬ ರಾಕ್ಷಸನು ಸೀತೆಯನ್ನು ಕದ್ದೊಯ್ಯಲು ಬಂದ. ಈ ಮಾತನ್ನು ಕೇಳಿದ ಕೂಡಲೇ ಕೃಷ್ಣನಿಗೆ ತಾನು ಇನ್ನೊಂದು ಅವತಾರದಲ್ಲಿ ಬಂದಿದ್ದೇನೆಂಬುದು ಮರೆತು ಹೋಗಿ 'ಲಕ್ಷ್ಮಣ, ನನ್ನ ಧನುಸ್ಸನ್ನು ಕೊಡು, ಧನುಸ್ಸನ್ನು ಕೊಡು' ಎಂದು ಕೂಗಿದನು. ಆ ಭಗವಂತನ ನುಡಿಗಳು ನಿಮ್ಮನ್ನು ಕಾಪಾಡಲಿ!) ಲೀಲಾಶುಕನ ಕಲ್ಪನೆ ಎಷ್ಟು ಅದ್ಭುತವಾಗಿದೆಯಲ್ಲವೇ? ಎಲ್ಲ ಕೃಷ್ಣ ಭಕ್ತರ ನಾಲಗೆಗಳ ಮೇಲೆ ನಲಿದಾಡುತ್ತಿರುವ ಕೃಷ್ಣ ಕರ್ಣಾಮೃತದ ಒಂದು ಪದ್ಯ ಹೀಗಿದೆ–

ಕಸ್ತೂರೀತಿಲಕಂ ಲಲಾಟಫಲಕೇ
ವಕ್ಷಃಸ್ಥಲೇ ಕೌಸ್ತುಭಂ
ನಾಸಾಗ್ರೇ ನವಮೌಕ್ತಿಕಂ ಕರತಲೇ
ವೇಣುಂ ಕರೇ ಕಂಕಣಮ್ ।
ಸರ್ವಾಂಗೇ ಹರಿಚಂದನಂ
ಚ ಕಲಯನ್ ಕಂಠೇ ಚ ಮುಕ್ತಾವಳಿಂ
ಗೋಪಸ್ತ್ರೀಪರಿವೇಷ್ಟಿತೋ ವಿಜಯತೇ
ಗೋಪಾಲಚೂಡಾಮಣಿಃ॥

(ಗೋಪಾಲರ ಚೂಡಾಮಣಿಯೆನಿಸುವ ಶ್ರೀಕೃಷ್ಣನು ಗೋಪಿಯರ ಮಧ್ಯದಲ್ಲಿ ನಿಂತು ಶೋಭಿಸುತ್ತಿದ್ದಾನೆ. ಹಣೆಯಲ್ಲಿ ಕಸ್ತೂರಿತಿಲಕ ಮಿನುಗುತ್ತಿದೆ, ಎದೆಯಲ್ಲಿ ಕೌಸ್ತುಭರತ್ನ ಹೊಳೆಯುತ್ತಿದೆ. ಮೂಗಿನ ತುದಿಯಲ್ಲಿ ಹೊಸ ಮುತ್ತು ಕಂಗೊಳಿಸುತ್ತಿದೆ. ಅಂಗೈಯಲ್ಲಿ ಕೊಳಲು, ಕೈಯಲ್ಲಿ ಕಂಕಣ, ದೇಹದಲ್ಲೆಲ್ಲಾ ಹರಿಚಂದನದ ರಸ, ಕಂಠದಲ್ಲಿ ಮುತ್ತಿನಹಾರ ವಿರಾಜಿಸುತ್ತಿವೆ. ಅಂತಹ ಶ್ರೀಕೃಷ್ಣನನ್ನು ಕಾಣುವ ಸೌಭಾಗ್ಯ ನಮ್ಮದಾಗಲಿ)

ಇಂತಹ ಇನ್ನೊಂದು ಪದ್ಯವನ್ನು ನೋಡೋಣ:

ಸಾಯಂಕಾಲೇ ವನಾಂತೇ
ಕುಸುಮಿತಸಮಂತೋ ಸೈಕತೇ
ಚಂದ್ರಿಕಾಯಾಂ
ತ್ರೈಲೋಕ್ಯಾಕರ್ಷಣಾಂಗಂ
ಸುರನಗರಗಣಿಕಾ
ಮೋಹನಾಂಪಾಂಗಮೂರ್ತಿಮ್।
ಸೇವ್ಯಂ ಶೃಂಗಾರಭಾವೈರ್ನವರಸ
ಭರಿತೈರ್ಗೋಪಕನ್ಯಾ ಸಹಸ್ರೈ–
ರ್ವಂದೇಖಹಂ
ರಾಸಕೇಲೀರತಮತಿಸುಭಗಂ
ವಶ್ಯಗೋಪಾಲಕೃಷ್ಣಮ್ ॥

(ಸಾಯಂಕಾಲ, ಉದ್ಯಾನವನ, ಎಲ್ಲಾ ಗಿಡಗಳು ಹೂಬಿಡುವ ವಸಂತ ಋತು, ಯಮುನಾ ನದಿಯ ತೀರದಲ್ಲಿ ಮರಳು ಹರಡಿದ ಭೂಮಿ, ಚಂದ್ರನ ಬೆಳದಿಂಗಳು. ಅಲ್ಲಿ ರಾಸನೃತ್ಯದಲ್ಲಿ ಭಗವಾನ್ ಕೃಷ್ಣನು ಸಂತೋಷದಿಂದ ಸಾವಿರಾರು ಗೋಪಿಯರೊಡನೆ ಕುಣಿಯುತ್ತಿದ್ದಾನೆ. ನವರಸಭರಿತವಾದ ಶೃಂಗಾರಭಾವಗಳು ಆ ಕೃಷ್ಣನನ್ನು ಸೇವಿಸುತ್ತಿವೆ. ಅತ್ಯಂತ ಸುಂದರವಾದ ಕಡೆಗಣ್ಣಿನ ನೋಟದಿಂದಲೇ ಮೂರು ಲೋಕಗಳ ಜನರನ್ನೆಲ್ಲ ತನ್ನಡೆಗೆ ಸೆಳೆದು ಕೊಳ್ಳುವ, ದೇವತಾಸ್ತ್ರೀಯರೂ ಮನುಷ್ಯರೂ ಮೋಹಭರಿತರಾಗುವಂತೆ ಮಾಡುವ ಮೋಹಮೂರ್ತಿ ಕೃಷ್ಣನನ್ನು ನಾನು ವಂದಿಸುತ್ತೇನೆ).

ಹೀಗೆ ಭಕ್ತಿಯಲ್ಲಿ ತಲ್ಲೀನನಾಗಿ, ಪ್ರೀತಿಯಲ್ಲಿ ತನ್ಮಯನಾಗಿ ಕವಿ ಲೀಲಾಶುಕನು ಅದ್ಭುತವಾಗಿ ಕಾವ್ಯ ರಚನೆಯನ್ನು ಮಾಡಿ ಕಲಿಯುಗವನ್ನೂ ದ್ವಾಪರಯುಗವನ್ನಾಗಿ ಮಾಡುತ್ತಾನೆ.

ಶ್ರೀಕೃಷ್ಣನ ಭಕ್ತಿಯಲ್ಲಿ ಮುಳುಗಿರುವವರಿಗೆ ಉಳಿದ ಯಾವ ಯಜ್ಞಯಾಗಗಳು ಬೇಕಿಲ್ಲ. ಕೃಷ್ಣ ಭಕ್ತಿಯೇ ಅವರನ್ನು ಸಂಸಾರ ಸಾಗರದಿಂದ ಆಚೆಗೆ ಒಯ್ಯುತ್ತದೆ ಎಂಬ ಭಾವನೆ ಕೃಷ್ಣ ಕರ್ಣಾಮೃತದ ಒಂದು ಪದ್ಯದಲ್ಲಿ ವ್ಯಕ್ತವಾಗಿದೆ.

ಸಂಧ್ಯಾವಂದನ ಭದ್ರಮಸ್ತು ಭವತೇ
ಭೋಃ ಸ್ನಾನ ತುಭ್ಯಂ ನಮೋ
ಭೋ ದೇವಾಃ ಪಿತರಶ್ಚ ತರ್ಪಣವಿಧೌ
ನಾಹಂಕ್ಷಮಃ ಕ್ಷಮ್ಯತಾಮ್।
ಯತ್ರ ಕ್ವಾಪಿ ನಿಷಿದ್ಯ
ಯಾದವಕುಲೋತ್ತಂಸಸ್ಯ ಕಂಸದ್ವಿಷಃ
ಸ್ಮಾರಂಸ್ಮಾರಮಘಂ ಹರಾಮಿ ತದಲಂ
ಮನ್ಯೇ ಕಿಮನ್ಯೇನ ಮೇ ॥

(ಸಂಧ್ಯಾವಂದನೆಯೇ, ನಿನಗೆ ಒಳ್ಳೆಯದಾಗಲಿ. ಸ್ನಾನವೇ, ನಿನಗೆ ದೊಡ್ಡ ನಮಸ್ಕಾರ. ಎಲೈ ದೇವತೆಗಳೇ, ಪಿತೃಗಳೇ, ನಿಮಗೆ ತರ್ಪಣ ಕೊಡಲು ನಾನು ಶಕ್ತನಲ್ಲ. ನನ್ನನ್ನು ಕ್ಷಮಿಸಿರಿ. ಎಲ್ಲೋ ಒಂದು ಕಡೆ ಕುಳಿತು ನಾನು ಯಾದವ ಕುಲದ ಒಡವೆ ಎನಿಸಿದ ಕಂಸಾರಿ ಕೃಷ್ಣನನ್ನು ಸ್ಮರಿಸುತ್ತಾ ನನ್ನ ಪಾಪಗಳನ್ನು ಕಳೆದುಕೊಳ್ಳುತ್ತೇನೆ. ಅಷ್ಟೇ ನನಗೆ ಸಾಕು. ಬೇರೆ ಏನೂ ಬೇಕಿಲ್ಲ)

ಈ ವಿಧವಾದ ಅಚಲ ಭಕ್ತಿಯೇ ಭಕ್ತಿಯೋಗ. ಕಲಿಯುಗದಲ್ಲಿ ದೈವಭಕ್ತಿಯೇ ಮುಕ್ತಿ ಸಾಧನೆ. ಇದನ್ನು ಲೀಲಾಶುಕನು ಕೃಷ್ಣ ಕರ್ಣಾಮೃತ ಎಂಬ ಕಾವ್ಯದಲ್ಲಿ ಹೃದ್ಯವಾಗಿ ನಿರೂಪಿಸಿದ್ದಾನೆ. ಇದನ್ನು ಓದಿ ಅರ್ಥ ಮಾಡಿಕೊಂಡರೆ ಕೃಷ್ಣ ಭಕ್ತಿ ಉದ್ದೀಪಿತವಾಗುವುದಲ್ಲದೆ ಕಾವ್ಯ ರಸಾಸ್ವಾದವೂ ಉಂಟಾಗುತ್ತದೆ. ಸಂಸ್ಕೃತ ಭಾಷೆಯ ಸೌಂದರ್ಯ, ಮಾಧುರ್ಯ, ಸೌಭಾಗ್ಯ ಈ ಕಾವ್ಯದಲ್ಲಿ ಅಭಿವ್ಯಕ್ತವಾಗಿದೆ.

ಕೃಷ್ಣಾನುಸ್ಮರಣಾದೇವ
ಪಾಪಸಂಘಾತಪಂಜರಃ।
ಶತಧಾ ಭೇದಮಾಯಾತಿ
ಗಿರಿರ್ವಜ್ರಹತೋ ಯಥಾ॥

ಪಾಕ್ ಪ್ರಧಾನಿಗೆ ಎದಿರೇಟು: ಭಯೋತ್ಪಾದನೆ ಬೆಂಬಲಿಸುವ ದೇಶಗಳನ್ನು ಖಂಡಿಸಬೇಕು

ಪ್ರಧಾನಿ ಮೋದಿ ಬಲವಾದ ಪ್ರತಿಪಾದನೆ



ನವದೆಹಲಿ: ಉಗ್ರ ಚಟುವಟಿಕೆಗಳ ವಿರುದ್ಧ ಹೋರಾಡುವ ವಿಚಾರದಲ್ಲಿ ಯಾವುದೇ ದ್ವಂದ್ವ ನೀತಿ ಹೊಂದಿರಬಾರದು ಮತ್ತು ಗಡಿಯಾಚೆಗಿನ ಭಯೋತ್ಪಾದನೆಯನ್ನು ಬೆಂಬಲಿಸುವ ದೇಶಗಳನ್ನು ಟೀಕಿಸಲು ಹಿಂಜರಿಯಬಾರದು ಎಂದು ಪಾಕಿಸ್ತಾನ ಪ್ರಧಾನಿ ಭಾಗಿಯಾಗಿದ್ದ ಶಾಂಘೈ ಸಹಕಾರ ಸಂಘಟನೆ(ಎಸ್‌ಸಿಒ)ಯು ಶೃಂಗಸಭೆಯಲ್ಲಿ ಪ್ರಧಾನಿ ಮೋದಿ ಹೇಳಿದ್ದಾರೆ.

ಪಾಕಿಸ್ತಾನದ ಪ್ರಧಾನಿ ಶೆಹಬಾಜ್ ಷರೀಫ್, ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಮತ್ತು ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್ ಅವರು ಭಾಗಿಯಾಗಿದ್ದ ಎಸ್‌ಸಿಒ ವರ್ಚುವಲ್ ಸಭೆಯಲ್ಲಿ ಮಾತನಾಡಿದ ಪ್ರಧಾನಿ ಮೋದಿ, ಭಯೋತ್ಪಾದನೆ ಮತ್ತು ಭಯೋತ್ಪಾದನೆಗೆ ಹಣಕಾಸು ನೆರವು ನೀಡುವವರ ವಿರುದ್ಧ ನಿರ್ಣಾಯಕ ಕ್ರಮ ತೆಗೆದುಕೊಳ್ಳುವ ಅಗತ್ಯವಿದೆ ಎಂದು ಹೇಳಿದರು.

ಭಯೋತ್ಪಾದನೆಯು ಪ್ರಾದೇಶಿಕ ಮತ್ತು ಜಾಗತಿಕ ಶಾಂತಿಗೆ ದೊಡ್ಡ ಬೆದರಿಕೆಯಾಗಿ ಪರಿಣಮಿಸಿದೆ. ಈ ಬೆದರಿಕೆಯನ್ನು ಎದುರಿಸಲು ಪರಸ್ಪರ ಸಹಕಾರ ನೀಡಬೇಕು ಎಂದು ಮೋದಿ ಕರೆ ನೀಡಿದರು.

ಭಯೋತ್ಪಾದನೆಯ ವಿರುದ್ಧ ನಾವು ಒಟ್ಟಾಗಿ ಹೋರಾಡಬೇಕು. ಅದು ಯಾವುದೇ ರೂಪದಲ್ಲಿ ಮತ್ತು ಯಾವುದೇ ಅಭಿವ್ಯಕ್ತಿಯಾಗಿರಬಹುದು. ಭಯೋತ್ಪಾದನೆ ವಿರುದ್ಧದ ಹೋರಾಟದಲ್ಲಿ ಯಾವುದೇ ದ್ವಂದ್ವ ನೀತಿ ಇರಬಾರದು ಎಂದು ಮೋದಿ ಪ್ರತಿಪಾದಿಸಿದರು.

ನಾವು ಎಸ್‌ಸಿಒ ಅನ್ನು ವಿಸ್ತೃತ ನೆರೆಹೊರೆಯಾಗಿ ನೋಡುವುದಿಲ್ಲ, ಬದಲಿಗೆ ವಿಸ್ತೃತ ಕುಟುಂಬವಾಗಿ ನೋಡುತ್ತೇವೆ. ಭದ್ರತೆ, ಆರ್ಥಿಕ ಅಭಿವೃದ್ಧಿ, ಸಂಪರ್ಕ, ಏಕತೆ, ಸಾರ್ವಭೌಮತ್ವ ಮತ್ತು ಪ್ರಾದೇಶಿಕ ಸಮಗ್ರತೆಗೆ ಗೌರವ, ಪರಿಸರ ಸಂರಕ್ಷಣೆ ಎಸ್‌ಸಿಒ ಬಗ್ಗೆ ನಮ್ಮ ಗುರಿಗಳ ಆಧಾರಸ್ತಂಭಗಳಾಗಿವೆ ಮೋದಿ ಹೇಳಿದ್ದಾರೆ. ಭಾರತದ ಅಧ್ಯಕ್ಷತೆಯಲ್ಲಿ ನಡೆದ ವರ್ಚುವಲ್ ಶೃಂಗಸಭೆಯಲ್ಲಿ ಕಜಕಿಸ್ತಾನ್, ಕಿರ್ಗಿಸ್ತಾನ್, ತಜಕಿಸ್ತಾನ್, ಉಜ್ಬೇಕಿಸ್ತಾನ್ ಮತ್ತು ಇರಾನ್ ನಾಯಕರು ಸಹ ಭಾಗವಹಿಸಿದ್ದರು.

ಆಧ್ಯಾತ್ಮಿಕತೆ, ತಂತ್ರಜ್ಞಾನ, ಆರ್ಥಿಕತೆಯಲ್ಲಿ ಭಾರತ ಮುನ್ನಡೆಯುತ್ತಿದೆ

ಅಮರಾವತಿ: ದೇಶದಲ್ಲಿ ಆಧ್ಯಾತ್ಮಿಕ ಕೇಂದ್ರಗಳು ಪುನಶ್ಚೇತನಗೊಳ್ಳುತ್ತಿರುವಂತೆಯೇ ತಂತ್ರಜ್ಞಾನ ಮತ್ತು ಆರ್ಥಿಕತೆ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಭಾರತ ಮುನ್ನಡೆಯುತ್ತಿದೆ ಎಂದು ಪ್ರಧಾನಿ ಮೋದಿ ಹೇಳಿದ್ದಾರೆ.


ಆಂಧ್ರಪ್ರದೇಶದ ಪುಟ್ಟಪರ್ತಿಯಲ್ಲಿರುವ ಪ್ರಶಾಂತಿ ನಿಲಯದಲ್ಲಿ ಸಾಯಿ ಹಿರಾ ಗ್ಲೋಬಲ್ ಕನ್ವೆನ್ಷನ್ ಸೆಂಟರ್ ಉದ್ಘಾಟನಾ ಸಮಾರಂಭದಲ್ಲಿ ವರ್ಚುಯಲ್ ಆಗಿ ಮಾತನಾಡಿದ ಅವರು, ಒಟ್ಟು ನೈಜ–ಸಮಯದ ಆನ್‌ಲೈನ್ ವಹಿವಾಟಿನ ಶೇ. 40ರಷ್ಟು ಭಾರತದಲ್ಲಿ ನಡೆಯುತ್ತಿದೆ ಎಂದು ಹೇಳಿದರು.

ಭಾರತವು ವಿಶ್ವದ 3ನೇ ಅತಿದೊಡ್ಡ ಸ್ಟಾರ್ಟಪ್ ಪರಿಸರ ವ್ಯವಸ್ಥೆ ಹೊಂದಿದೆ ಮತ್ತು ಡಿಜಿಟಲ್ ತಂತ್ರ ಜ್ಞಾನ ಮತ್ತು 5ಜಿ ತಂತ್ರಜ್ಞಾನದಂತಹ ಕ್ಷೇತ್ರಗಳಲ್ಲಿ ದೊಡ್ಡ ದೇಶಗಳೊಂದಿಗೆ ಸ್ಪರ್ಧಿಸುತ್ತಿದೆ. ಒಂದೆಡೆ ಆಧ್ಯಾತ್ಮಿಕ ಕೇಂದ್ರಗಳು ದೇಶದಲ್ಲಿ ಪುನರುಜ್ಜೀವನಗೊಳ್ಳುತ್ತಿವೆ. ಏಕಕಾಲದಲ್ಲಿ ಭಾರತವು ಆರ್ಥಿಕತೆ ಮತ್ತು ತಂತ್ರಜ್ಞಾನದಲ್ಲಿ ಮುಂಚೂಣಿಯಲ್ಲಿದೆ. ಇಂದು ಭಾರತವು ವಿಶ್ವದ ಅಗ್ರ ಐದು ಆರ್ಥಿಕತೆಗಳಲ್ಲಿ ಒಂದಾಗಿದೆ ಎಂದರು.

ಸಾವಿರಾರು ವರ್ಷಗಳಿಂದ ಭಾರತೀಯ ಸಂತರು ಏಕ್ ಭಾರತ–ಶ್ರೇಷ್ಠ ಭಾರತದ ಚೈತನ್ಯವನ್ನು ಪೋಷಿಸಿದ್ದಾರೆ. ಪುಟ್ಟಪರ್ತಿಗೆ ಹಲವು ಬಾರಿ ಬಂದಿದ್ದೆ. ಆದರೆ, ಈ ಬಾರಿ ಬರಲು ಸಾಧ್ಯವಾಗಲಿಲ್ಲ. ಬಂದು ಆಶೀರ್ವಾದ ಮಾಡುವಂತೆ ಆಹ್ವಾನ ನೀಡಿದ್ದರು. ಆದರೆ, ಆಶೀರ್ವಾದ ಪಡೆಯಲು ಬರುತ್ತೇನೆ ನೀಡಲು ಅಲ್ಲ. ದೈಹಿಕವಾಗಿ ನಿಮ್ಮೊಂದಿಗೆ ಇಲ್ಲದಿದ್ದರೂ ತಂತ್ರ ಜ್ಞಾನದ ನೆರವಿನಿಂದ ನಿಮ್ಮೆಲ್ಲರ ಜೊತೆ ನಾನಿದ್ದೇನೆ ಎಂದರು.

ಶ್ರೀ ಸತ್ಯ ಸಾಯಿ ಸೆಂಟ್ರಲ್ ಟ್ರಸ್ಟ್ ಪುಟ್ಟಪರ್ತಿಯ ಪ್ರಶಾಂತಿ ನಿಲಯದಲ್ಲಿ ಸಾಯಿ ಹಿರಾ ಗ್ಲೋಬಲ್ ಕನ್ವೆನ್ಷನ್ ಸೆಂಟರ್ ನಿರ್ಮಿಸಿದೆ ಈ ಹೊಸ ಸೌಲಭ್ಯವು ಸಮ್ಮೇಳನಗಳು, ಸೆಮಿನಾರ್‌ಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸುತ್ತದೆ. ಇದರಲ್ಲಿ ಎಲ್ಲಾ ವರ್ಗಗಳ ವ್ಯಕ್ತಿಗಳ ನಡುವೆ ಸಂವಾದ ಮತ್ತು ತಿಳುವಳಿಕೆಯನ್ನು ಉತ್ತೇಜಿಸುತ್ತದೆ. ಇದು ಧ್ಯಾನ ಮಂದಿರಗಳು, ಪ್ರಶಾಂತ ಉದ್ಯಾನಗಳು ಮತ್ತು ವಸತಿ ಸೌಲಭ್ಯಗಳನ್ನು ಹೊಂದಿದೆ. ಪ್ರಶಾಂತಿ ನಿಲಯಂ ಆಂಧ್ರಪ್ರದೇಶದ ಶ್ರೀ ಸತ್ಯ ಸಾಯಿ ಜಿಲ್ಲೆಯಲ್ಲಿ ನೆಲೆಗೊಂಡಿರುವ ಸತ್ಯಸಾಯಿ ಬಾಬಾ ಅವರ ಮುಖ್ಯ ಆಶ್ರಮವಾಗಿದೆ.


ಏಕರೂಪ ನಾಗರಿಕ ಸಂಹಿತೆ ಅನುಷ್ಠಾನಕ್ಕೆ ಸಕಾಲ



ಗುವಾಹಟಿ: ಸಂವಿಧಾನದ ಪಿತಾಮಹರ ಆಲೋಚನೆ ಪ್ರಕಾರ, ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಅನುಷ್ಠಾನಕ್ಕೆ ತರಲು ಕಾಲ ಸನ್ನಿಹಿತವಾಗಿದೆ ಎಂದು ಉಪರಾಷ್ಟ್ರಪತಿ ಜಗದೀಪ್ ಧನಕರ್ ಹೇಳಿದ್ದಾರೆ.

ಗುವಾಹಟಿಯ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ 25ನೇ ಘಟಿಕೋತ್ಸವವನ್ನು ಉದ್ದೇಶಿಸಿ ಮಾತನಾಡಿದ ಅವರು, ಸಂವಿಧಾನವನ್ನು ರೂಪಿಸಿದ್ದವರ ಆಲೋಚನೆಯ ಪ್ರಕ್ರಿಯೆಯಲ್ಲೂ ಏಕರೂಪ ನಾಗರಿಕ ಸಂಹಿತೆಯ ಚಿಂತನೆಗಳಿದ್ದವು. ಅದರಂತೆ ಸಂವಿಧಾನದ 44ನೇ ವಿಧಿಯು ನಾಗರಿಕರಿಗೆ ಸುರಕ್ಷತೆಯನ್ನು ಕಲ್ಪಿಸಲು ಏಕರೂಪ ನಾಗರಿಕ ಸಂಹಿತೆಯ ಬಗ್ಗೆ ಸ್ಪಷ್ಟವಾಗಿ ಹೇಳುತ್ತದೆ. ಹಾಗಾಗಿ, ಯುಸಿಸಿಯ ಅನುಷ್ಠಾನಕ್ಕೆ ಕಾಲ ಸನ್ನಿಹಿತವಾಗಿದ್ದು, ಯಾವುದೇ ರೀತಿಯ ಅಡ್ಡಿ ಅಥವಾ ವಿಳಂಬವಾಗಲಿ ಸಲ್ಲದು ಎಂದು ತಿಳಿಸಿದ್ದಾರೆ.

ಮೈಸೂರು ಡೈರಿಗೆ ಗೋಪಾಲಪುರ ಗುರುಸ್ವಾಮಿ ನಾಮನಿರ್ದೇಶನ



ಮೈಸೂರು, ಜು.4– ಮೈಸೂರು ಜಿಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ಒಕ್ಕೂಟದ ಆಡಳಿತ ಮಂಡಳಿಗೆ ಇಲವಾಲ–ಜಯಪುರ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಗೋಪಾಲಪುರದ ಬಿ.ಗುರುಸ್ವಾಮಿ ಅವರನ್ನು ಸಿಎಂ ಸಿದ್ದರಾಮಯ್ಯ ಆದೇಶದ ಮೇರೆಗೆ ಅಧಿಕಾರೇತರ ಸದಸ್ಯರನ್ನಾಗಿ ಸರ್ಕಾರದ ಜಂಟಿ ಕಾರ್ಯದರ್ಶಿ ದಿವಾಕರ್ ನಾಮನಿರ್ದೇಶನ ಮಾಡಿದ್ದಾರೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಬುಧವಾರ 5 ಜುಲೈ 2023

ಪಾಲಿಕೆಯಿಂದ ಮಾಮೂಲಿ ದಾಳಿ
228 ಕೆಜಿ ಪ್ಲಾಸ್ಟಿಕ್ ವಶ

ನಾಲ್ಕು ಮಳಿಗೆಗೆ ಬೀಗ ಜಡಿಯುವ 'ಶಾಸ್ತ್ರ'



ಮೈಸೂರು, ಜು.4 (ಎಸ್‌ಬಿಡಿ)– ಮೈಸೂರು ಮಹಾನಗರ ಪಾಲಿಕೆ ತಂಡ ಹಲವು ಮಳಿಗೆಗಳ ಮೇಲೆ ದಾಳಿ ನಡೆಸಿ, ಅಪಾರ ಪ್ರಮಾಣದ ಪ್ಲಾಸ್ಟಿಕ್ ವಶಪಡಿಸಿಕೊಂಡಿದೆ. ನಗರದ ಪ್ರಮುಖ ವಾಣಿಜ್ಯ ಕೇಂದ್ರಗಳಾದ ಶಿವರಾಂಪೇಟೆ ಹಾಗೂ ಸಂತೇಪೇಟೆಯ ಹಲವು ಅಂಗಡಿಗಳ ಮೇಲೆ ಮಂಗಳವಾರ ದಾಳಿ ನಡೆಸಿದ ಅಧಿಕಾರಿಗಳು, 228 ಕೆ.ಜಿ.ಯಷ್ಟು ಪ್ಲಾಸ್ಟಿಕ್ ವಸ್ತುಗಳನ್ನು ವಶಪಡಿಸಿಕೊಂಡು 22 ಸಾವಿರ ರೂ. ದಂಡ ಸಂಗ್ರಹಿಸಿದ್ದಾರೆ. ಹಲವು ಬಾರಿ ದಂಡ ವಿಧಿಸಿ, ಎಚ್ಚರಿಕೆ ನೀಡಿದ್ದರೂ ಪ್ಲಾಸ್ಟಿಕ್ ಸಂಗ್ರಹಿಸಿಟ್ಟಿದ್ದ 4 ಮಳಿಗೆಗಳಿಗೆ ಬೀಗ ಜಡಿದಿದ್ದಾರೆ.

ಪರಿಸರ ಇಂಜಿನಿಯರ್ ಮೈತ್ರಿ ನೇತೃತ್ವದಲ್ಲಿ ನಡೆದ ದಾಳಿಯಲ್ಲಿ ಪಾಲಿಕೆಯ ಹಲವು ಅಧಿಕಾರಿಗಳು ಹಾಗೂ ಅಭಯ ತಂಡದ ಸಿಬ್ಬಂದಿ ಪಾಲ್ಗೊಂಡಿದ್ದರು.

ಮನಸ್ಸಾದಾಗ ದಾಳಿ: ಶಿವರಾಂಪೇಟೆ ಹಾಗೂ ಸಂತೆಪೇಟೆ ಅಂಗಡಿಗಳ ಮೇಲೆ ದಾಳಿ ನಡೆಸಿ, ಪ್ಲಾಸ್ಟಿಕ್ ವಶಪಡಿಸಿಕೊಳ್ಳುವುದು ಸಹಜ ಪ್ರಕ್ರಿಯೆಯಂತಾಗಿದೆ. ಅಧಿಕಾರಿಗಳಿಗೆ ಮನಸ್ಸಾದಾಗ ಸುಮ್ಮನೆ ಒಂದು ಸುತ್ತು ಅಂಗಡಿಗಳ ಮೇಲೆ ದಾಳಿ ನಡೆಸಿ, ಒಂದಷ್ಟು ಪ್ಲಾಸ್ಟಿಕ್ ವಸ್ತುಗಳನ್ನು ವಶಪಡಿಸಿಕೊಂಡು ದಂಡ ಹಾಕುತ್ತಾರೆ. ಇದೆಲ್ಲವೂ ಅಭ್ಯಾಸವಾಗಿರುವ ಮಳಿಗೆದಾರರು ಒಂದಷ್ಟು ಹಣ, ವಸ್ತು ಹೋದರೆ ಹೋಯಿತು ಎಂಬ ಧೋರಣೆಯಿಂದ ಯಥಾಪ್ರಕಾರ ನಡೆದುಕೊಳ್ಳುತ್ತಾರೆ. ಗೌಪ್ಯ ಗೋಡೌನ್‌ನಲ್ಲಿರುವ ಪ್ಲಾಸ್ಟಿಕ್ ಅನ್ನು ಸ್ವಲ್ಪ ಪ್ರಮಾಣದಲ್ಲಿ ತಂದು ಮಾರಾಟ ಮಾಡುತ್ತಾರೆ. ಹ್ಯಾಂಡ್ ಕವರ್ ಇಲ್ಲವೆಂದರೆ ಗ್ರಾಹಕರು ಬೇರೆ ಅಂಗಡಿಗೆ ಹೋಗುತ್ತಾರೆಂದು ಸಣ್ಣಪುಟ್ಟ ವ್ಯಾಪಾರಿಗಳು ಪ್ಲಾಸ್ಟಿಕ್ ಕವರ್ ಕೊಳ್ಳುತ್ತಾರೆ. ಆದರೆ ಮೈಸೂರನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ನಿಟ್ಟಿನಲ್ಲಿ ಪರಿಣಾಮಕಾರಿಯಾದ ಯಾವ ಕ್ರಮವನ್ನೂ ಕೈಗೊಂಡಿಲ್ಲ ಎಂದು ಪರಿಸರ ಪ್ರೇಮಿಗಳು ವಿಷಾದ ವ್ಯಕ್ತಪಡಿಸಿದ್ದಾರೆ.

ಅನ್ನಭಾಗ್ಯದಡಿ ಹಣ ಭಾಗ್ಯಕ್ಕೆ ಪಡಿತರ ವಿತರಕರ ವಿರೋಧ

● ನಿರ್ಧಾರ ಕೈ ಬಿಡುವಂತೆ ಸರ್ಕಾರಕ್ಕೆ ಮನವಿ ● ಅಕ್ಕಿ ಬದಲು ಜೋಳ, ಗೋಧಿ, ರಾಗಿ ನೀಡುವಂತೆ ಆಗ್ರಹ





ಮೈಸೂರು, ಜು.4(ಎಸ್‌ಬಿಡಿ)– ಅನ್ನಭಾಗ್ಯ ಯೋಜನೆಯಡಿ 5 ಕೆ.ಜಿ ಅಕ್ಕಿ ಬದಲು ತಾತ್ಕಾಲಿಕವಾಗಿ ಫಲಾನುಭವಿಗಳಿಗೆ ಹಣ ನೀಡುವ ರಾಜ್ಯ ಸರ್ಕಾರದ ನಿರ್ಧಾರವನ್ನು ಕೈಬಿಡುವಂತೆ ನ್ಯಾಯಬೆಲೆ ಅಂಗಡಿ ವಿತರಕರು ಮನವಿ ಮಾಡಿದ್ದಾರೆ.

ಬೆಂಗಳೂರಿನ ಖಾಸಗಿ ಹೋಟೆಲ್ ಸಭಾಂಗಣದಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ನ್ಯಾಯಬೆಲೆ ಅಂಗಡಿ ವಿತರಕರ ಸಂಘದ ಸಭೆ ನಡೆದಿದ್ದು, ಅಕ್ಕಿ ಬದಲು ಹಣ ನೀಡುವ ಕಾರ್ಯಕ್ರಮವನ್ನು ಕೈಬಿಡುವಂತೆ ಸರ್ಕಾರವನ್ನು ಒತ್ತಾಯಿಸಲು ಒಮ್ಮತದ ನಿರ್ಣಯ ಕೈಗೊಳ್ಳಲಾಗಿದೆ. ಸಭೆಯ ನಂತರ ಈ ಸಂಬಂಧ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಆಯುಕ್ತರಿಗೆ ಮನವಿ ಸಲ್ಲಿಸಲಾಗಿದೆ.

ಸಭೆಯಲ್ಲಿ ಪಾಲ್ಗೊಂಡಿದ್ದ ಮೈಸೂರು ನಗರ ನ್ಯಾಯಬೆಲೆ ಅಂಗಡಿ ವಿತರಕರ ಸಂಘದ ಅಧ್ಯಕ್ಷ ರವಿ ಪ್ರತಿಕ್ರಿಯಿಸಿ, ಅಂತ್ಯೋದಯ ಹಾಗೂ ಬಿಪಿಎಲ್ ಪಡಿತರದಾರರಿಗೆ ತಲಾ 10 ಕೆಜಿ ಅಕ್ಕಿ ವಿತರಿಸುವ ಅನ್ನಭಾಗ್ಯ ಯೋಜನೆ ಜಾರಿಯಾಗಿದೆ. ಅಗತ್ಯದಷ್ಟು ಅಕ್ಕಿ ಲಭ್ಯವಿಲ್ಲದ ಕಾರಣ ಸದ್ಯ ವಿತರಿಸಲಾಗುತ್ತಿರುವ 5 ಕೆ.ಜಿ ಅಕ್ಕಿ ಜೊತೆಗೆ ಇನ್ನುಳಿದ ಐದು ಕೆಜಿಗೆ ಹಣ ನೀಡಲು ಸರ್ಕಾರ ನಿರ್ಧರಿಸಿದೆ. ಇದರಿಂದ ನ್ಯಾಯಬೆಲೆ ಅಂಗಡಿ ವಿತರಕರಿಗೆ ಭಾರೀ ಅನ್ಯಾಯವಾಗಲಿದೆ. ಈ ಹಿನ್ನೆಲೆಯಲ್ಲಿ ರಾಜ್ಯ ಮಟ್ಟದ ಸಭೆ ನಡೆಸಿ, ಮಹತ್ವದ ಚರ್ಚೆ ನಡೆಸಲಾಗಿದೆ ಎಂದು ತಿಳಿಸಿದರು.

ಅಕ್ಕಿಯ ಬದಲು ಫಲಾನುಭವಿಗಳ ಖಾತೆಗೆ ಹಣ ಜಮೆ ಮಾಡುವುದರಿಂದ ಪಡಿತರ ವಿತರಕರು ಕಮಿಷನ್‌ನಿಂದ ವಂಚಿತರಾಗುತ್ತಾರೆ. ತಾತ್ಕಾಲಿಕ ಎನ್ನಲಾಗಿರುವ ಈ ಪ್ರಕ್ರಿಯೆ ಮುಂದುವರೆದರೆ ಭಾರೀ ನಷ್ಟವಾಗುತ್ತದೆ. ಈ ಹಿಂದಿನ ರಾಜ್ಯ ಬಿಜೆಪಿ ಸರ್ಕಾರ ಹಾಗೂ ಕೇಂದ್ರ ಸರ್ಕಾರ ಪಡಿತರ ಬದಲು ಹಣ ನೀಡಲು ಚಿಂತನೆ ನಡೆಸಿತ್ತು. ಆದರೆ ಅದರ ಸಾಧಕ–ಬಾಧಕಗಳ ಬಗ್ಗೆ ಮನವರಿಕೆ ಮಾಡಿಕೊಟ್ಟಿದ್ದರಿಂದ ಆ ಚಿಂತನೆಯನ್ನು ಕೈಬಿಡಲಾಯಿತು. ಹಲವು ರಾಜ್ಯಗಳಲ್ಲಿ ಹಣ ನೀಡುವ ವ್ಯವಸ್ಥೆಯನ್ನು ಜಾರಿಗೊಳಿಸಲಾಗಿತ್ತು. ಆದರೆ ವಿತರಕರಿಗೆ ಮಾತ್ರವಲ್ಲ, ಫಲಾನುಭವಿಗಳು ಹಾಗೂ ರೈತರಿಗೆ ತೊಂದರೆಯಾಗಿದ್ದರಿಂದ ಪುನಃ ಪಡಿತರ ವಿತರಣೆ ವ್ಯವಸ್ಥೆಯನ್ನು ಅನುಸರಿಸಲಾಗುತ್ತಿದೆ.

ಪಡಿತರ ವಿತರಣೆ ಬದಲು ಹಣ ನೀಡುವುದರಿಂದ ರಾಜ್ಯದಲ್ಲಿರುವ 22 ಸಾವಿರಕ್ಕೂ ಹೆಚ್ಚು ಪಡಿತರ ವಿತರಕರ ಕುಟುಂಬಗಳು ಬೀದಿಪಾಲಾಗುತ್ತವೆ. ಈ 5 ಕೆಜಿಗೆ ಹಣ ನೀಡಲು ಶುರು ಮಾಡಿ, ಮುಂದೆ ಅಕ್ಕಿ ಲಭ್ಯವಾಗಲಿಲ್ಲ ಎಂದು ಪೂರ್ಣ ಪ್ರಮಾಣದಲ್ಲಿ ಹಣ ನೀಡುವ ಸಾಧ್ಯತೆಯನ್ನು ತಳ್ಳಿ ಹಾಕುವಂತಿಲ್ಲ. ಹೀಗಾದರೆ ಪಡಿತರ ವಿತರಕರು ನಿರುದ್ಯೋಗಿಗಳಾಗುತ್ತೇವೆ. ನಮ್ಮನ್ನೇ ನಂಬಿರುವ ಕುಟುಂಬ ಸಂಕಷ್ಟಕ್ಕೆ ಸಿಲುಕುತ್ತವೆ ಎಂದು ಆತಂಕ ವ್ಯಕ್ತಪಡಿಸಿದ್ದಾರೆ.

ಫಲಾನುಭವಿಗಳಿಗೆ ಪಡಿತರವನ್ನೇ ವಿತರಿಸಬೇಕು. ಸದ್ಯ ಅಗತ್ಯದಷ್ಟು ಅಕ್ಕಿ ಲಭ್ಯವಿಲ್ಲವಾದರೆ ಅಕ್ಕಿ ಬದಲು ರಾಗಿ, ಜೋಳ, ಸಕ್ಕರೆ, ಗೋಧಿ ಇನ್ನಿತರ ಪದಾರ್ಥಗಳನ್ನು ವಿತರಿಸುವ ವ್ಯವಸ್ಥೆ ಮಾಡಬೇಕು. ಆದರೆ ಅಕ್ಕಿ ಬದಲು ಹಣ ನೀಡುವ ವ್ಯವಸ್ಥೆಯನ್ನು ಜಾರಿಗೆ ತರದಂತೆ ಸರ್ಕಾರವನ್ನು ಒತ್ತಾಯಿಸಲಾಗುವುದು. ಇದರೊಂದಿಗೆ ಜಿಲ್ಲಾ ಹಂತದ ವಿತರಕರ ಸಂಘದ ವತಿಯಿಂದ ಆಯಾಯ ಜಿಲ್ಲಾ ಉಸ್ತುವಾರಿ ಸಚಿವರನ್ನು ಭೇಟಿ ಮಾಡಿ, ವಿತರಕರಿಗಾಗುವ ಅನ್ಯಾಯವನ್ನು ತಿಳಿಸಿ, ಸರ್ಕಾರದ ಗಮನಕ್ಕೆ ತರುವಂತೆ ಒತ್ತಾಯಿಸುವ ಬಗ್ಗೆ ಸಭೆಯಲ್ಲಿ ಚರ್ಚೆಯಾಯಿತು ಎಂದರು.

ಈಗಾಗಲೇ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಲಾಗಿದೆ. ಇಂದಿನ ಸಭೆ ಬಳಿಕ ಆಹಾರ ಇಲಾಖೆ ಆಯುಕ್ತರಿಗೂ ಮನವಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಭೇಟಿ ಮಾಡಿ, ಪಡಿತರ ಪದಾರ್ಥಗಳನ್ನೇ ವಿತರಿಸಲು ವ್ಯವಸ್ಥೆ ಮಾಡಬೇಕು, ಯಾವ ಕಾರಣಕ್ಕೂ ಅಕ್ಕಿ ಬದಲು ಹಣ ನೀಡುವ ಕಾರ್ಯಕ್ರಮವನ್ನು ಜಾರಿಗೊಳಿಸದಂತೆ ಕೋರಲು ನಿರ್ಧರಿಸಲಾಗಿದೆ. ಈ ನಿಟ್ಟಿನಲ್ಲಿ ಸರ್ಕಾರದ ನಿಲುವು ಗಮನಿಸಿ, ಮುಂದುವರೆಯಲು ತೀರ್ಮಾನಿಸಲಾಗಿದೆ ಎಂದರು.

ಕರ್ನಾಟಕ ರಾಜ್ಯ ಸರ್ಕಾರದ ನ್ಯಾಯಬೆಲೆ ಅಂಗಡಿ ವಿತರಕರ ಸಂಘದ ಅಧ್ಯಕ್ಷ ಕೆ.ಕೃಷ್ಣಪ್ಪ, ಕಾರ್ಯದರ್ಶಿ ಚನ್ನಕೇಶವಗೌಡ ನೇತೃತ್ವದಲ್ಲಿ ನಡೆದ ಸಭೆಯಲ್ಲಿ ಎಲ್ಲಾ ಜಿಲ್ಲೆ ಹಾಗೂ ತಾಲೂಕುಗಳ ಸಾವಿರಾರು ಪದಾಧಿಕಾರಿಗಳು ಭಾಗವಹಿಸಿದ್ದರು ಎಂದು ತಿಳಿಸಿದರು.

ದುಡಿಯಲು ಸಮರ್ಥ ಪತ್ನಿ ಹೆಚ್ಚಿನ ಜೀವನಾಂಶ ಕೋರುವಂತಿಲ್ಲ



ಬೆಂಗಳೂರು, ಜು.4– ದುಡಿಯಲು ಸಮರ್ಥ ಪತ್ನಿ, ಹೆಚ್ಚಿನ ಜೀವನಾಂಶ ಕೋರುವಂತಿಲ್ಲವೆಂದು ಕರ್ನಾಟಕ ಹೈಕೋರ್ಟ್ ತೀರ್ಪು ನೀಡಿದೆ. ಜತೆಗೆ, ಪ್ರಕರಣವೊಂದರಲ್ಲಿ ಪತ್ನಿಗೆ ಪತಿ ನೀಡಬೇಕಿದ್ದ ಮಾಸಿಕ ಜೀವನಾಂಶದ ಮೊತ್ತವನ್ನು 10 ಸಾವಿರ ರೂ.ನಿಂದ 5 ಸಾವಿರ ರೂ.ಗಳಿಗೆ ಕಡಿಮೆ ಮಾಡಿದ ಸೆಷನ್ಸ್ ಕೋರ್ಟ್ ಆದೇಶವನ್ನು ಎತ್ತಿಹಿಡಿದಿದೆ. ವಿವಾಹಕ್ಕೆ ಮುನ್ನ ಉದ್ಯೋಗದಲ್ಲಿದ್ದ ಪತ್ನಿ ಈಗ ಮತ್ತೆ ಕೆಲಸಕ್ಕೆ ಸೇರದಿರಲು ಸಮರ್ಪಕ ಕಾರಣಗಳಿಲ್ಲ. ಆಲಸ್ಯದಿಂದ ಮನೆಯಲ್ಲಿಯೇ ಕುಳಿತು ಪತಿಯಿಂದಲೇ ಸಂಪೂರ್ಣ ಜೀವನಾಂಶ ಕೇಳುವುದು ಸಮಂಜಸವಲ್ಲ. ತನ್ನ ಜೀವನ ನಿರ್ವಹಣೆಗೆ ಪತ್ನಿ ಪ್ರಯತ್ನಿಸಬೇಕು. ಪೂರಕ ಜೀವನಾಂಶವನ್ನಷ್ಟೇ ಪತಿಯಿಂದ ಪತ್ನಿ ಕೇಳಬಹುದು ಎಂದು ಕೋರ್ಟ್ ಹೇಳಿದೆ. ನ್ಯಾಯಮೂರ್ತಿ ರಾಜೇಂದ್ರ ಬಾದಾಮಿಕರ್ ಅವರಿದ್ದ ಹೈಕೋರ್ಟ್ ಏಕಸದಸ್ಯ ಪೀಠ ಈ ಆದೇಶ ನೀಡಿದೆ.

ವಿವಾಹದ ನಂತರ ಪತ್ನಿಗೆ ಒಂದು ಮಗು ಜನಿಸಿತ್ತು. ಆದರೆ ಪತ್ನಿಗೆ ಅತ್ತೆ ಮತ್ತು ಅವಿವಾಹಿತ ನಾದಿನಿಯೊಂದಿಗೆ ವಾಸಿಸುವ ಇಚ್ಛೆ ಇರಲಿಲ್ಲ. ಹೀಗಾಗಿ ತನ್ನ ತಾಯಿಯೊಂದಿಗೆ ಪ್ರತ್ಯೇಕ ವಾಸವಾಗಿದ್ದ ಪತ್ನಿ ಜೀವನಾಂಶಕ್ಕಾಗಿ ಬೆಂಗಳೂರಿನ ಮ್ಯಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಕೌಟುಂಬಿಕ ದೌರ್ಜನ್ಯ ತಡೆ ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದರು. ಮ್ಯಾಜಿಸ್ಟ್ರೇಟ್ ಕೋರ್ಟ್ ಪತ್ನಿಗೆ ಮಾಸಿಕ 10 ಸಾವಿರ ರೂ. ಹಾಗೂ 3 ಲಕ್ಷ ಪರಿಹಾರ ನೀಡುವಂತೆ ಪತಿಗೆ ಆದೇಶ ನೀಡಿತ್ತು. ಇದನ್ನು ಪತಿ ಸೆಷನ್ಸ್ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಸೆಷನ್ಸ್ ಕೋರ್ಟ್ ಜೀವನಾಂಶದ ಮೊತ್ತವನ್ನು 10 ಸಾವಿರದಿಂದ 5 ಸಾವಿರಕ್ಕೆ ಇಳಿಸಿತ್ತು. ಪರಿಹಾರದ ಮೊತ್ತವನ್ನು 3 ಲಕ್ಷದಿಂದ 2 ಲಕ್ಷಕ್ಕೆ ಇಳಿಸಿತ್ತು.

ಸೆಷನ್ಸ್ ಕೋರ್ಟ್ ಆದೇಶ ಪ್ರಶ್ನಿಸಿ ಪತ್ನಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಅತ್ತೆ ಅವಿವಾಹಿತ ನಾದಿನಿಯೊಂದಿಗೆ ವಾಸಿಸಲು ಪತ್ನಿಗೆ ಇಚ್ಛೆಯಿಲ್ಲ ಹೀಗಾಗಿ ಪತಿಯ ಮನೆ ತೊರೆದಿದ್ದಾಳೆ. ಅಲ್ಲದೇ ಪತಿ ದಿನಸಿ ಅಂಗಡಿ ನಡೆಸಿ ತಾಯಿ ಮತ್ತು ಸಹೋದರಿಯನ್ನು ನೋಡಿಕೊಳ್ಳಬೇಕಾಗಿದೆ. ಹೀಗಾಗಿ ಜೀವನಾಂಶದ ಮೊತ್ತ ಇಳಿಸಿದ ಸೆಷನ್ಸ್ ಕೋರ್ಟ್ ಆದೇಶ ಸೂಕ್ತವಾಗಿದೆ ಎಂದು ಹೈಕೋರ್ಟ್ ತೀರ್ಪಿನಲ್ಲಿ ತಿಳಿಸಲಾಗಿದೆ.

ಭಾರೀ ಮಳೆ: ಕರಾವಳಿ ಜಿಲ್ಲೆಗಳಿಗೆ ರೆಡ್, ಹಾಸನ, ಕೊಡಗು ಆರೆಂಜ್, ಮೈಸೂರು, ಉತ್ತರ ಕರ್ನಾಟಕಕ್ಕೆ ಯೆಲ್ಲೋ ಅಲರ್ಟ್

ಬೆಂಗಳೂರು, ಜು. 4: ಕರ್ನಾಟಕದಾದ್ಯಂತ ಭಾರೀ ಮಳೆ ಸುರಿಯುತ್ತಿದೆ. ಈ ಹಿನ್ನೆಲೆಯಲ್ಲಿ ಭಾರತೀಯ ಹವಾಮಾನ ಇಲಾಖೆ ರಾಜ್ಯದಾದ್ಯಂತ ಅಲರ್ಟ್ ಘೋಷಣೆ ಮಾಡಿದೆ. ನಿನ್ನೆಯಿಂದ ಕರಾವಳಿ ಜಿಲ್ಲೆಗಳಲ್ಲಿ ಎಡೆಬಿಡದೇ ಮಳೆ ಸುರಿಯುತ್ತಿದೆ. ಇದು ಮುಂದಿನ ನಾಲ್ಕು ದಿನಗಳ ಕಾಲ ಮುಂದುವರೆಯಬಹುದು ಎಂಬ ಮುನ್ಸೂಚನೆ ನೀಡಲಾಗಿದೆ.

ವಿವಿಧ ಜಿಲ್ಲೆಗಳಿಗೆ ಅಲರ್ಟ್

ರೆಡ್ ಅಲರ್ಟ್: ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳು **ಆರೆಂಜ್ ಅಲರ್ಟ್:** ಚಿಕ್ಕಮಗಳೂರು, ಹಾಸನ, ಕೊಡಗು ಮತ್ತು ಶಿವಮೊಗ್ಗ ಜಿಲ್ಲೆಗಳು, **ಯೆಲ್ಲೋ ಅಲರ್ಟ್:** ಬೆಳಗಾವಿ, ಧಾರವಾಡ, ಗದಗ, ಹಾವೇರಿ, ರಾಯಚೂರು, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ದಾವಣಗೆರೆ, ಮೈಸೂರು ಮತ್ತು ತುಮಕೂರು ಜಿಲ್ಲೆಗಳು

ಶಾಲೆಗಳಿಗೆ ರಜೆ: ದಕ್ಷಿಣ ಕನ್ನಡ ಜಿಲ್ಲೆಯಾದ್ಯಂತ ಭಾರೀ ಮಳೆ ಸುರಿಯುತ್ತಿದೆ. ಈ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳು ಬಂಟ್ವಾಳದ ಅಂಗನವಾಡಿ ಕೇಂದ್ರಗಳು, ಪ್ರಾಥಮಿಕ ಮತ್ತು ಪ್ರೌಢಶಾಲೆಗಳು, ಪದವಿ ಪೂರ್ವ ಕಾಲೇಜುಗಳು ಮತ್ತು ಸರ್ಕಾರಿ ಮತ್ತು ಖಾಸಗಿ ಶಾಲೆಗಳ ವಿದ್ಯಾರ್ಥಿಗಳಿಗೆ ರಜೆ ಘೋಷಿಸಿದ್ದಾರೆ. ಜುಲೈ 4ರಂದು ಮೂಲ್ಕಿ, ಮೂಡುಬಿದಿರೆ ಮತ್ತು ಉಳ್ಳಾಲದಲ್ಲಿ ಆರೆಂಜ್ ಅಲರ್ಟ್ ಘೋಷಿಸಲಾಗಿದೆ. ನಾಳೆಯಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರೆಡ್ ಅಲರ್ಟ್ ಘೋಷಣೆ ಮಾಡಲಾಗಿದೆ.



ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ, ತಗ್ಗು ಪ್ರದೇಶಗಳು, ಸರೋವರಗಳು, ನದಿ ದಡಗಳು ಮತ್ತು ಕಡಲ ತೀರಗಳಿಗೆ ಮಕ್ಕಳನ್ನು ಬಿಡದಂತೆ ಪೋಷಕರಿಗೆ ಸೂಚಿಸಲಾಗಿದೆ. ಮೀನುಗಾರರಿಗೂ ಸಮುದ್ರಕ್ಕೆ ಇಳಿಯದಂತೆ ಸೂಚನೆ ನೀಡಲಾಗಿದೆ. ಜಿಲ್ಲಾ ಮತ್ತು ತಾಲೂಕು ಮಟ್ಟದ ಅಧಿಕಾರಿಗಳು ಸನ್ನದ್ಧರಾಗಿ ವಿಪತ್ತು ನಿರ್ವಹಣಾ ಚಟುವಟಿಕೆಗಳನ್ನು ತಪ್ಪದೆ ಕೈಗೊಳ್ಳುವಂತೆ ತಿಳಿಸಲಾಗಿದೆ. ಪ್ರತಿ ತಾಲೂಕಿನಲ್ಲಿ ಚಿಕಿತ್ಸಾ ಕೇಂದ್ರವನ್ನು ಸಿದ್ಧವಾಗಿಡಲು ಇಲಾಖಾ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದು ಜಿಲ್ಲಾಧಿಕಾರಿ ಆದೇಶದಲ್ಲಿ ತಿಳಿಸಿದ್ದಾರೆ.

ಚುರುಕಾದ ಮುಂಗಾರು ಕರ್ನಾಟಕ ಮತ್ತು ಮಹಾರಾಷ್ಟ್ರದಲ್ಲಿ ಈಗ ಮುಂಗಾರು ಚುರುಕಾಗಿದೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಮಳೆಯಾಗುತ್ತಿರುವ ಕಾರಣ, ರೈತರು ಸಂತಸ ವ್ಯಕ್ತಪಡಿಸಿದ್ದಾರೆ. ಮುಂಗಾರು ಮಳೆಯಾಗುವ ಮೂಲಕ ರೈತರು ಬಿತ್ತನೆ ಶುರು ಮಾಡಲಿದ್ದಾರೆ ಎಂದು ವರದಿಯಾಗಿದೆ.

ಬೆಂಗಳೂರಿನಲ್ಲಿ ಸಾಧಾರಣ ಮಳೆ ಬೆಂಗಳೂರು ನಗರದಲ್ಲಿ ಮುಂದಿನ ಮೂರು ದಿನಗಳ ಕಾಲ ಮೋಡ ಕವಿದ ವಾತಾವರಣವಿದ್ದು, ಮಳೆಯಾಗುವ ಸಾಧ್ಯತೆ ಇದೆ. ಒಂದು ಅಥವಾ ಎರಡು ಸಾರಿ ಸಾಧಾರಣ ಮಳೆಯಾಗಲಿದೆ. ಮೇಲ್ಮೈ ಗಾಳಿಯು ಕೆಲವೊಮ್ಮೆ ಪ್ರಬಲವಾಗಿರುತ್ತದೆ. ಗರಿಷ್ಠ ಮತ್ತು ಕನಿಷ್ಠ ತಾಪಮಾನವು ಕ್ರಮವಾಗಿ 30 ಮತ್ತು 21 ಡಿಗ್ರಿ ಸೆಲ್ಸಿಯಸ್ ಆಗಿರಬಹುದು ಎಂದು ಭಾರತೀಯ ಹವಾಮಾನ ಇಲಾಖೆ ಮಾಹಿತಿ ನೀಡಿದೆ. ಈ ವಾರ ಭಾರೀ ಮಳೆಯ ಮುನ್ಸೂಚನೆ ನೀಡಿದ್ದರೂ ಸಹ, ವಿಳಂಬವಾದ ಮಾನ್ಸೂನ್‌ನಿಂದ ಜೂನ್‌ನಲ್ಲಿ ಬೆಂಗಳೂರು ಮಳೆಯ ಕೊರತೆಯನ್ನು ಕಂಡಿದೆ. ಸುದ್ದಿವಾಹಿನಿ ವರದಿ ಪ್ರಕಾರ, ಕರ್ನಾಟಕದ ರಾಜಧಾನಿ ಬೆಂಗಳೂರು ಕಳೆದ ಆರು ವರ್ಷಗಳಲ್ಲಿ ಜೂನ್‌ನಲ್ಲಿ ಅತ್ಯಂತ ಕಡಿಮೆ ಮಳೆಯನ್ನು ಕಂಡಿದೆ.

ಮಾನಹಾನಿ ಪ್ರಕರಣ
ರಾಹುಲ್ ಖುದ್ದು ಹಾಜರಿಗೆ ವಿನಾಯಿತಿ



ರಾಂಚಿ: 'ಮೋದಿ' ಉಪ ನಾಮದ ಬಗ್ಗೆ ಅಪಮಾನಕರವಾಗಿ ಮಾತನಾಡಿದ್ದಾರೆ ಎಂದು ದಾಖಲಾಗಿರುವ ಮಾನನಷ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಂಗ್ರೆಸ್ ನಾಯಕ ರಾಹುಲ್‌ಗಾಂಧಿ ಅವರಿಗೆ ನ್ಯಾಯಾಲಯಕ್ಕೆ ಖುದ್ದು ಹಾಜರಾಗುವುದಕ್ಕೆ ಜಾರ್ಖಂಡ್ ಹೈಕೋರ್ಟ್ ವಿನಾಯಿತಿ ನೀಡಿದೆ. 2019ರ ಏಪ್ರಿಲ್‌ನಲ್ಲಿ ಕೋಲಾರದಲ್ಲಿ ನಡೆದ ಚುನಾವಣಾ ಪ್ರಚಾರದ ವೇಳೆ 'ಎಲ್ಲಾ ಕಳ್ಳರಿಗೆ ಮೋದಿ ಎಂಬ ಉಪನಾಮ ಏಕಿದೆ' ಎಂದು ರಾಹುಲ್ ಪ್ರಶ್ನಿಸಿದ್ದರು. ಈ ಸಂಬಂಧ ಪ್ರದೀಪ್ ಮೋದಿ ಎಂಬುವರು ದೂರು ದಾಖಲಿಸಿದ್ದರು. ಈ ಪ್ರಕರಣಕ್ಕೆ ಸಂಬಂಧಿಸಿ ರಾಹುಲ್ ಕೋರ್ಟ್‌ಗೆ ಖುದ್ದಾಗಿ ಹಾಜರಾಗಬೇಕು ಎಂದು ರಾಂಚಿ ಜನಪ್ರತಿನಿಧಿಗಳ ನ್ಯಾಯಾಲಯವು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಅವರು ಹೈಕೋರ್ಟ್ ಮೆಟ್ಟಿಲೇರಿದ್ದರು. ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಕೆ.ದ್ವಿವೇದಿ, ರಾಹುಲ್‌ಗೆ ವಿನಾಯಿತಿ ನೀಡಿ ಆ.6ಕ್ಕೆ ವಿಚಾರಣೆ ಮುಂದೂಡಿದರು.


ವೆಸ್ಟ್ ಎಂಡ್ ಹೋಟೆಲಿಗೆ ಜಮೀನಲ್ಲಿ ಉಳುಮೆ ಮಾಡಿ ಬಾಡಿಗೆ ಕಟ್ಟುತ್ತಿದ್ದೀರಾ!

ಹೆಚ್‌ಡಿಕೆಗೆ ಕಾಂಗ್ರೆಸ್ ಪ್ರಶ್ನೆ

ಬೆಂಗಳೂರು: ಸಿದ್ದರಾಮಯ್ಯ ಸರ್ಕಾರದ ವಿರುದ್ಧ ವೈಎಸ್‌ಟಿ ಟ್ಯಾಕ್ಸ್ (YST Tax) ಆರೋಪ ಮಾಡಿದ ಕುಮಾರಸ್ವಾಮಿ ವಿರುದ್ಧ ಕಾಂಗ್ರೆಸ್ ಕೆಎಸ್‌ಟಿ ಟ್ಯಾಕ್ಸ್ (KST Tax) ಆರೋಪ ಮಾಡಿದೆ.

ವೆಸ್ಟ್ ಎಂಡ್ ಹೋಟೆಲ್‌ನಲ್ಲಿ ಒಂದು ದಿನದ ಬಾಡಿಗೆ ಎಷ್ಟು, ಅಲ್ಲೊಂದು ಖಾಯಂ ಅಡ್ಡ ತೆರೆದಿದ್ದೀರಿ ಅಂದರೆ ಅದಕ್ಕೆ ಎಷ್ಟು ಕೋಟಿ ಸುರಿದಿದ್ದೀರಿ ಎಂದು ಕಾಂಗ್ರೆಸ್ ಸಾಮಾಜಿಕ ಜಾಲತಾಣದಲ್ಲಿ ಪ್ರಶ್ನೆ ಮಾಡಿದೆ. ವೆಸ್ಟ್ ಎಂಡ್ ಹೋಟೆಲಿಗೆ ಜಮೀನಿನಲ್ಲಿ ಉಳುಮೆ ಮಾಡಿ ಬಾಡಿಗೆ ಕಟ್ಟುತ್ತಿದ್ದೀರಾ? ಅಥವಾ "KST" ಸಂಗ್ರಹದ ಹಣ ಬಳಸುತ್ತಿದ್ದೀರಾ ಎಂದು ಪ್ರಶ್ನಿಸಿ #KST kumara ಎಂಬ ಹ್ಯಾಶ್‌ಟ್ಯಾಗ್ ಬಳಸಿ ಟ್ವೀಟ್ ಮಾಡಿದೆ. ಎರಡು ದಿನದ ಹಿಂದೆ ಜೆಪಿ ಭವನದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ್ದ ಕುಮಾರಸ್ವಾಮಿ, ಕಾಂಗ್ರೆಸ್ ಸರ್ಕಾರದಲ್ಲಿ ಹೊಸ ಟ್ಯಾಕ್ಸ್ ಜಾರಿಯಾಗಿದೆ. ದೇಶದಲ್ಲಿ ಜಿಎಸ್‌ಟಿ ಟ್ಯಾಕ್ಸ್ ಇರುವ ಹಾಗೆ ಈ ಸರ್ಕಾರದಲ್ಲಿ ವೈಎಸ್‌ಟಿ ಟ್ಯಾಕ್ಸ್ ನಡೆಯುತ್ತಿದೆ ಎಂದು ಅವರು ಆರೋಪಿಸಿದ್ದರು.

ಚನ್ನರಾಯಪಟ್ಟಣದಲ್ಲಿ ಅಟ್ಟಾಡಿಸಿ ರೌಡಿಶೀಟರ್ ಬರ್ಬರ ಹತ್ಯೆ



ಚನ್ನರಾಯಪಟ್ಟಣ, ಜು.4–ಹಾಡಹಗಲೇ ರೌಡಿಶೀಟರ್‌ನನ್ನು ರಸ್ತೆಯಲ್ಲಿ ಅಟ್ಟಾಡಿಸಿ ಮಾರಕಾಸ್ತ್ರಗಳಿಂದ ಕೊಚ್ಚಿ ಕೊಲೆ ಮಾಡಿರುವ ಘಟನೆ ಪಟ್ಟಣದ ಬೆಂಗಳೂರು ರಸ್ತೆಯ ಧನಲಕ್ಷ್ಮಿ ಚಿತ್ರಮಂದಿರದ ಎದುರು ಮಂಗಳವಾರ ಸಂಜೆ ನಡೆದಿದೆ.

ತಾಲೂಕಿನ ಹೊನ್ನಮಾರನಹಳ್ಳಿ ರೌಡಿಶೀಟರ್ ಮಾಸ್ತಿಗೌಡ ಅಲಿಯಾಸ್ ಕೃಷ್ಣ(30) ಹತ್ಯೆಗೀಡಾದವನಾಗಿದ್ದು, ಆತನನ್ನು ಭಯಾನಕವಾಗಿ ಕೊಚ್ಚಿ ಕೊಲೆ ಮಾಡಲಾಗಿದೆ. ಈ ಬರ್ಬರ ಹತ್ಯೆಯಿಂದ ಚನ್ನರಾಯಪಟ್ಟಣದ ಜನತೆ ಬೆಚ್ಚಿ ಬಿದ್ದಿದ್ದಾರೆ.

ಖಚಿತ ಮಾಹಿತಿ ಆಧರಿಸಿ ಇನ್ನೋವಾ ಕಾರಿನಲ್ಲಿ ಬಂದ ನಾಲ್ಕೈದು ಮಂದಿ ದುಷ್ಕರ್ಮಿಗಳ ತಂಡ, ಮಧ್ಯಾಹ್ನ 3.40ರ ಸುಮಾರಿಗೆ ಕೃಷ್ಣನನ್ನು ಬೆನ್ನತ್ತಿದೆ. ಆತ ಓಡಲು ಆರಂಭಿಸುತ್ತಿದ್ದಂತೆಯೇ ಬೆನ್ನು ಬಿಡದೆ, ಕೃಷ್ಣನನ್ನು ಅಟ್ಟಾಡಿಸಿದ ಗ್ಯಾಂಗ್, ಪಟ್ಟಣದ ಧನಲಕ್ಷ್ಮೀ ಚಿತ್ರಮಂದಿರದ ಮುಂಭಾಗದ ನಡುರಸ್ತೆಯಲ್ಲೇ ಮಾರಕಾಸ್ತ್ರಗಳಿಂದ ಕೊಚ್ಚಿ ಪರಾರಿಯಾಗಿದೆ. ತಲ್ವಾರ್‌ಗಳ ಏಟಿನಿಂದ ಕೃಷ್ಣನ ತಲೆ ಹಾಗೂ ದೇಹದ ಇತರೆ ಭಾಗಗಳಿಗೆ ಗಂಭೀರ ಗಾಯಗಳಾಗಿದ್ದು, ಒಂದು ಕೈ ಸಹ ತುಂಡಾಗಿದೆ. ಅದಾದ ಕೆಲವೇ ಹೊತ್ತಲ್ಲಿ ಮಾಸ್ತಿಗೌಡ ಸ್ಥಳದಲ್ಲೇ ಮೃತಪಟ್ಟಿದ್ದಾನೆ.

> "ಮಾಸ್ತಿಗೌಡ ಅಲಿಯಾಸ್ ಕೃಷ್ಣ ರೌಡಿಶೀಟರ್ ಆಗಿದ್ದ. ಇನ್ನೋವಾ ಕಾರಿನಲ್ಲಿ ಬಂದ ಗುಂಪು, ತಲವಾರ್‌ನಿಂದ ಕೊಚ್ಚಿ ಆತನನ್ನು ಕೊಲೆ ಮಾಡಿದೆ. ಮೃತಪಟ್ಟವನ ಒಂದು ಕೈ ಕಟ್ ಆಗಿದೆ. ದ್ವೇಷದಿಂದಲೇ ಕೊಲೆ ನಡೆದಿರಬಹುದು ಎಂಬ ಶಂಕೆ ಇದೆ. ಸಿಸಿ ಟಿವಿ ದೃಶ್ಯಾವಳಿ ಪರಿಶೀಲಿಸುತ್ತಿದ್ದೇವೆ. ಆರೋಪಿಗಳ ಬಂಧನಕ್ಕೆ ಮೂರು ತನಿಖಾ ತಂಡಗಳನ್ನು ರಚನೆ ಮಾಡಲಾಗಿದೆ. ಶೀಘ್ರವೇ ಹಂತಕರನ್ನು ಬಂಧಿಸಲಾಗುವುದು.
> –ಹರಿರಾಂ ಶಂಕರ್, ಎಸ್ಪಿ.

ಬೆಚ್ಚಿ ಬಿದ್ದ ಜನತೆ: ಪಟ್ಟಣದಲ್ಲಿ ಆಗಾಗ್ಗೆ ರೌಡಿಶೀಟರ್‌ಗಳ ಹೊಡೆದಾಟ, ಬಡಿದಾಟ ಮರುಕಳಿಸುತ್ತಿರುವುದು ಒಂದೆಡೆಯಾದರೆ, ಅದು ಜೀವ ತೆಗೆಯುವ ಹಂತಕ್ಕೂ ಪದೇ ಪದೆ ಹೋಗುತ್ತಿರುವುದು ಸಾರ್ವಜನಿಕರಲ್ಲಿ ಸಹಜವಾಗಿಯೇ ಭೀತಿ ಮೂಡಿಸಿದೆ. ಇದೀಗ ಮತ್ತೊಬ್ಬ ರೌಡಿಶೀಟರ್ ಹತ್ಯೆಯಾಗಿರುವುದರಿಂದ ಪಟ್ಟಣದಲ್ಲಿ ಭಯಭೀತ ವಾತಾವರಣ ನೆಲೆಸಿದೆ.

ಸುದ್ದಿ ತಿಳಿಯುತ್ತಿದ್ದಂತೆಯೇ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಹರಿರಾಂ ಶಂಕರ್, ಡಿವೈಎಸ್ಪಿ ರವಿಪ್ರಸಾದ್, ನಗರ ಠಾಣೆ ಇನ್ಸ್‌ಪೆಕ್ಟರ್ ಕೆ.ಎಂ.ವಸಂತ್, ಶ್ವಾನದಳ, ಹಾಗೂ ವಿಧಿ ವಿಜ್ಞಾನ ಪ್ರಯೋಗಾಲಯ ತಂಡ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದರು. ಈ ಸಂಬಂಧ ಚನ್ನರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟ್ರಿಣ್ ಟ್ರಿಣ್ ಶೀಘ್ರ ಮರು ಚಾಲನೆಗೆ ಪಾಲಿಕೆ ಸಿದ್ಧತೆ

● ಪೆಡಲ್ ಅಸಿಸ್ಟ್, ಕೀಲೆಸ್ ಸೈಕಲ್ ಅನ್‌ಲಾಕಿಂಗ್ ಸೌಲಭ್ಯದ ಸೈಕಲ್‌ಗಳು
● ಮೊಬೈಲ್ ಅಪ್ಲಿಕೇಷನ್–ಬ್ಲೂಟೂತ್ ಆಧಾರಿತ ಬಳಕೆಯ ವೈಶಿಷ್ಟ್ಯತೆ



ಡಾಕಿಂಗ್ ಸ್ಟೇಷನ್‌ನಲ್ಲಿ ನಿಂತಿರುವ ಪೆಡಲ್ ಅಸಿಸ್ಟ್ ಸೈಕಲ್‌ಗಳು.

ಎಂ.ಬಿ.ಪವನ್‌ಮೂರ್ತಿ

ಮೈಸೂರು,ಜು.4– ಅತ್ಯಾಧುನಿಕ ಪೆಡಲ್ ಅಸಿಸ್ಟ್ ಸೌಲಭ್ಯ ಸೇರಿದಂತೆ ಹಲವು ವೈಶಿಷ್ಟ್ಯಪೂರ್ಣದೊಂದಿಗೆ ಟ್ರಿಣ್ ಟ್ರಿಣ್ ಸೈಕಲ್ ವ್ಯವಸ್ಥೆ ಶೀಘ್ರ ಮರು ಚಾಲನೆ ಪಡೆಯಲಿದ್ದು, ಇದಕ್ಕಾಗಿ ಪಾಲಿಕೆ ಸಿದ್ಧತೆ ನಡೆಸಿದೆ. ಕೀಲೆಸ್ ಸೈಕಲ್ ಅನ್‌ಲಾಕಿಂಗ್, ಮೊಬೈಲ್ ಅಪ್ಲಿಕೇಷನ್ ಮತ್ತು ಬ್ಲೂಟೂತ್ ಆಧಾರಿತ ಬಳಕೆ ಈ ನೂತನ ವ್ಯವಸ್ಥೆಯ ವಿಶೇಷತೆ. ಇಂತಹ ವಿನೂತನ ಸೈಕಲ್ ವ್ಯವಸ್ಥೆಯ ಪುನಾರಂಭದತ್ತ ಚಂದಾದಾರರು ಚಿತ್ತ ಹರಿಸಿದ್ದಾರೆ.

ಹೊಸ ವ್ಯವಸ್ಥೆಯ ಕಾರ್ಯಾರಂಭಕ್ಕೆ ಚಂದಾದಾರರು ಕಾತುರದಿಂದ ಕಾಯುತ್ತಿದ್ದು, ಮಹಾನಗರ ಪಾಲಿಕೆಯು ಶೀಘ್ರಗತಿಯಲ್ಲಿ ಈ ನೂತನ ವ್ಯವಸ್ಥೆಗೆ ಚಾಲನೆ ನೀಡಲೆಂಬ ನಿರೀಕ್ಷೆಯಲ್ಲಿದ್ದಾರೆ. ನಗರ ಭೂಸಾರಿಗೆ ನಿರ್ದೇಶನಾಲಯದ ಸಹಯೋಗದೊಂದಿಗೆ ಈ ವ್ಯವಸ್ಥೆ ಅನುಷ್ಠಾನಗೊಳಿಸಿರುವ ಮೈಸೂರು ಮಹಾನಗರ ಪಾಲಿಕೆ, ಗುಜರಾತ್ ಮೂಲದ ಗ್ರೀನ್ ಪೀಡಿಯಾ ಬೈಕ್ ಶೇರ್ ಪ್ರೈವೇಟ್ ಲಿಮಿಟೆಡ್ ಕಂಪನಿಗೆ ಹೊಸದಾಗಿ ಟೆಂಡರ್ ನೀಡಿದೆ.

ಸದರಿ ಕಂಪನಿ ಈಗಾಗಲೇ ಮೈಸೂರಿನ ಅರವಿಂದನಗರದ ಆದಿಚುಂಚನಗಿರಿ ರಸ್ತೆಯಲ್ಲಿ ತನ್ನ ಕಚೇರಿ ಹಾಗೂ ಸೈಕಲ್ ವರ್ಕ್‌ಶಾಪ್ ಆರಂಭಿಸಿ, ಸೈಕಲ್ ಸೇವೆ ಒದಗಿಸುವ ನಿಟ್ಟಿನಲ್ಲಿ ಸಜ್ಜುಗೊಂಡಿದೆ. ಪ್ರಾರಂಭಿಕ ಹಂತದಲ್ಲಿ 500 ಸೈಕಲ್‌ಗಳೊಂದಿಗೆ 46 ಡಾಕಿಂಗ್ ಸ್ಟೇಷನ್‌ಗಳಲ್ಲಿ ಸೈಕಲ್ ಪ್ರಿಯರಿಗೆ ಸೇವೆ ನೀಡಲು ತಯಾರಾಗಿದೆ. 'ಮೈಬೈಕ್' ಬ್ರ್ಯಾಂಡ್ ನೇಮ್‌ನೊಂದಿಗೆ ಸದರಿ ಕಂಪನಿ ಸೇವೆ ನೀಡಲಿದೆ.

ಈ ಎಲ್ಲಾ ಸೈಕಲ್‌ಗಳು ಎಲೆಕ್ಟ್ರಿಕ್ ಸೌಲಭ್ಯ ಹೊಂದಿದ್ದು, ಸೈಕಲ್ ಪೆಡಲ್ ಮಾಡುವಾಗ ವಿದ್ಯುತ್ ಮೋಟಾರ್ ಸಹಾಯ ಇರುವುದರಿಂದ ಬಲವಾಗಿ ತುಳಿಯುವ ಅಗತ್ಯತೆ ಇರುವುದಿಲ್ಲ. ಇದನ್ನು ತಾಂತ್ರಿಕ ಭಾಷೆಯಲ್ಲಿ ಪೆಡಲ್ ಅಸಿಸ್ಟ್ ಎಂದು ಕರೆಯಲಾಗುತ್ತದೆ. ಹೆಚ್ಚು ಶ್ರಮ ವಿನಿಯೋಗಿಸದೇ ಆರಾಮಾವಾಗಿಯೇ ಸವಾರಿ ಮಾಡುವುದು ಈ ಹೊಸ ವ್ಯವಸ್ಥೆಯ ವಿಶೇಷ.

ಆ್ಯಪ್ ಮೂಲಕ ಸೈಕಲ್ ಬಳಕೆ: ನೋಂದಾಯಿಸಿ ಸೈಕಲ್ ಬಳಸಲು ಆ್ಯಪ್ ವ್ಯವಸ್ಥೆ ಕಲ್ಪಿಸಲಾಗಿದೆ. 'ಮೈಬೈಕ್' ಎಂಬ ಆ್ಯಪ್ (ಅಪ್ಲಿಕೇಷನ್) ಪ್ಲೇ ಸ್ಟೋರ್‌ನಲ್ಲಿ ಲಭ್ಯವಿದ್ದು, ಪಾಲಿಕೆ ಮರು ಚಾಲನೆ ನೀಡಿದ ಬಳಿಕ ಈ ಅಪ್ಲಿಕೇಷನ್ ಡೌನ್‌ಲೋಡ್ ಮಾಡಿಕೊಂಡು ಚಂದಾದಾರರಾಗುವ ಮೂಲಕ ಈ ವಿನೂತನ ಟ್ರಿಣ್ ಟ್ರಿಣ್ ಸೈಕಲ್ ಬಳಸಬಹುದು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ 'ಮೈಬೈಕ್' ವರ್ಕ್‌ಶಾಪ್ ವ್ಯವಸ್ಥಾಪಕ ಯಶವಂತ್, ಪ್ರತಿಯೊಂದು ಸೈಕಲ್‌ಗೂ ಯೂನಿಕ್ ಸಂಖ್ಯೆ ಇರುತ್ತದೆ. ಬಳಕೆದಾರರು ತಮ್ಮ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಈ ಸಂಖ್ಯೆ ನಮೂದಿಸುವ ಮೂಲಕ ಬೇಕಾದ ಸೈಕಲ್ ಆಯ್ಕೆ ಮಾಡಿಕೊಳ್ಳಬಹುದು. ಪ್ರಸ್ತುತ ಹೀಗೆ ಆ್ಯಪ್ ಮೂಲಕ ಬಳಕೆಗೆ ಅವಕಾಶವಿದ್ದು, ಭವಿಷ್ಯದಲ್ಲಿ ಸ್ಮಾರ್ಟ್ ಕಾರ್ಡ್ ವ್ಯವಸ್ಥೆ ಕಲ್ಪಿಸುವ ಸಂಭವವಿದೆ. ನೋಂದಣಿ ಶುಲ್ಕ ಪಾವತಿಸಿದ್ದರೆ ಮಾತ್ರವೇ ಆ್ಯಪ್ ಬಳಕೆ ಸಾಧ್ಯವಿದೆ ಎಂದರು.

3 ವಿಧದ ರೈಡಿಂಗ್ ಮೋಡ್: ಸೈಕಲ್‌ನಲ್ಲಿ ಬ್ಯಾಟರಿ ಎಷ್ಟು ಪ್ರಮಾಣದಲ್ಲಿ ಇದೆ. ಎಷ್ಟು ಕಿ.ಮೀ. ಸವಾರಿ ಮಾಡಬಹುದು ಎಂಬ ಮಾಹಿತಿ ಸಹ ಲಭ್ಯವಾಗಲಿದೆ. ಹೆಡ್‌ಲೈಟ್ ಕೂಡ ಇದ್ದು, ರಾತ್ರಿ ವೇಳೆ ಸಂಚಾರಕ್ಕೆ ಇದು ಅನುಕೂಲವಾಗಲಿದೆ. ಮೂರು ವಿಧದ ರೈಡಿಂಗ್ ಮೋಡ್‌ನಲ್ಲಿ ಸೈಕಲ್ ಸವಾರಿ ಮಾಡಬಹುದು. ಹೆಲ್ತ್, ಕಮ್ಯೂಟ್ ಮತ್ತು ಟರ್ಬೋ ಎಂಬುದೇ ಆ ಮೋಡ್‌ಗಳಾಗಿದ್ದು, ಸವಾರಿ ಮಾಡುವವರು ತಮ್ಮ ಅನುಕೂಲಕ್ಕೆ ತಕ್ಕಂತೆ ಮೋಡ್‌ಗಳನ್ನು ತಮ್ಮ ಮೊಬೈಲ್ ಅಪ್ಲಿಕೇಷನ್‌ನಲ್ಲಿ ಆಯ್ಕೆ ಮಾಡಿಕೊಳ್ಳಬಹುದು ಎನ್ನುತ್ತಾರೆ ಯಶವಂತ್.

ಹೆಲ್ತ್ ಮೋಡ್‌ನಲ್ಲಿ ಕನಿಷ್ಠ ಪವರ್‌ನಲ್ಲಿ ಸೈಕಲ್ ಪೆಡಲ್ ಮಾಡಬಹುದು. ಇದಕ್ಕೆ ಹೆಚ್ಚು ಶ್ರಮ ವಿನಿಯೋಗವಾಗಬೇಕಾಗುತ್ತದೆ. ಹೆಚ್ಚು ದೈಹಿಕ ವ್ಯಾಯಾಮ ಅಗತ್ಯವಿರುವವರು ಈ ಮೋಡ್ ಅನ್ನು ಹೆಚ್ಚು ಬಳಸಿಕೊಳ್ಳಬಹುದು. ಕಮ್ಯೂಟ್ ಮೋಡ್‌ನಲ್ಲಿ ಕನಿಷ್ಠಕ್ಕಿಂತಲೂ ಹೆಚ್ಚು ಪವರ್ ಸೈಕಲ್‌ಗೆ ದೊರೆಯಲಿದ್ದು, ಸ್ವಲ್ಪ ಮಟ್ಟಿಗೆ ಪೆಡಲ್ ಮಾಡಿದರೆ ಸೈಕಲ್ ಸಲೀಸಾಗಿ ಚಲಿಸಲಿದೆ. ಟರ್ಬೋ ಮೋಡ್‌ನಲ್ಲಿ ಸೈಕಲ್‌ಗೆ ಗರಿಷ್ಠ ಪವರ್ ಲಭ್ಯವಾಗಲಿದ್ದು, ಇದರಿಂದ ಸೈಕಲ್ ಸರಾಗವಾಗಿ ಸಾಗಲಿದೆ. ಸವಾರರು ಹೆಚ್ಚು ಶ್ರಮ ವಹಿಸಿ ಪೆಡಲ್ ಮಾಡುವ ಅಗತ್ಯತೆ ಈ ಮೋಡ್‌ನಲ್ಲಿ ಇರುವುದಿಲ್ಲ. ಜೊತೆಗೆ ಮೊಬೈಲ್ ಹೋಲ್ಡರ್ ಇದ್ದು, ಸವಾರರು ತಮ್ಮ ಮೊಬೈಲ್‌ಗಳನ್ನು ಇಲ್ಲಿಗೆ ಅಳವಡಿಸಿಕೊಂಡು ಸವಾರಿ ಮಾಡಬಹುದು. ಸೈಕಲ್‌ನ ಮುಂಭಾಗದಲ್ಲಿ ಹ್ಯಾಂಡಲ್ ಕೆಳಗೆ ಫ್ರೇಮ್ ಮೌಂಟೆಡ್ ಬ್ಯಾಸ್ಕೆಟ್ ವ್ಯವಸ್ಥೆ ಇದ್ದು, ಸವಾರರು ತಮ್ಮ ಸಾಮಗ್ರಿ ಇದರಲ್ಲಿ ಇಟ್ಟು ಪ್ರಯಾಣಿಸಬಹುದು ಎಂದು ಅವರು ಹೇಳಿದರು.

ಸವಾರರು ತಮ್ಮ ಎತ್ತರಕ್ಕೆ ತಕ್ಕಂತೆ ಸೈಕಲ್ ಸೀಟ್ ಅನ್ನು ಮೇಲೆ ಅಥವಾ ಕೆಳಗೆ ಮಾಡಿ ಸುಲಭವಾಗಿ ಹೊಂದಿಸಿಕೊಳ್ಳಬಹುದು. ಒಮ್ಮೆ ಸೈಕಲ್‌ನ ಬ್ಯಾಟರಿ ಚಾರ್ಜ್ ಮಾಡಿದರೆ 50 ಕಿ.ಮೀ. ಪ್ರಯಾಣಿಸಬಹುದು. ಬಳಸುವ ಮೋಡ್ ಆಧಾರದಲ್ಲಿ ಇದರಲ್ಲಿ ವ್ಯತ್ಯಾಸ ಆಗಲಿದೆ. ಯಾವ ಸೈಕಲ್‌ನಲ್ಲಿ ಎಷ್ಟು ಪ್ರಮಾಣದ ಬ್ಯಾಟರಿ ಇದೆ ಎಂಬುದನ್ನು ಮೇಲ್ವಿಚಾರಣೆ ಮಾಡುವ ತಂತ್ರಜ್ಞಾನ ನಮ್ಮಲ್ಲಿದೆ. ಬ್ಯಾಟರಿ ಚಾರ್ಜಿಂಗ್ ಪ್ಯಾನಲ್ ಮೂಲಕ ಸೈಕಲ್‌ಗಳ ಬ್ಯಾಟರಿ ಚಾರ್ಜ್ ಮಾಡಲಾಗುತ್ತದೆ ಎಂದು ತಿಳಿಸಿದರು.

ವಿಳಂಬ ಸರಿಯಲ್ಲ, ಚಂದಾದಾರರಿಗೆ ಇದು ನಿಜಕ್ಕೂ ಅನಾನುಕೂಲ

ಟ್ರಿಣ್ ಟ್ರಿಣ್ ಸೇವೆ ಸ್ಥಗಿತವಾಗಿ ಹಲವು ತಿಂಗಳು ಕಳೆದಿವೆ. ಮರು ಚಾಲನೆಗೆ ಇಷ್ಟು ವಿಳಂಬ ಮಾಡುವುದು ಸೂಕ್ತವಲ್ಲ. ಶೀಘ್ರದಲ್ಲಿ ಪುನಾರಂಭಿಸದೇ ಚಂದಾದಾರರನ್ನು ಪಾಲಿಕೆ ಅತಂತ್ರ ಸ್ಥಿತಿಗೆ ದೂಡಿದೆ. ಚಂದಾದಾರರಿಗೆ ಇದು ನಿಜಕ್ಕೂ ಅನಾನುಕೂಲ. ಜೊತೆಗೆ ಟ್ರಿಣ್ ಟ್ರಿಣ್ ವ್ಯವಸ್ಥೆ ಏನಾಗಿದೆ ಎಂಬ ಬಗ್ಗೆಯೂ ಪಾಲಿಕೆ ಮಾಹಿತಿ ನೀಡುತ್ತಿಲ್ಲ. ಎಲ್ಲಾ ಚಂದದಾರರ ವಿಳಾಸ, ಮೊಬೈಲ್ ಸಂಖ್ಯೆ ಇದ್ದರೂ ಕಾಲಕಾಲಕ್ಕೆ ಯಾವುದೇ ಮಾಹಿತಿ ನೀಡಿಲ್ಲ. ಇದು ಸರಿಯಾದ ಕ್ರಮವಲ್ಲ.

–ಎಸ್.ಟಿ.ರಾಜೇಂದ್ರ, ಟ್ರಿಣ್ ಟ್ರಿಣ್ ಸೈಕಲ್ ಚಂದದಾರರು.



ಮೈಸೂರಿನ ಅರವಿಂದನಗರದಲ್ಲಿರುವ ಮೈಬೈಕ್ ವರ್ಕ್‌ಶಾಪ್‌ನಲ್ಲಿ ಸೈಕಲ್‌ಗಳೊಂದಿಗೆ ವರ್ಕ್‌ಶಾಪ್ ವ್ಯವಸ್ಥಾಪಕ ಯಶವಂತ್.

ಅಧಿವೇಶನ ಮುಗಿದ ಬಳಿಕ ಉದ್ಘಾಟನೆ



ಟ್ರಿಣ್ ಟ್ರಿಣ್ ಮರು ಚಾಲನೆಗೆ ಕಾರ್ಯಾದೇಶವಾಗಿದೆ. ವಿಧಾನ ಮಂಡಲ ಅಧಿವೇಶನ ಮುಗಿದ ಕೂಡಲೇ ಟ್ರಿಣ್ ಟ್ರಿಣ್ ಹೊಸ ವ್ಯವಸ್ಥೆಯನ್ನು ಉದ್ಘಾಟನೆ ಮಾಡಲಾಗುವುದು ಎಂದು ಮೈಸೂರು ಮಹಾನಗರ ಪಾಲಿಕೆ ಆಯುಕ್ತ ಜಿ.ಲಕ್ಷ್ಮೀಕಾಂತ ರೆಡ್ಡಿ ಹೇಳಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಈಗಾಗಲೇ ಚಂದಾದಾರರಾಗಿರುವವರಿಗೆ ಭದ್ರತಾ ಠೇವಣಿ ವಾಪಸ್ಸು ಮಾಡಬೇಕೇ ಅಥವಾ ಅದನ್ನು ಹೊಸ ವ್ಯವಸ್ಥೆಗೆ ವರ್ಗಾವಣೆ ಮಾಡಬೇಕೇ ಎಂಬ ನಿರ್ಧಾರವನ್ನು ಉದ್ಘಾಟನೆಗೂ ಮುನ್ನ ಕೈಗೊಳ್ಳಲಾಗುವುದು. ಹಳೆ ವ್ಯವಸ್ಥೆಯ ಸಾಫ್ಟ್‌ವೇರ್ ಹೊಸದಕ್ಕೆ ಹೊಂದಾಣಿಕೆ ಸಲೀಸಾಗಿ ಆದಲ್ಲಿ ಸದಸ್ಯತ್ವ ವರ್ಗಾವಣೆ ಜೊತೆಗೆ ಭದ್ರತಾ ಠೇವಣಿ ಜಮಾ ಮಾಡಲಾಗುವುದು. ಇದು ಸಾಧ್ಯವಾಗದೇ ಇದ್ದಲ್ಲಿ ಭದ್ರತಾ ಠೇವಣಿ ವಾಪಸ್ಸು ಮಾಡಲಾಗುವುದು. ಈ ಎರಡರಲ್ಲಿ ಒಂದು ನಿರ್ಧಾರ ಕೈಗೊಳ್ಳಲಾಗುವುದು ಎಂದರು.

ಟ್ರಿಣ್ ಟ್ರಿಣ್ ಜೊತೆಗೆ ಎಲ್ಲಾ ಸಾರ್ವಜನಿಕ ಸೈಕಲ್ ಸವಾರರಿಗೆ ಮೈಸೂರು ನಗರದಲ್ಲಿ ಪ್ರತ್ಯೇಕ ಸಿಂಥೆಟಿಕ್ ಸೈಕಲ್ ಪಥ ನಿರ್ಮಾಣಕ್ಕೂ ಕಾರ್ಯಾದೇಶವಾಗಿದೆ. ಮೊದಲ ಹಂತದಲ್ಲಿ ವಿವಿಧ ರಸ್ತೆಗಳಲ್ಲಿ ಒಟ್ಟು 8.5 ಕಿ.ಮೀ. ಪಥ ನಿರ್ಮಾಣ ಕಾಮಗಾರಿ ಈಗಾಗಲೇ ಆರಂಭವಾಗಬೇಕಿತ್ತು ಆದರೂ ಗುತ್ತಿಗೆದಾರರು ಕಾಮಗಾರಿ ಪ್ರಾರಂಭಿಸಿಲ್ಲ ಹೀಗಾಗಿ ಅವರಿಗೆ ನೋಟಿಸ್ ನೀಡಲಾಗಿದೆ. ಶೀಘ್ರ ಕಾಮಗಾರಿ ಪ್ರಾರಂಭಿಸದೇ ಹೋದಲ್ಲಿ ಟೆಂಡರ್ ರದ್ದುಪಡಿಸುವುದಾಗಿ ನೋಟಿಸ್‌ನಲ್ಲಿ ಸೂಚನೆ ನೀಡಲಾಗಿದೆ ಎಂದು ತಿಳಿಸಿದರು.

ಅನಿಷ್ಟ ಪದ್ಧತಿ ತೊಡೆದು ಹಾಕುವಲ್ಲಿ ಹಡಪದ ಅಪ್ಪಣ್ಣ ಕೊಡುಗೆ ಅಪಾರ: ರುದ್ರೇಗೌಡ



ಮಂಡ್ಯ, ಜು.4– ಸಮಾಜದಲ್ಲಿ ಸಮಾನತೆ ಸಾಧಿಸಬೇಕಾದರೆ ಮೇಲು ಕೀಳು ಎಂಬ ಅನಿಷ್ಟ ಪದ್ಧತಿಗಳನ್ನು ತೊಡೆದು ಹಾಕುವ ನಿಟ್ಟಿನಲ್ಲಿ ಶಿವಶರಣ ಹಡಪದ ಅಪ್ಪಣ್ಣ ತಮ್ಮ ವಚನಗಳಲ್ಲಿ ಇತರರಿಗೆ ಮಾದರಿಯಾಗಿದ್ದಾರೆ ಎಂದು ನಗರಸಭೆ ಪರಿಸರ ವಿಭಾಗದ ಅಭಿಯಂತರ ರುದ್ರೇಗೌಡ ತಿಳಿಸಿದರು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ನಗರಸಭೆ ಸಹಯೋಗದಲ್ಲಿ ಕಲಾಮಂದಿರದಲ್ಲಿ ನಡೆದ ಶ್ರೀಶಿವಶರಣ ಹಡಪದ ಅಪ್ಪಣ್ಣ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಹಡಪದ ಅಪ್ಪಣ್ಣನವರು 12ನೇ ಶತಮಾನದ ವಚನ ಚಳವಳಿ ಮತ್ತು ಸಾಮಾಜಿಕ ಕ್ರಾಂತಿ ಹರಿಕಾರರಲ್ಲಿ ಒಬ್ಬರು. ಇವರು ಹಡಪದ ಸಮಾಜದವರಾಗಿದ್ದು ಬಸವಣ್ಣನವರ ಬಲಗೈ ಬಂಟನೆಂದೇ ಹೆಸರು ಪಡೆದಿದ್ದರು ಎಂದು ಹೇಳಿದರು.

ಈ ವೇಳೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್.ಉದಯ್ ಕುಮಾರ್, ಸಮಾಜ ಸೇವಕ ಶಶಿಧರ್, ಡಿ.ದೇವರಾಜು ಅರಸು ಹಿಂದುಳಿದ ವರ್ಗಗಳ ವೇದಿಕೆ ಅಧ್ಯಕ್ಷ ಸಂದೇಶ್, ಜಿಲ್ಲಾ ಸವಿತಾ ಸಮಾಜದ ಅಧ್ಯಕ್ಷ ರವಿಕುಮಾರ್, ಮಾಜಿ ಅಧ್ಯಕ್ಷ ಅಂಜನಪ್ಪ, ಮುಖಂಡರಾದ ಸ್ವಾಮಿ, ಬಸವರಾಜು, ಜಯರಾಂ ಇನ್ನಿತರರಿದ್ದರು.

ಶೆಟ್ಟಹಳ್ಳಿ ಹೊರವಲಯದಲ್ಲಿ ಚಿರತೆ ಪ್ರತ್ಯಕ್ಷ

ಭಾರತೀನಗರ, ಜು.4– ಇಲ್ಲಿಗೆ ಸಮೀಪದ ಶೆಟ್ಟಹಳ್ಳಿ ಗ್ರಾಮದ ಹೊರವಲಯದಲ್ಲಿ ಚಿರತೆ ಪ್ರತ್ಯಕ್ಷವಾಗಿದ್ದು, ಗ್ರಾಮಸ್ಥರು ಆತಂಕಗೊಂಡಿದ್ದಾರೆ.

ಗ್ರಾಮದ ನಿವಾಸಿ ಶಿವುಕುಮಾರ್ ಎಂಬುವರು ಗ್ರಾಮದ ಹೊರವಲಯದಲ್ಲಿ ಚಿರತೆ ಕಂಡು ಗ್ರಾಮಸ್ಥರಿಗೆ ವಿಷಯ ಮುಟ್ಟಿಸಿದ್ದಾರೆ. ತಕ್ಷಣ ಗ್ರಾಮಸ್ಥರು ಕೆ.ಎಂ.ದೊಡ್ಡಿ ಪೊಲೀಸ್ ಠಾಣೆ ಮತ್ತು ಅರಣ್ಯ ಇಲಾಖೆ ಅಧಿಕಾರಿ ಗಳಿಗೆ ವಿಷಯ ಮುಟ್ಟಿಸಿದ ಹಿನ್ನಲೆಯಲ್ಲಿ ಅರಣ್ಯ ಇಲಾಖೆ ಅಧಿಕಾರಿ ಗವಿಯಪ್ಪ, ಸಹಾಯಕ ಅಧಿಕಾರಿ ರವಿ ಅವರನ್ನು ಸ್ಥಳಕ್ಕೆ ಕಳಹಿಸಿ ಪರಿಶೀಲಿಸಿದರು.

ಈ ವೇಳೆ ಇಲ್ಲಿನ ಕಾಳಬೋರೇಗೌಡರ ಕಬ್ಬಿನ ಗದ್ದೆಯಲ್ಲಿ ಚಿರತೆ ಹೆಜ್ಜೆ ಗುರುತು ಕಂಡು ಬಂದಿದ್ದು, ಇನ್ನೆರಡು ದಿನಗಳಲ್ಲಿ ಚಿರತೆ ಸೆರೆಗಾಗಿ ಬೋನು ಇಡುವುದಾಗಿ ಅರಣ್ಯ ಇಲಾಖೆ ಸಿಬ್ಬಂದಿ ರವಿ ಗ್ರಾಮಸ್ಥರಿಗೆ ತಿಳಿಸಿದ್ದಾರೆ. ಅಲ್ಲಿವರೆಗೆ ಎಚ್ಚರ ವಹಿಸುವಂತೆ ತಿಳಿಸಿದ್ದಾರೆ. ಈ ವೇಳೆ ಶೆಟ್ಟಹಳ್ಳಿ ಗ್ರಾಪಂ ಸದಸ್ಯ ಸುಂದ್ರೇಶ್, ಎಸ್.ಪಿ.ಚೇತನ್ ಸೇರಿದಂತೆ ಗ್ರಾಮಸ್ಥರು ಉಪಸ್ಥಿತರಿದ್ದರು.

ಬೆಂಗಳೂರು ಅಭಿವೃದ್ಧಿಗೆ ಅಡಿಪಾಯ ಹಾಕಿಕೊಟ್ಟವರು ಕೆಂಪೇಗೌಡರು

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ



ನಾಗಮಂಗಲ, ಜು.4– ನಾಡಪ್ರಭು ಕೆಂಪೇಗೌಡರು ದಕ್ಷ ಆಡಳಿತಗಾರರಾಗಿ ಬೆಂಗಳೂರು ಅಭಿವೃದ್ಧಿಗೆ ಅಡಿಪಾಯ ಹಾಕಿಕೊಟ್ಟರು ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ತಿಳಿಸಿದರು.

ತಾಲೂಕು ಆಡಳಿತ, ನಾಡಪ್ರಭು ಕೆಂಪೇಗೌಡ ಜಯಂತಿ ಆಚರಣಾ ಸಮಿತಿ ಹಾಗೂ ತಾಲೂಕು ಒಕ್ಕಲಿಗರ ಸಂಘ ಮತ್ತು ಟೌನ್ ಒಕ್ಕಲಿಗರ ಸಂಘದ ಆಶ್ರಯದಲ್ಲಿ ಮಂಗಳವಾರ ನಡೆದ ನಾಡಪ್ರಭು ಕೆಂಪೇಗೌಡರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು.

ಕೆಂಪೇಗೌಡರು ಬೆಂಗಳೂರಿನ ಅಭಿವೃದ್ಧಿಗೆ ಶ್ರಮಿಸಿದರು. ಕುವೆಂಪು ಹಾಗೂ ಕೆಂಪೇಗೌಡರು ಈ ನಾಡಿನ ಎರಡು ಕಣ್ಣುಗಳು ಇದ್ದಾಗೆ. ಅವರ ದೂರದೃಷ್ಟಿಯಿಂದ ನಾವು ಇಂದು ಸಹಬಾಳ್ವೆಯಿಂದ ಜೀವನ ನಡೆಸುತ್ತಿದ್ದೇವೆ. ಕೆಂಪೇಗೌಡರರು ಕೇವಲ ಒಂದು ವರ್ಗಕ್ಕೆ ಸೀಮಿತವಾದವರಲ್ಲ. ಸಮಾಜದ ಎಲ್ಲಾ ವರ್ಗದ ಜನರ ಅಭಿವೃದ್ಧಿಗೆ ದುಡಿದಿದ್ದಾರೆ. ಬೆಂಗಳೂರಿಗೂ ನಾಗಮಂಗಲಕ್ಕೂ ತುಂಬಾ ಹತ್ತಿರದ ನಂಟು. ನಾಗಮಂಗಲದ ಜನತೆ ಬೆಂಗಳೂರಿಗೆ ಹೋಗಿ ಉದ್ಯೋಗ ಗಿಟ್ಟಿಸಿಕೊಳ್ಳಲು ಕೆಂಪೇಗೌಡರು ಕಾರಣ ಎಂದು ತಿಳಿಸಿದರು.

ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶ್‌ಗೌಡ ಮಾತನಾಡಿ, ನಾಗಮಂಗಲ ಜನತೆಯ ಆಯ್ಕೆ ಪ್ರಬುದ್ಧತೆಯಿಂದ ಕೂಡಿದೆ. ಉತ್ತಮ ಜನಪ್ರತಿನಿಧಿಯನ್ನು ಆಯ್ಕೆ ಮಾಡಿದ್ದಾರೆ. ಕೆಂಪೇಗೌಡರು ಒಂದು ವರ್ಗಕ್ಕೆ ಸೀಮಿತವಾಗಿಲ್ಲ. ಅವರೂ ಎಲ್ಲಾ ವರ್ಗದ ಜಾತಿ ಜನಾಂಗದ ಒಳಿತಿಗಾಗಿ ದುಡಿದ್ದಿದ್ದಾರೆ ಎಂದರು.

ತಹಶೀಲ್ದಾರ್ ನಯೀಂ ಉನ್ನಿಸಾ ಮಾತನಾಡಿ, ಉತ್ತಮ ಸಮಾಜ ನಿರ್ಮಿಸುವಲ್ಲಿ ಕೆಂಪೇಗೌಡರು ಹಾಕಿಕೊಟ್ಟ ಮಾರ್ಗದಲ್ಲೇ ನಡೆದು ಇತರರಿಗೆ ಮಾದರಿಯಾಗೋಣ. ಇದಕ್ಕೆ ಜನರ ಸಹಕಾರ ಮುಖ್ಯವಾಗಿದ್ದು, ಎಲ್ಲರೂ ಕೈಜೋಡಿಸಿ ಉತ್ತಮ ಸಮಾಜ ನಿರ್ಮಿಸುವತ್ತ ಹೆಜ್ಜೆ ಹಾಕೋಣ ಎಂದರು.

ಕಾರ್ಯಕ್ರಮದಲ್ಲಿ ಆದಿಚುಂಚನಗಿರಿ ಮಠದ ಕಾರ್ಯದರ್ಶಿ ಪ್ರಸನ್ನನಾಥ ಸ್ವಾಮೀಜಿ, ತಾಪಂ ಇಓ ಚಂದ್ರಮೌಳಿ, ಬಿಇಓ ಸುರೇಶ್, ಡಿವೈಎಸ್ಪಿ ಲಕ್ಷ್ಮಿನಾರಾಯಣ್ ಪ್ರಸಾದ್, ಮುಖಂಡರಾದ ಸಿ.ಎನ್.ತಿಮ್ಮರಾಯ, ರಾಜೇಗೌಡ, ಹನುಮಂತಯ್ಯ, ಪುಟ್ಟಮ್ಮ ಮಾಹಿಗೌಡ, ಹೆಚ್.ಟಿ.ಕೃಷ್ಣೇಗೌಡ ಇನ್ನಿತರರಿದ್ದರು.

ಇಂದು ಮಂಡ್ಯಕ್ಕೆ ಕೇಂದ್ರ ಸಚಿವ ಕ್ರಿಶನ್ ಪಾಲ್

ಮಂಡ್ಯ, ಜು.4– ಕೇಂದ್ರ ಇಂಧನ ಮತ್ತು ಬೃಹತ್ ಕೈಗಾರಿಕೆ ರಾಜ್ಯ ಸಚಿವ



ಕ್ರಿಶನ್ ಪಾಲ್ ಗುರ್ಜರ್ ಜು.5 ಮತ್ತು 6 ರಂದು ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಜು.5 ರಂದು ಬೆಳಗ್ಗೆ 10 ಗಂಟೆಗೆ ಶ್ರೀರಂಗನಾಥಸ್ವಾಮಿ ದೇವಾಲಯಕ್ಕೆ ಭೇಟಿ, 11 ಗಂಟೆಗೆ ಮಂಡಲ ಕೋರ್ ಕಮಿಟಿ ಸಭೆ, 12 ಗಂಟೆಗೆ ಮಹಿಳಾ ಫಲಾನುಭವಿಗಳೊಂದಿಗೆ ಸಂವಾದ, ಮಧ್ಯಾಹ್ನ 3 ಗಂಟೆಗೆ ಜಿಲ್ಲಾ ಮಂಡಲ ಕಾರ್ಯಕರ್ತರ ಸಭೆ, ಸಂಜೆ 5 ಗಂಟೆಗೆ ವ್ಯಾಪಾರಸ್ಥರ ಸಭೆಯಲ್ಲಿ ಭಾಗವಹಿಸುವರು.

ಜು.6 ರಂದು ಬೆಳಗ್ಗೆ 10 ಗಂಟೆಗೆ ಸಂಪರ್ಕ್ ಸೇ ಸಮರ್ಥನ್ ಸಭೆ, 12 ಗಂಟೆಗೆ ರೈತ ಫಲಾನುಭವಿಗಳೊಂದಿಗೆ ಸಂವಾದ, ಮಧ್ಯಾಹ್ನ 2.30ಕ್ಕೆ ಪತ್ರಿಕಾಗೋಷ್ಠಿ, ಸಂಜೆ 4 ಗಂಟೆಗೆ ಶ್ರೀರಂಗಪಟ್ಟಣಕ್ಕೆ ಭೇಟಿ ನೀಡಲಿದ್ದಾರೆ ಎಂದು ಸಚಿವರ ಆಪ್ತ ಕಾರ್ಯದರ್ಶಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಡೆಂಗ್ಯೂ ದೂರವಿಡಲು ಮುನ್ನೆಚ್ಚರಿಕೆ ವಹಿಸಿ: ಜಿಪಂ ಸಿಇಓ

ಮಂಡ್ಯ, ಜು.4– ಸ್ವಚ್ಛತೆ ಕಾಪಾಡಿ ಹಾಗೂ ಸೊಳ್ಳೆಗಳನ್ನು ನಿಯಂತ್ರಿಸುವ ಮುನ್ನೆಚ್ಚರಿಕಾ ಕ್ರಮಗಳನ್ನು ವಹಿಸಿ ಡೆಂಗ್ಯೂವನ್ನು ದೂರವಿಡಿ ಎಂದು ಜಿಪಂ ಸಿಇಓ ಶೇಖ್ ತನ್ವೀರ್ ಆಸೀಫ್ ತಿಳಿಸಿದರು.

ಮಂಗಳವಾರ ನಗರದ ಜಯಚಾಮ ರಾಜೇಂದ್ರ ಒಡೆಯರ್ ವೃತ್ತದಲ್ಲಿ ಮಲೇರಿಯಾ ಹಾಗೂ ಡೆಂಗ್ಯೂ ನಿಯಂತ್ರಣ ಕುರಿತ ಜಾಗೃತಿ ಜಾಥಾಗೆ ಚಾಲನೆ ನೀಡಿ ಮಾತನಾಡಿದ ಅವರು, ಈ ಹಿಂದೆ ಜಿಲ್ಲೆಯಲ್ಲಿ ಡೆಂಗ್ಯೂ ಪ್ರಕರಣ ಹೆಚ್ಚು ಕಂಡು ಬರುತ್ತಿತ್ತು. ಈಗ ಅದರ ಪ್ರಮಾಣ ಕಡಿಮೆಯಾಗುತ್ತಿದೆ. ಇದಕ್ಕೆ ಕಾರಣ ಜನರಲ್ಲಿ ಉಂಟಾಗುತ್ತಿರುವ ಅರಿವು. ಸಾರ್ವಜನಿಕರು ಆರೋಗ್ಯ ಇಲಾಖೆ ತಿಳಿಸುವ ನಿಯಂತ್ರಾ ಕ್ರಮಗಳನ್ನು ಅನುಸರಿಸಿ ಇಲಾಖೆಯೊಂದಿಗೆ ಕೈ ಜೋಡಿಸಿ ಎಂದರು.

ಕಳೆದ ವರ್ಷದಲ್ಲಿ ಡೆಂಗ್ಯೂನಿಂದ ಯಾವುದೇ ಸಾವು ಸಂಭವಿಸಿಲ್ಲ. ಕಳೆದ ವರ್ಷ 297 ಡೆಂಗ್ಯೂ ಪ್ರಕರಣಗಳು ವರದಿಯಾಗಿತ್ತು. ಈ ಬಾರಿ 27 ಪ್ರಕರಣಗಳು ವರದಿಯಾಗಿದೆ. ಜಿಲ್ಲೆಯಲ್ಲಿ ಮಲೇರಿಯಾ ಪ್ರಕರಣಗಳು ಸಂಪೂರ್ಣವಾಗಿ ಕಡಿಮೆಯಾದಂತೆ ಡೆಂಗ್ಯೂ ಪ್ರಕರಣಗಳು ಕೂಡ ಕಡಿಮೆಯಾಗಬೇಕಿದೆ ಎಂದು



ಹೇಳಿದರು. ಡಿಎಚ್‌ಓ ಡಾ.ಧನಂಜಯ ಮಾತನಾಡಿ, ನಿಂತ ನೀರಿನಲ್ಲಿ ಸೊಳ್ಳೆಗಳು ಉತ್ಪತ್ತಿಯಾಗುತ್ತದೆ. ಸಾರ್ವಜನಿಕರು ಮನೆಯ ಸುತ್ತಲೂ ನೀರು ನಿಲ್ಲದಂತೆ ಎಚ್ಚರಿಕೆ ವಹಿಸಿ. ಸೊಳ್ಳೆಯ ಕಡಿತದಿಂದ ಡೆಂಗ್ಯೂ ಹರಡುತ್ತದೆ. ಸೊಳ್ಳೆ ಪರದೆ ಬಳಸಿ ಎಂದರು. ಈ ವೇಳೆ ಮಾನಸಿಕ ರೋಗ ತಜ್ಞ ಡಾ.ಕೆ.ಪಿ.ಅಶ್ವಥ್, ಸರ್ವೇಕ್ಷಣಾಧಿಕಾರಿ ಡಾ.ಸಂಜಯ್, ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಡಾ.ಎಂ.ಎನ್. ಆಶಾಲತಾ, ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ ವೇಣುಗೋಪಾಲ್, ವೈದ್ಯರಾದ ಡಾ.ಅನಿಲ್ ಕುಮಾರ್, ಡಾ.ಮಮತಾ, ಸೋಮಶೇಖರ್ ಇನ್ನಿತರರಿದ್ದರು.

ಕವಿಕಾವ್ಯ ಸಮ್ಮೇಳನಕ್ಕೆ ಕವನಗಳು, ಪ್ರಶಸ್ತಿಗೆ ಹೆಸರುಗಳ ಆಹ್ವಾನ

ಮಂಡ್ಯ, ಜು.4– ಡಾ.ಜೀಶಂಪ ಸಾಹಿತ್ಯ ವೇದಿಕೆ, ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಯುವಸೇನೆ, ಕನ್ನಂಬಾಡಿ ಹಾಗೂ ಕಾವೇರಿ ಪ್ರಭ ದಿನಪತ್ರಿಕೆ ವತಿಯಿಂದ ದೇಶದ 76ನೇ ಸ್ವಾತಂತ್ರ್ಯೋತ್ಸವ ಅಂಗವಾಗಿ ಆ.20ರಂದು ನಗರದ ಗಾಂಧಿ ಭವನದಲ್ಲಿ 31ನೇ ರಾಜ್ಯಮಟ್ಟದ ಕವಿಕಾವ್ಯ ಸಮ್ಮೇಳನ ಆಯೋಜಿಸಿದ್ದು, ಆಸಕ್ತರಿಂದ ಕವನಗಳನ್ನು ಹಾಗೂ ವಿವಿಧ ಪ್ರಶಸ್ತಿಗೆ ಸಾಧಕರಿಂದ ಹೆಸರನ್ನು ಆಹ್ವಾನಿಸಲಾಗಿದೆ.

ಆಸಕ್ತ ಕವಿಗಳು 25 ಸಾಲಿನ 2 ಕವನಗಳು, ಕಿರು ಪರಿಚಯ, ಫೋಟೋ, ಮೊಬೈಲ್ ಸಂಖ್ಯೆ, ವಿಳಾಸ ಮತ್ತು ಸಾಧಕರು ಸಾಧನೆಯ ವಿವರಗಳನ್ನು ಜು.15ರೊಳಗೆ ಕಳುಹಿಸಬೇಕು. ವ್ಯಾಟ್ಸಪ್‌ನಲ್ಲಿ ಕವಿಗಳು ಮೊದಲು ಹೆಸರು ನೋಂದಣಿ ಮಾಡಿಕೊಳ್ಳಬೇಕು. ನೋಂದಾಯಿತ ಕವಿಗಳು, ಸಾಧಕರು ಕಾರ್ಯಕ್ರಮಕ್ಕೆ ಕಡ್ಡಾಯವಾಗಿ ಆಗಮಿಸಬೇಕು. ಕವನಗಳು ಯಾವುದಾದರೂ ವಿಷಯವನ್ನು ಒಳಗೊಂಡಿರಬಹುದು. 50 ಮಂದಿ ಕವಿಗಳಿಗೆ ಕವಿಗೋಷ್ಠಿಯಲ್ಲಿ ಅವಕಾಶ ಕಲ್ಪಿಸಲಾಗುವುದು. ಉತ್ತಮ ಸಾಧಕರನ್ನು ರಾಜ್ಯ ಮಟ್ಟದ ಕವಿಕಾವ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷರನ್ನಾಗಿ ಆಯ್ಕೆ ಮಾಡಿ ಗೌರವಿಸಲಾಗುವುದು. ಕವಿಗೋಷ್ಠಿಯಲ್ಲಿ ಭಾಗವಹಿಸುವವರಿಗೆ ಕವನ ವಾಚನಕ್ಕೆ ಅವಕಾಶ ಕಲ್ಪಿಸಿ, ಪ್ರಮಾಣ ಪತ್ರ, ನೆನಪಿನ ಕಾಣಿಕೆ ನೀಡಿ ಗೌರವಿಸಲಾಗುವುದು.

10 ಉತ್ತಮ ಕವನಗಳಿಗೆ 'ಕಾವ್ಯಶ್ರೀ' ಹಾಗೂ 20 ಮಂದಿ ಸಾಧಕರಿಗೆ 'ಕನ್ನಡರತ್ನ', ಹಾಗೂ 'ಕವಿರತ್ನ', 'ಶಿಕ್ಷಣ ರತ್ನ', 'ಆಡಳಿತ ಸೇವಾ ರತ್ನ', 'ಸಮಾಜ ಸೇವಾ ರತ್ನ', 'ಕಲಾರತ್ನ', ರಾಜ್ಯ ಮಟ್ಟದ ಪ್ರಶಸ್ತಿಗಳನ್ನು ನೀಡಲಿದ್ದು, ಸಾಧಕರಿಂದ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತರು ಮೊ.9448424380ಗೆ ವ್ಯಾಟ್ಸಪ್ ಮೂಲಕ ವಿವರ ಕಳಿಸಬೇಕಾಗಿ ವಿನಂತಿ.

ಹೆಚ್ಚಿನ ವಿವರಕ್ಕಾಗಿ ವಿಳಾಸ: ಎಸ್. ಕೃಷ್ಣಸ್ವರ್ಣಸಂದ್ರ, ಕವಿಮಿತ್ರ, ನಂ–767, ಸ್ವರ್ಣಸಂದ್ರ, ಮಂಡ್ಯ–2 ಸಂಪರ್ಕಿಸಲು ವಿನಂತಿ. ಹೆಚ್ಚಿನ ವಿವರಕ್ಕಾಗಿ ಮೊ: 9448424380 ಸಂಪರ್ಕಿಸಬಹುದಾಗಿದೆ.

ಎತ್ತಿನಗಾಡಿಗೆ ಕಾರು ಡಿಕ್ಕಿ: ಎತ್ತು ಸಾವು

ಶ್ರೀರಂಗಪಟ್ಟಣ, ಜು.4– ಎತ್ತಿನ ಗಾಡಿಗೆ ಕಾರು ಡಿಕ್ಕಿ ಹೊಡೆದ ಪರಿಣಾಮ ಎತ್ತು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಮದ ಸಾಯಿ ಗಾರ್ಮೆಂಟ್ಸ್ ಬಳಿ ಮಂಗಳವಾರ ಸಂಜೆ ನಡೆದಿದೆ.

ಗ್ರಾಮದ ನಿವಾಸಿ ದರ್ಶನ್ ಎಂಬುವರಿಗೆ ಸೇರಿದ ಎತ್ತು ಸಾವನ್ನಪ್ಪಿದ್ದು, ಘಟನೆಯಲ್ಲಿ ಎತ್ತಿನಗಾಡಿ ಜಖಂಗೊಂಡಿದ್ದು, ದರ್ಶನ್ ಗಾಯಗೊಂಡಿದ್ದಾರೆ. ಇಂದು ಸಂಜೆ ಮೈಸೂರು ಕಡೆಯಿಂದ ಬಂದ ಸ್ವಿಫ್ಟ್ ಕಾರು ತಾಲೂಕಿನ ಕೆ.ಶೆಟ್ಟಹಳ್ಳಿ ಗ್ರಾಮದ ಸಾಯಿ ಗಾರ್ಮೆಂಟ್ಸ್ ಬಳಿ ಹಿಂಬದಿಯಿಂದ ಎತ್ತಿನಗಾಡಿಗೆ ಡಿಕ್ಕಿ ಹೊಡೆದಿದೆ. ಈ ವೇಳೆ ಎತ್ತಿನಗಾಡಿ ರಸ್ತೆ ಬದಿಗೆ ಮಗುಚಿ ಬಿದ್ದುದ್ದು, ಒಂದು ಎತ್ತು ಸಾವನ್ನಪ್ಪಿ, ಮತ್ತೊಂದು ಎತ್ತು ಸೇರಿದಂತೆ ದರ್ಶನ್ ಗಾಯಗೊಂಡಿದ್ದಾರೆ. ದರ್ಶನ್ ಅವರನ್ನು ಶ್ರೀರಂಗಪಟ್ಟಣದ ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಲಾಗಿದ್ದು, ಕಾರಿನಲ್ಲಿದ್ದ ಮಂಡ್ಯ ಮಿಮ್ಸ್ ವೈದ್ಯ ಹರೀಶ್, ಅವರ ಕುಟುಂಬ ಪ್ರಾಣಪಾಯದಿಂದ ಪಾರಾಗಿದ್ದಾರೆ. ಈ ಸಂಬಂಧ ಶ್ರೀರಂಗಪಟ್ಟಣ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ.

ಜು.6 ಮೈಷುಗರ್ ಮಿಲ್ ಚಾಲನಾ ಕಾರ್ಯಕ್ರಮ

ಮಂಡ್ಯ, ಜು.4– ಮೈಸೂರು ಸಕ್ಕರೆ ಕಾರ್ಖಾನೆಯ 2023–24ನೇ ಸಾಲಿನ ಮಿಲ್ ಚಾಲನಾ ಕಾರ್ಯಕ್ರಮ ಜು.6ರಂದು ಬೆಳಗ್ಗೆ 9 ಗಂಟೆಗೆ ಮೈಷುಗರ್ ಮಿಲ್ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕೇನ್ ಕ್ಯಾರಿಯರ್‌ಗೆ ಚಾಲನೆ ನೀಡಲಿದ್ದು, ಕೈಮಗ್ಗ ಮತ್ತು ಜವಳಿ, ಕಬ್ಬು ಅಭಿವೃದ್ಧಿ ಹಾಗೂ ಸಕ್ಕರೆ ಕೃಷಿ ಮಾರುಕಟ್ಟೆ ಸಚಿವ ಶಿವಾನಂದ ಪಾಟೀಲ್ ಕೇನ್ ಲೆವಲರ್‌ಗೆ ಚಾಲನೆ ನೀಡಲಿದ್ದಾರೆ. ಶಾಸಕ ಪಿ.ರವಿಕುಮಾರ್ ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಸಂಸದೆ ಸುಮಲತಾ, ಶಾಸಕರಾದ ಮರಿತಿಬ್ಬೇಗೌಡ, ಮಧು ಮಾದೇಗೌಡ, ದಿನೇಶ್ ಗೂಳಿಗೌಡ, ಪಿ.ಎಂ.ನರೇಂದ್ರಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ದರ್ಶನ್ ಪುಟ್ಟಣ್ಣಯ್ಯ, ಹೆಚ್.ಟಿ.ಮಂಜು, ಕೆ.ಎಂ.ಉದಯ್ ಭಾಗವಹಿಸಲಿದ್ದಾರೆ.

ಸ್ಟೇಟ್ ಲೆವೆಲ್ ಓಪನ್ ಕರಾಟೆ ಚಾಂಪಿಯನ್ ಶಿಪ್



ಯೂತ್ ಮೆರಿಟೇಲ್ ಆರ್ಟ್ಸ್ ಅಕಾಡೆಮಿ ವತಿಯಿಂದ ಆಯೋಜಿಸಿದ್ದ ಕರಾಟೆ ಸ್ಪರ್ಧೆಯನ್ನು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ. ದೇವೇಗೌಡರು ಉದ್ಘಾಟಿಸಿದರು. ಸ್ಪರ್ಧೆಯಲ್ಲಿ ಮೈಸೂರಿನ ಕಾಮನಕೆರೆ ಹುಂಡಿ ಗ್ರಾಮದ ನಿವಾಸಿ ಅನಂತು ಮತ್ತು ಗೀತಾ ದಂಪತಿಯ ಪುತ್ರಿ ಜೀವಿತ. ಎ ಪ್ರಥಮ ಸ್ಥಾನವನ್ನು ಪಡೆದಳು. ಈಕೆಗೆ ಶಾಸಕರಾದ ಜಿ.ಟಿ. ದೇವೇಗೌಡರು ಬಹುಮಾನವನ್ನು ಸಹ ವಿತರಿಸಿದರು. ಚಿತ್ರದಲ್ಲಿ ಸ್ಪರ್ಧೆಯ ಆಯೋಜಕರು ಮತ್ತು ಇನ್ನಿತರ ಮುಖಂಡರನ್ನು ಕಾಣಬಹುದು.

ಮಾಜಿ ಕ್ರಿಕೆಟಿಗ ಅಜಿತ್ ಅಗರ್ಕರ್ ಬಿಸಿಸಿಐ ಆಯ್ಕೆ ಸಮಿತಿಯ ನೂತನ ಅಧ್ಯಕ್ಷ

ಮುಂಬೈ: ಬಿಸಿಸಿಐ ಆಯ್ಕೆ ಸಮಿತಿಯ ನೂತನ ಅಧ್ಯಕ್ಷರಾಗಿ ಭಾರತ ತಂಡದ ಮಾಜಿ ಕ್ರಿಕೆಟಿಗ ಅಜಿತ್ ಅಗರ್ಕರ್ ನೇಮಕವಾಗಿದ್ದಾರೆ.



ಈ ಹಿಂದಿನ ಆಯ್ಕೆ ಸಮಿತಿ ಅಧ್ಯಕ್ಷ ಚೇತನ್ ಶರ್ಮಾ ರಾಜಿನಾಮೆ ಬಳಿಕ ತೆರವಾಗಿದ್ದ ಬಿಸಿಸಿಐ ಆಯ್ಕೆ ಸಮಿತಿ ಅಧ್ಯಕ್ಷ ಸ್ಥಾನಕ್ಕೆ 45 ವರ್ಷದ ಅಗರ್ಕರ್ ಅವರನ್ನು ಬಿಸಿಸಿಐ ನೇಮಕ ಮಾಡಿದೆ. ಆಯ್ಕೆ ಸಮಿತಿ ಮುಖ್ಯಸ್ಥರ ಸ್ಥಾನಕ್ಕೆ ಬಿಸಿಸಿಐ ಅರ್ಜಿ ಆಹ್ವಾನಿಸಿತ್ತು ಅದರಲ್ಲಿ ಅಂತಿಮ ಪಟ್ಟಿಯನ್ನು ರಚಿಸಲಾಗಿತ್ತು. ಸುಲಕ್ಷಣ ನಾಯಕ್, ಅಶೋಕ್ ಮಲ್ಹೋತ್ರಾ ಮತ್ತು ಜತಿನ್ ಪರಾಂಜಪೆ ಅವರನ್ನೊಳಗೊಂಡ ಕ್ರಿಕೆಟ್ ಸಲಹಾ ಸಮಿತಿಯು ಅಭ್ಯರ್ಥಿಗಳ ಸಂದರ್ಶನ ನಡೆಸಿದ ಬಳಿಕ ಅಜಿತ್ ಅಗರ್ಕರ್ ಅವರನ್ನು ಈ ಸ್ಥಾನಕ್ಕೆ ನೇಮಿಸಲಾಗಿದೆ. ಆ ಮೂಲಕ ಅಗರ್ಕರ್, ಶಿವಸುಂದರ್ ದಾಸ್, ಸಲೀಲ್ ಅಂಕೋಲಾ, ಸುಬ್ರೋತೊ ಬ್ಯಾನರ್ಜಿ ಮತ್ತು ಎಸ್ ಶರತ್ ಸೇರಿದಂತೆ ಐದು ಸದಸ್ಯರ ಸಮಿತಿಯನ್ನು ಒಳಗೊಂಡಿರುವ ತಂಡವನ್ನು ಸೇರಿಕೊಳ್ಳಲಿದ್ದಾರೆ.

ಖಾಸಗಿ ವಾಹಿನಿಯೊಂದರ ರಹಸ್ಯ ಕಾರ್ಯಾಚರಣೆಯಲ್ಲಿ ಭಾರತೀಯ ಕ್ರಿಕೆಟ್‌ನ ಆಂತರಿಕ ವಿಚಾರಗಳನ್ನು ಬಹಿರಂಗಪಡಿಸಿ ವಿವಾದಕ್ಕೆ ಗುರಿಯಾಗಿದ್ದ ಆಯ್ಕೆ ಸಮಿತಿ ಮಾಜಿ ಮುಖ್ಯಸ್ಥ ಚೇತನ್ ಶರ್ಮಾ, ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದರು. ಅವರ ರಾಜೀನಾಮೆ ಬಳಿಕ ಕಳೆದ ಫೆಬ್ರವರಿ ತಿಂಗಳಿನಿಂದ ಮುಖ್ಯ ಆಯ್ಕೆಗಾರರ ಕುರ್ಚಿ ಖಾಲಿಯಾಗಿತ್ತು.

191 ಏಕದಿನ ಪಂದ್ಯ ಹಾಗೂ 26 ಟೆಸ್ಟ್ ಪಂದ್ಯಗಳಲ್ಲಿ ಆಡಿದ ಅನುಭವವಿರುವ ಅಗರ್ಕರ್, ಈ ಉನ್ನತ ಸ್ಥಾನಕ್ಕೆ ಮುಂಚೂಣಿಯಲ್ಲಿದ್ದರು. ಒಂಬತ್ತು ವರ್ಷಗಳ ತಮ್ಮ ವೃತ್ತಿಜೀವನದಲ್ಲಿ ಆಲ್‌ರೌಂಡರ್ ಆಗಿ ಗುರುತಿಸಿಕೊಂಡಿದ್ದ ಅವರು, 349 ಅಂತಾರಾಷ್ಟ್ರೀಯ ವಿಕೆಟ್‌ಗಳನ್ನು ಪಡೆದಿದ್ದಾರೆ.

2017ರಿಂದ 2019ರವರೆಗೆ, ಅಗರ್ಕರ್ ಅವರು ಮುಂಬೈ ರಣಜಿ ತಂಡದ ಆಯ್ಕೆಗಾರರ ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ್ದರು. ಅಲ್ಲದೆ ರಿಕಿ ಪಾಂಟಿಂಗ್ ಮತ್ತು ಸೌರವ್ ಗಂಗೂಲಿ ಅವರಿದ್ದ ಐಪಿಎಲ್ ಫ್ರಾಂಚೈಸಿ ಡೆಲ್ಲಿ ಕ್ಯಾಪಿಟಲ್ಸ್ ತಂಡದಲ್ಲಿ ಸಹಾಯಕ ಕೋಚ್ ಆಗಿಯೂ ಕಾರ್ಯ ನಿರ್ವಹಿಸಿದ್ದಾರೆ.

ಸ್ಯಾಫ್ ಚಾಂಪಿಯನ್ಸ್ ಅಂತಿಮ ಹಣಾಹಣಿ

ಪೆನಾಲ್ಟಿಯಲ್ಲಿ ರೋಚಕ ಗೆಲುವು: 9ನೇ ಬಾರಿ ಭಾರತ ಚಾಂಪಿಯನ್



ಬೆಂಗಳೂರು: ರೋಚಕ ಹೋರಾಟದಲ್ಲಿ ಭಾರತ ಫುಟ್‌ಬಾಲ್ ತಂಡ 2023ರ ಸಾಲಿನ ಸ್ಯಾಫ್ (SAFF) ಫುಟ್‌ಬಾಲ್ ಚಾಂಪಿಯನ್ ಪಟ್ಟವನ್ನು ಅಲಂಕರಿಸಿದೆ. ಸಡನ್‌ಡೆತ್ ಪೆನಾಲ್ಟಿಯಲ್ಲಿ ಭಾರತ ಕುವೈಟ್ ತಂಡವನ್ನು ಮಣಿಸುವ ಮೂಲಕ 9ನೇ ಬಾರಿ ಪ್ರಶಸ್ತಿ ಜಯಿಸಿತು.

ಕಂಠೀರವ ಮೈದಾನದಲ್ಲಿ ನಡೆದ ಫೈನಲ್ ಪಂದ್ಯದ ನಿಗದಿತ 90 ನಿಮಿಷದ ವೇಳೆಗೆ ಎರಡು ತಂಡಗಳು 1–1 ಗೋಲು ಹೊಡೆದ ಪರಿಣಾಮ ಫಲಿತಾಂಶ ನಿರ್ಧಾರಕ್ಕೆ ಹೆಚ್ಚುವರಿ ಸಮಯ ನೀಡಲಾಯಿತು. 30 ನಿಮಿಷ ಅವಧಿಯ ಆಟದಲ್ಲಿ ಇತ್ತಂಡಗಳ ಪರ ಯಾವುದೇ ಗೋಲು ಸಿಡಿಯದ ಕಾರಣ ಪೆನಾಲ್ಟಿಗೆ ಮೊರೆ ಹೋಗಲಾಯಿತು.

5 ಪೆನಾಲ್ಟಿ ಅವಕಾಶದಲ್ಲಿ ಭಾರತ ಮತ್ತು ಕುವೈಟ್ ತಲಾ 4 ಗೋಲು ಹೊಡೆದ ಪರಿಣಾಮ ಪಂದ್ಯ ಸಡನ್‌ಡೆತ್‌ನತ್ತ ತಿರುಗಿತು. ಈ ವೇಳೆ ಭಾರತದ ಮಹೇಶ್ ಗೋಲು ಹೊಡೆದರೆ ಕುವೈಟ್ ಆಟಗಾರ ಹೊಡೆದ ಗೋಲನ್ನು ಗೋಲ್ ಕೀಪರ್ ಗುರುಪ್ರೀತ್ ತಡೆಯುವ ಮೂಲಕ ಭಾರತಕ್ಕೆ ಗೆಲುವು ತಂದುಕೊಟ್ಟರು. ಈ ಹಿಂದೆ ಭಾರತ 1993, 1997, 1999, 2005, 2009, 2011, 2015, 2021 ರಲ್ಲಿ ಪ್ರಶಸ್ತಿ ಜಯಿಸಿತ್ತು.

ಒಂದು ಕಾಲದಲ್ಲಿ ಕಂಗೊಳಿಸುತ್ತಿದ್ದ 'ಗಂಗಾದೇವಿ ಮಾರುಕಟ್ಟೆ' ಈಗ ಕೊಂಪೆಯಾಗಿ ಬಿಕೋ ಎನ್ನುತ್ತಿದೆ

ಮಾಲ್‌ಗಳ ಕಡೆ ಮನ ಹರಿದಾಗ ನಮ್ಮ ಮಾರುಕಟ್ಟೆ ಮರೆತು ಹೋದವು...

ಮೈಸೂರು, ಜು.4(ಎಂಕೆ)– ಮೈಸೂರಿನ ಕೆ.ಆರ್.ಮೊಹಲ್ಲಾ ವ್ಯಾಪ್ತಿಯ ಸುಣ್ಣದಕೇರಿಯಲ್ಲಿರುವ 'ಗಂಗಾದೇವಿ ಮಾರುಕಟ್ಟೆ'ಗೆ ಕಾಯಕಲ್ಪವಾಗಬೇಕಿದೆ.

ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ಸುಮಾರು 70 ವರ್ಷಗಳಷ್ಟು ಹಳೆಯ ಮಾರುಕಟ್ಟೆ ಇದಾಗಿದ್ದು, ಹತ್ತಾರು ಮಂದಿ ವ್ಯಾಪಾರಿಗಳು, ಜನಜಂಗುಳಿಯಿಂದ ತುಂಬಿ ತುಳುಕುತ್ತಿದ್ದ ಮಾರುಕಟ್ಟೆ ಈಗ ಐದಾರು ಮಂದಿಗೆ ಬಂದು ನಿಂತಿದೆ. ಪುಂಡರ ಹಾವಳಿ, ಮೂಲ ಸೌಕರ್ಯ ಹಾಗೂ ವ್ಯಾಪಾರಿಗಳ ಕೊರತೆಯಿಂದಾಗಿ ಮಾರುಕಟ್ಟೆ ಬಿಕೋ ಎನ್ನುತ್ತಿದೆ.



'ಗಂಗಾದೇವಿ ಮಾರುಕಟ್ಟೆ' ಜನಸಂದಣಿ ಹೆಚ್ಚಾಗಿರುವ ಸುಣ್ಣದಕೇರಿಯ ಕೇಂದ್ರ ಭಾಗದಲ್ಲಿದ್ದರೂ ಹಣ್ಣು–ತರಕಾರಿ ಮಾರಾಟ ಮಾಡುವವರರ ಸಂಖ್ಯೆ ಕಡಿಮೆಯಾದಂತೆ ಕೊಳ್ಳುವ ಗ್ರಾಹಕರ ಸಂಖ್ಯೆಯೂ ಕಡಿಮೆಯಾಗಿದೆ. ಶೌಚಾಲಯ ಸಂಪೂರ್ಣವಾಗಿ ಹಾಳಾಗಿದ್ದು, ನೀರು ಹಾಗೂ ವಿದ್ಯುತ್ ಪೂರೈಕೆ ಸಮರ್ಪಕವಾಗಿಲ್ಲ. ಪಾಲಿಕೆ ವತಿಯಿಂದ ಮಾರುಕಟ್ಟೆಯ ಒಂದು ಬದಿಯಲ್ಲಿ ಶೌಚಾಲಯ ನಿರ್ಮಿಸಿದ್ದರೂ ಬೀಗ ಹಾಕಲಾಗಿದೆ. ಸದ್ಯಕ್ಕೆ ಕೇವಲ 6 ಮಂದಿ ವ್ಯಾಪಾರಿಗಳಷ್ಟೇ ಬೆಳಗ್ಗೆಯಿಂದ ಮಧ್ಯಾಹ್ನ 12 ಗಂಟೆಯವರೆಗೆ ಮಾರುಕಟ್ಟೆಯ ಒಳಗಡೆ ವ್ಯಾಪಾರ ಮಾಡಿ, ನಂತರ ತಮ್ಮ ತಮ್ಮ ಮನೆ ಎದುರು ಹಾಗೂ ವ್ಯಾಪಾರ ಚೆನ್ನಾಗಿ ಆಗುವಂತಹ ಸ್ಥಳಗಳಿಗೆ ಹೊರಡುತ್ತಿದ್ದಾರೆ.

15–20 ವರ್ಷದ ಹಿಂದೆ ಸುಣ್ಣದಕೇರಿ, ಸುಣ್ಣದಬೀದಿ, ನಾಲಾಬೀದಿ, ಹಲ್ಲಿನಬೀದಿ, ಕಾಕರವಾಡಿ(ರಹಮಾನಿಯ ಮೊಹಲ್ಲಾ), ಕುಂಬಾರಗೇರಿ ಸೇರಿದಂತೆ ವಿವಿಧ ಬಡಾವಣೆಯ ಜನರ ನೆಚ್ಚಿನ ಮಾರುಕಟ್ಟೆ ಇದಾಗಿತ್ತು ಅಗ್ರಹಾರ ಮಾರುಕಟ್ಟೆಗಿಂತಲೂ ಹೆಚ್ಚಿನ ಜನರು 'ಗಂಗಾದೇವಿ ಮಾರುಕಟ್ಟೆ'ಗೆ ಬರುತ್ತಿದ್ದರು. ಎಲ್ಲಾ ಬಗೆಯ ವಸ್ತುಗಳು ದೊರೆಯುತ್ತಿದ್ದ ಜಾಗದಲ್ಲಿ ಏನೂ ಇಲ್ಲದಂತಾಗಿದೆ ಎಂದು ಸ್ಥಳಿಯ ನಿವಾಸಿಯೊಬ್ಬರು 'ಮೈಸೂರು ಮಿತ್ರ'ನಿಗೆ ನೊಂದು ನುಡಿದರು.



ಅಭಿವೃದ್ಧಿ: ಬಯಲು ಪ್ರದೇಶವಾಗಿದ್ದ 'ಗಂಗಾದೇವಿ ಮಾರುಕಟ್ಟೆ'ಯನ್ನು ಈ ಹಿಂದಿನ ಪಾಲಿಕೆ ಸದಸ್ಯರಾಗಿದ್ದ(ಹಾಲಿ ಮೇಯರ್) ಶಿವಕುಮಾರ್, ಅಭಿವೃದ್ಧಿ ಮಾಡಿದ್ದರು. ಕುಳಿತು ವ್ಯಾಪಾರ ಮಾಡಲು ಕಟ್ಟೆ ನಿರ್ಮಾಣ, ಗೋಡೌನ್, ಶೌಚಾಲಯ ಹಾಗೂ ವಿಶೇಷ ವಿನ್ಯಾಸವುಳ್ಳ ದೀಪದ ಕಂಬಗಳನ್ನು ಅಳವಡಿಸಲಾಗಿತ್ತು. ಆದರೆ ದಿನಕಳೆದಂತೆ ಮಾರುಕಟ್ಟೆಯ ನಿರ್ವಹಣೆಯಾಗದೆ ಖಾಲಿ ಹೊಡೆಯುವ ಸ್ಥಿತಿಗೆ ಬಂದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಪುಂಡರ ಹಾವಳಿ: ಕೆಲ ಪುಂಡರು ಮಾರುಕಟ್ಟೆ ಒಳಗಡೆ ಜೂಜಾಡುವುದು, ಮದ್ಯಪಾನ ಮಾಡುವುದು ವಿಪರೀತವಾಗಿತ್ತು. ಸದ್ಯಕ್ಕೆ ಮಾರುಕಟ್ಟೆ ಗೇಟ್‌ಗೆ ಬೀಗ ಹಾಕಿಕೊಳ್ಳುವುದರಿಂದ ಕಡಿಮೆಯಾಗಿದೆ. ಆದರೆ ಇದ್ದ ಶೌಚಾಲಯ ಸಂಪೂರ್ಣವಾಗಿ ಹಾಳಾಗಿದೆ. ನೀರು ಬಿಟ್ಟಾಗಷ್ಟೇ ಬರಲಿದ್ದು, ಎಲ್ಲಾ ಸಮಯದಲ್ಲೂ ನೀರು ಬರುವುದಿಲ್ಲ. ವಿದ್ಯುತ್ ಸಂಪರ್ಕವಿಲ್ಲ. ಹಣ್ಣು–ತರಕಾರಿ ವ್ಯಾಪಾರ ನಡೆಯ ಬೇಕಿದ್ದ ಜಾಗದಲ್ಲಿ ನಗರಪಾಲಿಕೆಯ ಕಸ ಸಂಗ್ರಹಣೆ ಗಾಡಿಗಳನ್ನು ನಿಲ್ಲಿಸಲಾಗಿದೆ ಎಂದರು.

50–60 ವರ್ಷದಿಂದ ವ್ಯಾಪಾರ ಮಾಡುತ್ತಿದ್ದೇನೆ...

ಸುಣ್ಣದಕೇರಿ 'ಗಂಗಾದೇವಿ ಮಾರುಕಟ್ಟೆ' ಯಲ್ಲಿ 50–60 ವರ್ಷದಿಂದ ತರಕಾರಿ ವ್ಯಾಪಾರ ಮಾಡುತ್ತಿದ್ದೇನೆ. ನನ್ನೊಂದಿಗೆ ವ್ಯಾಪಾರ ಮಾಡುತ್ತಿದ್ದ ಸುಮಾರು ಜನ ತೀರಿಕೊಂಡರು. ನನ್ನನ್ನು ಸೇರಿ ಈಗ 6 ಜನರಷ್ಟೇ ವ್ಯಾಪಾರ ಮಾಡುತ್ತಿದ್ದೇವೆ ಎಂದು ತರಕಾರಿ ವ್ಯಾಪಾರಿ ಪುಟ್ಟತಾಯಮ್ಮ ತಿಳಿಸಿದರು.

ಮೊದಲು ತುಂಬಾ ಚೆನ್ನಾಗಿ ವ್ಯಾಪಾರ ನಡೆಯುತ್ತಿತ್ತು. ಬೆಳಗ್ಗೆಯಿಂದ ರಾತ್ರಿ ವರೆಗೂ ವ್ಯಾಪಾರ ಮಾಡುತ್ತಿದ್ದೆವು. ಈಗ ಮಧ್ಯಾಹ್ನದವರೆಗೆ ಒಳಗಡೆ, ನಂತರ ಹೊರಗಡೆ ವ್ಯಾಪಾರ ಮಾಡುತ್ತೇವೆ. ನಾನಂತು ಮಾರುಕಟ್ಟೆ ಗೇಟ್ ಬಳಿ ಸಂಜೆವರೆಗೂ ವ್ಯಾಪಾರಿ ಮಾಡಿ, ನಂತರ ಗೇಟ್‌ಗೆ ಬೀಗ ಹಾಕಿಕೊಂಡು ಹೋಗುತ್ತೇನೆ. ಮಾರುಕಟ್ಟೆಗೆ ಬರುವವರ ಸಂಖ್ಯೆ ತುಂಬಾ ಕಡಿಮೆ ಎಂದರು.



ಭಾರತೀಯ ವಾಯುಪಡೆ(ಐಎಎಫ್)ಯ ಸಂಚಾರಿ ವಿಶೇಷ ಬಸ್, ಮಡಿಕೇರಿಯಿಂದ ಮಂಗಳವಾರ ಮೈಸೂರು ತಲುಪಿದೆ. ಇಲ್ಲಿನ ಎನ್‌ಐಇ ಸಂಸ್ಥೆ ಆವರಣದಲ್ಲಿ ನಿಲುಗಡೆ ಮಾಡಿದ್ದು, ಒಂದು ವಾರ ಮೈಸೂರಿನ ವಿವಿಧ ಶಿಕ್ಷಣ ಸಂಸ್ಥೆಗಳಲ್ಲಿ ವೀಕ್ಷಣೆಗೆ ಲಭ್ಯವಾಗಲಿದೆ. ವಾಯುಪಡೆಯಲ್ಲಿ ವೃತ್ತಿ ಜೀವನಕ್ಕೆ ಯುವ ಸಮುದಾಯವನ್ನು ಪ್ರೋತ್ಸಾಹಿಸುವ ಉದ್ದೇಶದಿಂದ ರೂಪಿಸಿರುವ ಈ ವಿಶೇಷ ಬಸ್, ದೇಶಾದ್ಯಂತ ಸಂಚರಿಸಲಿದೆ.

ನೈಜ ದುರ್ಬಲ ಬುಡಕಟ್ಟು ಸಮುದಾಯವನ್ನು ಮುಖ್ಯವಾಹಿನಿಗೆ ತರಲು

ರಾಷ್ಟ್ರಪತಿ ದ್ರೌಪದಿ ಮುರ್ಮು ಕರೆ





ಬೆಂಗಳೂರು: ನೈಜ ದುರ್ಬಲ ಬುಡಕಟ್ಟು ಜನರ ಸರ್ವಾಂಗೀಣ ವಿಕಾಸಕ್ಕಾಗಿ ವಸತಿ, ಶಿಕ್ಷಣ, ಆರ್ಥಿಕ ಚಟುವಟಿಕೆಗಳು, ಆರೋಗ್ಯ ಸೌಕರ್ಯಗಳ ಕನಿಷ್ಠ ಮೂಲಸೌಕರ್ಯಗಳನ್ನು ಕಲ್ಪಿಸಿ, ಸುಧಾರಣೆಯ ದಾರಿ ತೋರಿಸಿದರೆ ಸಾಕು ಅವರು ಮುನ್ನಡೆಯಬಲ್ಲರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ನೈಜ ದುರ್ಬಲ ಬುಡಕಟ್ಟುಗಳ ಕಲ್ಯಾಣಕ್ಕಾಗಿ ಆಂದೋಲನದ ಮಾದರಿಯಲ್ಲಿ ಈ ಕಾರ್ಯನಿರ್ವಹಿಸಬೇಕು ಎಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದ್ದಾರೆ.

ರಾಜಭವನದ ಬ್ಯಾಂಕ್ವೆಟ್ ಹಾಲ್‌ನಲ್ಲಿ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ಆಯೋಜಿಸಿದ್ದ ರಾಜ್ಯದ ವಿವಿಧ ಜಿಲ್ಲೆಗಳ ನೈಜ ಬುಡಕಟ್ಟು ಸಮುದಾಯಗಳ ಸದಸ್ಯರೊಂದಿಗೆ ಸಂವಾದ ಕಾರ್ಯಕ್ರಮ ಉದ್ದೇಶಿಸಿ ಅವರು ಮಾತನಾಡಿದರು. ನೈಜ ದುರ್ಬಲ ಬುಡಕಟ್ಟುಗಳೆಂದು ಗುರುತಿಸಲಾಗಿರುವ ಜೇನುಕುರುಬರು ಹಾಗೂ ಕೊರಗ ಸಮುದಾಯಗಳ ಜನಸಂಖ್ಯೆ ಸುಮಾರು 50 ಸಾವಿರದಷ್ಟಿದೆ. ರಾಜ್ಯದ ನೈಜ ದುರ್ಬಲ ಬುಡಕಟ್ಟು ಸಮುದಾಯಗಳಲ್ಲಿಯೂ ಡಾಕ್ಟರೇಟ್ ಪದವಿ ಪಡೆದ ಮಹಿಳೆ, ಶುಶ್ರೂಷಕಿ (ಸ್ಟಾಫ್ ನರ್ಸ್), ಅಂಗನವಾಡಿ ಕಾರ್ಯಕರ್ತೆ, ಪಿಹೆಚ್‌ಡಿ ವ್ಯಾಸಂಗ ಮಾಡುತ್ತಿರುವ ಖಾಸಗಿ ಮಹಿಳಾ ನೌಕರರು ಇರುವುದು ಕಂಡು ಬಹಳ ಸಂತಸವಾ ಗಿದೆ ಎಂದಿದ್ದಾರೆ. ಭಾರತ ದೇಶದಲ್ಲಿ ನೈಜ ದುರ್ಬಲ ಬುಡಕಟ್ಟು ಸಮುದಾಯಗಳ ಜನಸಂಖ್ಯೆ ಸುಮಾರು 2 ಲಕ್ಷದಷ್ಟಿದೆ. 75 ವಿವಿಧ ಬುಡಕಟ್ಟುಗಳನ್ನು ನೈಜ ದುರ್ಬಲ ಬುಡಕಟ್ಟುಗಳೆಂದು ಪಟ್ಟಿ ಮಾಡಲಾಗಿದೆ. ಹಿಂದುಳಿದ ಅರಣ್ಯವಾಸಿ ಸಮುದಾಯಗಳನ್ನು ಗುರುತಿಸಿ ವಸತಿ, ಕೃಷಿಭೂಮಿ ಕಲ್ಪಿಸಿ ಮುಖ್ಯವಾಹಿನಿಗೆ ತರುವುದು ಸ್ಥಳೀಯ ಸರ್ಕಾರಗಳ ಜವಾಬ್ದಾರಿಯಾಗಿದೆ. ಶಾಲೆ, ರಸ್ತೆ, ಆರೋಗ್ಯದ ಸಮಸ್ಯೆಗಳು ಕರ್ನಾಟಕದಲ್ಲಿ ಮಾತ್ರವಲ್ಲ, ದೇಶದೆಲ್ಲೆಡೆ ಸಾಮಾನ್ಯವಾಗಿವೆ.

ಅರಣ್ಯವಾಸಿ ಬುಡಕಟ್ಟುಗಳಲ್ಲಿನ ಕ್ಷಯರೋಗ ಹಾಗೂ ಇತರೆ ಆರೋಗ್ಯ ಸಮಸ್ಯೆಗಳನ್ನು ಸಂಪೂರ್ಣವಾಗಿ ಹೋಗಲಾಡಿಸಲು ಮಧ್ಯಪ್ರದೇಶ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮವನ್ನು ಪ್ರಸ್ತಾಪಿಸಿದ ರಾಷ್ಟ್ರಪತಿಯವರು ದುರ್ಬಲ ಬುಡಕಟ್ಟುಗಳ ಜನಸಂಖ್ಯೆ ಋಣಾತ್ಮಕವಾಗುತ್ತಿರುವುದನ್ನು ತಡೆಯಲು ಇಂತಹ ಯೋಜನೆಗಳನ್ನು ಹಾಕಿಕೊಳ್ಳಬೇಕು ಎಂದು ಹೇಳಿದ್ದಾರೆ. ಬುಡಕಟ್ಟು ಜನ ಶಿಕ್ಷಣಕ್ಕೆ ಒತ್ತು ನೀಡಲಿ, ಎಸ್‌ಎಸ್‌ಎಲ್‌ಸಿ ಓದಿದವರನ್ನು ಗುರುತಿಸಿ ಅವರಲ್ಲಿ ಇರುವ ಕರಕುಶಲ ಕಲೆ, ಜೀವನ ಕೌಶಲ್ಯಗಳನ್ನು ಪ್ರೋತ್ಸಾಹಿಸಿ ಅವರ ಉತ್ಪನ್ನಗಳಿಗೆ ಮೌಲ್ಯವರ್ಧನೆ ಕಲ್ಪಿಸಿದರೆ ಅವರು ಸಮಾಜದ ಮುಖ್ಯವಾಹಿನಿಯೊಂದಿಗೆ ಸಾಗಬಲ್ಲರು. ರಾಜ್ಯದಲ್ಲಿ ಕೇವಲ 50 ಸಾವಿರದಷ್ಟು ನೈಜ ದುರ್ಬಲ ಬುಡಕಟ್ಟು ಸಮುದಾಯವಿರುವುದರಿಂದ ಸರ್ಕಾರಕ್ಕೆ ಇದು ಕಷ್ಟದ ಕಾರ್ಯವಲ್ಲ ಎಂದು ಹೇಳಿದ್ದಾರೆ.

ನೈಜ ದುರ್ಬಲ ಬುಡಕಟ್ಟುಗಳ ವಿಕಾಸಕ್ಕಾಗಿ ಕೇಂದ್ರ ಸರ್ಕಾರವು ಪ್ರಧಾನಮಂತ್ರಿ ಪಿವಿಟಿಜಿ ಅಭಿವೃದ್ಧಿ ಮಿಷನ್ ಅಡಿ 15 ಸಾವಿರ ಕೋಟಿ ರೂ.ಗಳನ್ನು ಬಿಡುಗಡೆ ಮಾಡಿದೆ. ರಾಜ್ಯದಲ್ಲಿನ ಜನಸಂಖ್ಯೆಗೆ ಅನುಗುಣವಾಗಿ ಹಣ ಬಂದಿರುತ್ತದೆ. ಮನೆ, ಶಾಲೆ, ರಸ್ತೆ, ವಿದ್ಯುತ್ ದೀಪ, ನೀರು ಮೊದಲಾದ ಸೌಕರ್ಯಗಳನ್ನು ಒದಗಿಸಲು ಸರ್ಕಾರಗಳು ಆಂದೋಲನದ ರೀತಿ ಕಾರ್ಯೋನ್ಮುಖವಾಗಬೇಕು. ಸರ್ಕಾರ ಬುಡಕಟ್ಟು ಜನರಿಗಾಗಿ ಒಂದು ಹೆಜ್ಜೆ ಮುಂದೆ ಇರಿಸಿ ದಾರಿ ತೋರಿದರೆ ಅವರು ನಿಧಾನವಾಗಿ ನಡೆಯಲು ನಂತರ ಹಂತ ಹಂತವಾಗಿ ಓಡಲು ಕಲಿಯುತ್ತಾರೆ. ಬುಡಕಟ್ಟು ಜನರು ತಮ್ಮ ಆತ್ಮಗೌರವ ಕಾಪಾಡಿಕೊಳ್ಳಲು ಸಮಸ್ಯೆಗಳನ್ನು ಸಮರ್ಥವಾಗಿ ಅಭಿವ್ಯಕ್ತಿಗೊಳಿಸುವುದನ್ನು ರೂಢಿಸಿಕೊಳ್ಳಬೇಕು ಎಂದಿದ್ದಾರೆ.

ರಾಜ್ಯದ ಸಮಾಜ ಕಲ್ಯಾಣ ಹಾಗೂ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ಆಶ್ರಮ ಶಾಲೆಗಳಲ್ಲಿ ನೈಜ ದುರ್ಬಲರಿಗಾಗಿ ವಿಶೇಷ ಸ್ಥಾನ, ಗಮನ ನೀಡಿ ಶಿಕ್ಷಣಕ್ಕೆ ಪ್ರೋತ್ಸಾಹಿಸಬೇಕು. ತಾವು ಚಿಕ್ಕವರಿದ್ದಾಗ ತಮ್ಮ ತಂದೆಗೆ ಇಂತಹ ಯಾವ ಸೌಕರ್ಯಗಳು ಇಲ್ಲದಿದ್ದರೂ ತಮಗೆ ಶಿಕ್ಷಣ ಕೊಡಿಸಿದ್ದನ್ನು ರಾಷ್ಟ್ರಪತಿಯವರು ಹೆಮ್ಮೆಯಿಂದ ಸ್ಮರಿಸಿದ್ದಾರೆ. ನೈಜ ದುರ್ಬಲ ಬುಡಕಟ್ಟುಗಳ ಜನ ತಮ್ಮೊಳಗಿನ ಸಾಮರ್ಥ್ಯ ಒರೆಗೆ ಹಚ್ಚಿಕೊಳ್ಳಬೇಕು. ನೆರೆಹೊರೆಯವರನ್ನು ನೋಡಿ ಶಿಕ್ಷಿತರಾಗಿ ಮುಂದೆ ಬರಬೇಕು ಎಂದು ಸ್ಫೂರ್ತಿದಾಯಕ ಮಾತುಗಳನ್ನಾಡಿದರು.

ಸಂವಾದದ ಪ್ರಾರಂಭದಲ್ಲಿ ಸಭಾಂಗಣದಲ್ಲಿ ನೆರೆದಿದ್ದ ನೈಜ ದುರ್ಬಲ ಬುಡಕಟ್ಟು ಜನರ ಜೀವನ ಮಟ್ಟ ಅರಿಯಲು ಪ್ರಯತ್ನಿಸಿದ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು, ಬುಡಕಟ್ಟು ಜನ ಮುಕ್ತವಾಗಿ ಮಾತನಾಡಲು ಹಿಂಜರಿದಾಗ ರಾಷ್ಟ್ರಪತಿಗಳು ಖುದ್ದು ತಾವೇ ಜನರ ಆಸನಗಳ ಬಳಿ ತೆರಳಿ ಒಬ್ಬೊಬ್ಬರನ್ನು ಪ್ರತ್ಯೇಕವಾಗಿ ಆಪ್ತವಾಗಿ ಮಾತನಾಡಿಸಿದರು. ಅವರಿಗೆ ಮನೆ ಇದೆಯೇ, ಸರ್ಕಾರ ಮನೆ ಕಟ್ಟಿಸಿಕೊಟ್ಟಿದೆಯೇ, ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆಯೇ, ಅರಣ್ಯಭೂಮಿಯಲ್ಲಿ ವಾಸವಾಗಿರುವವರು ಯಾರಿದ್ದೀರಿ ಎಂಬ ಪ್ರಶ್ನೆಗಳನ್ನು ಹಾಕಿ ಕೊರಗ ಮತ್ತು ಜೇನು ಕುರುಬ ಬುಡಕಟ್ಟು ಜನರಿಂದ ನೇರ ಉತ್ತರ ಪಡೆದರು.

ಕೊಡಗಿನ ಚಂದ್ರು ಜೊತೆ ಸಂವಾದ

ಕೊಡಗು ಜಿಲ್ಲೆಯ ಸೋಮವಾರ ಪೇಟೆ ತಾಲೂಕಿನ ಯಡವನಾಡಿನ ಜೇನು ಕುರುಬ ಬುಡಕಟ್ಟು ಜನಾಂಗದ ಚಂದ್ರು ಅವರು ರಾಷ್ಟ್ರಪತಿಗಳೊಂದಿಗೆ ಹಿಂದಿಯಲ್ಲಿ ಮಾತನಾಡಿದರು. ಆದಾಗ್ಯೂ, ಸ್ಥಳೀಯ ಭಾಷೆಯಲ್ಲಿ ಮಾತನಾಡಲು ಪ್ರೋತ್ಸಾಹಿಸಿದರು. ಆದಿವಾಸಿ ಮಹಿಳೆಯೊಬ್ಬರು ಅಧ್ಯಕ್ಷ ಸ್ಥಾನ ಅಲಂಕರಿಸಿದ್ದಕ್ಕೆ ಚಂದ್ರು ಹೆಮ್ಮೆ ವ್ಯಕ್ತಪಡಿಸಿದರು.

ಲೋಕಸಭೆ ಚುನಾವಣೆ ಹಿನ್ನೆಲೆ: ನಾಲ್ಕು ರಾಜ್ಯಗಳಿಗೆ ಬಿಜೆಪಿ ಅಧ್ಯಕ್ಷರ ನೇಮಕ



ನವದೆಹಲಿ: ರಾಜ್ಯಗಳ ವಿಧಾನಸಭೆ ಚುನಾವಣೆಗಳು ಮತ್ತು 2024ರ ಲೋಕಸಭೆ ಚುನಾವಣೆಗೆ ಮುಂಚಿತವಾಗಿ ಪಕ್ಷವನ್ನು ಸಂಘಟನಾತ್ಮಕವಾಗಿ ಪುನಶ್ಚೇತನಗೊಳಿಸಲು ನಾಲ್ಕು ರಾಜ್ಯಗಳಲ್ಲಿ ಬಿಜೆಪಿ ತನ್ನ ಘಟಕಗಳಿಗೆ ಹೊಸ ಅಧ್ಯಕ್ಷರನ್ನು ಮಂಗಳವಾರ ನೇಮಿಸಿದೆ.

ತೆಲಂಗಾಣ ಬಿಜೆಪಿ ಅಧ್ಯಕ್ಷರಾಗಿ ಜಿ ಕಿಶನ್ ರೆಡ್ಡಿ, ಆಂಧ್ರಪ್ರದೇಶದ ರಾಜ್ಯಾಧ್ಯಕ್ಷರಾಗಿ ಡಿ ಪುರಂದೇಶ್ವರಿ, ಜಾರ್ಖಂಡ್‌ನ ರಾಜ್ಯಾಧ್ಯಕ್ಷರಾಗಿ ಮಾಜಿ ಸಿಎಂ ಬಾಬುಲಾಲ್ ಮರಾಂಡಿ ಮತ್ತು ಪಂಜಾಬ್ ಪಕ್ಷದ ರಾಜ್ಯಾಧ್ಯಕ್ಷರಾಗಿ ಸುನೀಲ್ ಜಾಖರ್ ಅವರನ್ನು ನೇಮಕ ಮಾಡಲಾಗಿದೆ.

ಕುತೂಹಲಕಾರಿ ಸಂಗತಿ ಎಂದರೆ, ಜಾಖರ್ ಈ ಹಿಂದೆ ಪಂಜಾಬ್‌ನಲ್ಲಿ ಕಾಂಗ್ರೆಸ್‌ನ ರಾಜ್ಯ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದ್ದಾರೆ. ತೆಲಂಗಾಣದಲ್ಲಿ ಚುನಾವಣಾ ನಿರ್ವಹಣಾ ಸಮಿತಿಯ ಅಧ್ಯಕ್ಷರಾಗಿ ಈಟಾಲ ರಾಜೇಂದರ್ ಅವರನ್ನು ನೇಮಿಸುವುದಾಗಿ ಬಿಜೆಪಿ ಘೋಷಿಸಿತು.

ಈ ವರ್ಷದ ಕೊನೆಯಲ್ಲಿ ತೆಲಂಗಾಣದಲ್ಲಿ ಚುನಾವಣೆ ನಡೆಯಲಿದೆ. ಬಿಜೆಪಿ ಅಧ್ಯಕ್ಷ ಜೆಪಿ ನಡ್ಡಾ, ಕೇಂದ್ರ ಗೃಹ ಸಚಿವ ಅಮಿತ್ ಶಾ ಮತ್ತು ಪ್ರಧಾನ ಕಾರ್ಯದರ್ಶಿ (ಸಂಘಟನೆ) ಬಿ.ಎಲ್. ಸಂತೋಷ್ ಅವರ ನೇತೃತ್ವದಲ್ಲಿ ನಡೆದ ಸಭೆಗಳ ನಡುವೆ ಬಿಜೆಪಿಯಲ್ಲಿ ಸಂಘಟನಾ ಪುನರ್‌ರಚನೆಯ ಬಗ್ಗೆ ಚರ್ಚೆ ನಡೆದಿದೆ.

ಗ್ಯಾರಂಟಿ ಜಾರಿಗೊಳಿಸದೇ ದೋಖಾ



ಬೆಂಗಳೂರು: ಹೊಸ ಕಾಂಗ್ರೆಸ್ ಸರ್ಕಾರ ಅಧಿವೇಶನದ ಮೊದಲ ದಿನವೇ ಪ್ರಜಾಪ್ರಭುತ್ವ ವಿರೋಧಿ ನಡೆ ಅನುಸರಿಸಿದೆ. ಜನರಿಗೆ ಯಾವ ಗ್ಯಾರಂಟಿ ಹೇಳಿದ್ದರೋ ಅದನ್ನು ಅನುಷ್ಠಾನ ಮಾಡುವಲ್ಲಿ ಮೋಸ ಮಾಡಿದ್ದಾರೆ ಎಂದು ಮಾಜಿ ಸಿಎಂ ಬಸವರಾಜ ಬೊಮ್ಮಾಯಿ ಆರೋಪಿಸಿದ್ದಾರೆ.

ವಿಧಾನಸೌಧದಲ್ಲಿ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಗೃಹಲಕ್ಷ್ಮಿ ಮನೆಯಲ್ಲಿ ಯಾರು ಯಜಮಾನಿ ಅಂತ ಹೇಳಿ ಮನೆಗಳಲ್ಲಿ ಗಲಾಟೆ ಶುರುವಾಗುವಂತೆ ಮಾಡಿದ್ದಾರೆ. ಗೃಹ ಜ್ಯೋತಿ ಯೋಜನೆ ಘೋಷಿಸಿ ಮೂರು ಪಟ್ಟು ಬಿಲ್ ಏರಿಸಿ ಜನರಿಗೆ ಭಾರ ಮಾಡಿದ್ದಾರೆ. ಬಸ್‌ಗಳಲ್ಲಿ ಗೊಂದಲ ಹೆಚ್ಚಾಗಿದೆ. ಶಾಲಾ ಮಕ್ಕಳಿಗೆ ಬಸ್ ಇಲ್ಲ. ಕಿಟಕಿಯಲ್ಲಿ ಬಸ್ ಹತ್ತುವಂತಾಗಿದೆ. ಯುವ ನಿಧಿ ಏನಾಗಿದೆ ಗೊತ್ತಿಲ್ಲ. ಅಕ್ಕಿಯಲ್ಲಿ ದೊಡ್ಡ ಗೋಲ್ ಮಾಲ್ ನಡೆಯುತ್ತಿದೆ. ಎಷ್ಟು ಅಕ್ಕಿ ಕೊಡುತ್ತಾರೆ ಗೊತ್ತಿಲ್ಲ. ಈ ಸರ್ಕಾರದ ಮುಖವಾಡ ಬಯಲಾಗಿದೆ. ಇವರ ಬಣ್ಣ ಬಯಲಾಗಿದೆ ಎಂದು ವಾಗ್ದಾಳಿ ನಡೆಸಿದರು.

ಗ್ಯಾರಂಟಿ ಯೋಜನೆಗಳ ಗೊಂದಲಗಳ ಕುರಿತು ಚರ್ಚಿಸಲು ನಾವು ಅವಕಾಶ ಕೇಳಿದ್ದೇವೆ. ಅದಕ್ಕೆ ಅವಕಾಶ ಕೊಡದೇ ಸರ್ಕಾರ ಹಠಮಾರಿತನ, ಮೊಂಡತನ ಮಾಡುತ್ತಿದೆ. ಸಭಾಧ್ಯಕ್ಷರ ಮೇಲೆ ಒತ್ತಡ ತಂದು ಅವಕಾಶ ಕೊಡದಂತೆ ತಡೆಯುತ್ತಿದ್ದಾರೆ ಎಂದು ಆರೋಪಿಸಿದ ಅವರು, ರಾಜ್ಯದಲ್ಲಿ ಬರ ಬಂದಿದೆ. ಕುಡಿಯುವ ನೀರಿನ ಸಮಸ್ಯೆ ಇದೆ. ಇದೆಲ್ಲದರ ಬಗ್ಗೆ ಚರ್ಚೆ ಮಾಡಬೇಕಿದೆ. ಸರ್ಕಾರ ಮೊದಲ ದಿನವೇ ವಿರೋಧ ಪಕ್ಷವನ್ನು ಬಾವಿಗೆ ತಳ್ಳುವ ಕೆಲಸ ಮಾಡಿದೆ. ಸರ್ಕಾರ ದೋಖಾ ಮಾಡಿದೆ. ನಮ್ಮ ಬೇಡಿಕೆ ಇಷ್ಟೇ ನೀವು ಕೊಟ್ಟ ಭರವಸೆ ಈಡೇರಿಸಿ ಎಂದು ಆಗ್ರಹಿಸಿದ್ದೇವೆ ಎಂದರು.

ಈ ಸರ್ಕಾರ ಮುಂದಿನ ಕಲಾಪದ ಬಗ್ಗೆ ಚರ್ಚೆ ಮಾಡುವ ಕುರಿತು ಕಲಾಪ ಸಲಹಾ ಸಮಿತಿ ಸಭೆ ಕರೆದಿದೆ. ಈಗಿನ ಗೊಂದಲ ಬಗೆ ಹರಿಸದೇ ಮುಂದಿನ ಕಲಾಪದ ಬಗ್ಗೆ ಚರ್ಚೆ ಮಾಡುವ ಅಗತ್ಯವಿಲ್ಲ. ಹೀಗಾಗಿ ನಾವು ಬಿಎಸ್‌ಸಿ ಬಹಿಷ್ಕಾರ ಮಾಡಿದ್ದೇವೆ. ನಾವು ನಮ್ಮ ಹೋರಾಟವನ್ನು ಮುಂದುವರೆಸುತ್ತೇವೆ ಎಂದು ಹೇಳಿದರು. ಇನ್ನು ಸಿಎಂ ಕಚೇರಿಯಲ್ಲಿ ಭ್ರಷ್ಟಾಚಾರ ನಡೆಯುವ ಬಗ್ಗೆ ಸದನದಲ್ಲಿ ಚರ್ಚೆ ಮಾಡುತ್ತೇವೆ. ಬಿಜೆಪಿ ಸರ್ಕಾರದ ಅವಧಿಯಲ್ಲಿ ಜನಪರ ಕಾನೂನುಗಳನ್ನು ಜಾರಿಗೆ ತಂದಿದ್ದೇವೆ ಅವು ಕಾಂಗ್ರೆಸ್‌ನವರಿಗೆ ಬೇಡವಾಗಿರಬಹುದು. ಜನ ಬಯಸಿದ್ದನ್ನು ನಾವು ಮಾಡಿದ್ದೆವು ಎಂದು ಹೇಳಿದರು.

ಕುಮಾರಸ್ವಾಮಿ ಹೇಳಿದ್ದು ನಿಜ: ಭವಿಷ್ಯದಲ್ಲಿ ನಾವು ಒಟ್ಟಾಗಿ ಹೋರಾಡುತ್ತೇವೆ

ಜೆಡಿಎಸ್ ಜೊತೆ ಮೈತ್ರಿ ಸುಳಿವು ನೀಡಿದ ಯಡಿಯೂರಪ್ಪ



ಬೆಂಗಳೂರು: 2024ರ ಲೋಕಸಭೆ ಚುನಾವಣೆಯಲ್ಲಿ ಕರ್ನಾಟಕದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಮೈತ್ರಿ ಮಾಡಿಕೊಳ್ಳಲಿದೆ ಎಂಬ ಊಹಾಪೋಹ ದಟ್ಟವಾಗಿದ್ದು, ಮಾಜಿ ಮುಖ್ಯಮಂತ್ರಿ ಬಿಜೆಪಿ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪನವರ ಮಾತುಗಳು ಇದಕ್ಕೆ ಪುಷ್ಟಿ ನೀಡುತ್ತಿವೆ.

ನಿನ್ನೆ ಸುದ್ದಿಗಾರರೊಂದಿಗೆ ಮಾತನಾಡುವ ವೇಳೆ ಜೆಡಿಎಸ್ ನಾಯಕ ಹೆಚ್ ಡಿ ಕುಮಾರಸ್ವಾಮಿಯವರು, ಮುಖ್ಯಮಂತ್ರಿಗಳ ಕಚೇರಿಯಲ್ಲಿ ಭ್ರಷ್ಟಾಚಾರ ನಡೆಯುತ್ತಿದೆ. ಮುಖ್ಯಮಂತ್ರಿ ಕಚೇರಿಯಲ್ಲಿ ಹಣಕ್ಕೆ ಡಿಮ್ಯಾಂಡ್ ಮಾಡುತ್ತಿದ್ದಾರೆ. ಶಾಸಕರ ಶಿಫಾರಸ್ಸು ತಂದರೆ ಸಾಲದು 30 ಲಕ್ಷ ದುಡ್ಡು ತನ್ನಿ ಎಂದು ಹೇಳುತ್ತಿದ್ದಾರೆ. ದುಡ್ಡು ಕೊಟ್ಟಿರುವವರು ಸಾಕ್ಷಿ ಕೊಡುತ್ತಾರ, ದುಡ್ಡು ಕೊಟ್ಟವರಿಗೆ ಕೆಲಸ ಆಗಬೇಕು. ಹಾಗಾಗಿ ಯಾರೂ ಸಾಕ್ಷಿ ಕೊಡಲ್ಲ ಎಂದು ಸಿದ್ದರಾಮಯ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದ್ದರು.

ಅಲ್ಲದೆ ರಾಜ್ಯದಲ್ಲಿ ಜಿಎಸ್‌ಟಿ ಬದಲಿಗೆ ಹೊಸ ತೆರಿಗೆ ವ್ಯವಸ್ಥೆ ಆರಂಭವಾಗಿದ್ದು ಅದಕ್ಕೆ ಯತೀಂದ್ರ ತೆರಿಗೆ ವ್ಯವಸ್ಥೆ(YST) ಎಂದು ಹೆಸರಿಡಲಾಗಿದೆ ಎಂದು ಕುಮಾರಸ್ವಾಮಿ ಟೀಕಿಸಿದ್ದರು.

ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಯೋಜನೆಗಳ ವಿರುದ್ಧ ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಪ್ರತಿಭಟನೆ ವೇಳೆ ಸುದ್ದಿಗಾರರೊಂದಿಗೆ ಮಾತನಾಡಿದ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಕಾಂಗ್ರೆಸ್ ಸರ್ಕಾರ ವಿರುದ್ಧ ವಾಗ್ದಾಳಿ ನಡೆಸಿದರು. ಈ ವೇಳೆ ಕುಮಾರಸ್ವಾಮಿಯವರು ಹೇಳಿರುವ ಮಾತುಗಳು ನಿಜ. ನಾನು ಕುಮಾರಸ್ವಾಮಿಯವರ ಹೇಳಿಕೆಗಳನ್ನು ಬೆಂಬಲಿಸುತ್ತೇನೆ. ಭವಿಷ್ಯದಲ್ಲಿ ಕುಮಾರಸ್ವಾಮಿ ಮತ್ತು ನಾವು ಒಟ್ಟಾಗಿ ಹೋರಾಡುತ್ತೇವೆ ಎಂದು ಹೇಳಿದರು.

ವಾಣಿಜ್ಯ ಬಳಕೆ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬೆಲೆ 7 ರೂ. ಏರಿಕೆ



ನವದೆಹಲಿ: ಸರ್ಕಾರಿ ಸ್ವಾಮ್ಯದ ತೈಲ ಮಾರುಕಟ್ಟೆ ಕಂಪನಿಗಳು(ಒಎಂಸಿ) ವಾಣಿಜ್ಯ ಬಳಕೆಯ ಎಲ್‌ಪಿಜಿ ಗ್ಯಾಸ್ ಸಿಲಿಂಡರ್ ಬೆಲೆಯನ್ನು 7 ರೂ.ಗಳಷ್ಟು ಹೆಚ್ಚಿಸಿವೆ.

ದೆಹಲಿಯಲ್ಲಿ 19 ಕೆಜಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ನ ಬೆಲೆ 1,773 ರೂ.ನಿಂದ 1,780 ರೂ.ಗೆ ಏರಿಕೆಯಾಗಿದೆ. ಆದಾಗ್ಯೂ, ಗೃಹ ಬಳಕೆ ಎಲ್‌ಪಿಜಿ ಸಿಲಿಂಡರ್‌ಗಳ ಬೆಲೆಯಲ್ಲಿ ಯಾವುದೇ ಬದಲಾವಣೆಯಾಗಿಲ್ಲ.

ಮುಂಬೈನಲ್ಲಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ 1,733.50 ರಿಂದ 1,740.50 ಕ್ಕೆ ಏರಿಕೆಯಾಗಿದ್ದು, ಚೆನ್ನೈನಲ್ಲಿ ಇದು 1,945 ರಿಂದ 1,952ಕ್ಕೆ ಮತ್ತು ಕೋಲ್ಕತ್ತಾದಲ್ಲಿ 1,895 ರಿಂದ 1,902 ಕ್ಕೆ ಏರಿಕೆಯಾಗಿದೆ.

ಕಳೆದ ಮೇ ಮತ್ತು ಜೂನ್‌ನಲ್ಲಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್ ಬೆಲೆ ಸತತ ಎರಡು ಬಾರಿ ಇಳಿಕೆ ಮಾಡಲಾಗಿತ್ತು. ಮೇ ತಿಂಗಳಲ್ಲಿ ವಾಣಿಜ್ಯ ಬಳಕೆ ಎಲ್‌ಪಿಜಿ ಸಿಲಿಂಡರ್‌ನ ಬೆಲೆಯನ್ನು 172 ರೂಪಾಯಿಗಳಷ್ಟು ಕಡಿಮೆಗೊಳಿಸಿದರೆ, ಜೂನ್‌ನಲ್ಲಿ 83 ರೂಪಾಯಿ ಇಳಿಕೆಯಾಗಿತ್ತು.

ಲಿಂಗ, ತಟಸ್ಥ ಪದಗಳ ಬಳಕೆ: ಕಾನೂನು ವಿದ್ಯಾರ್ಥಿಯ ಕಿವಿ ಹಿಂಡಿದ ಸಿಜೆಐ

ನವದೆಹಲಿ: ಸಾರ್ವಜನಿಕ ಹಿತಾಸಕ್ತಿ ಅರ್ಜಿ(ಪಿಐಎಲ್) ಸಲ್ಲಿಸಿ ವ್ಯಥಾ ಕಾಲಹರಣ ಮಾಡುವ ಬದಲಿಗೆ ವಿದ್ಯಾಭ್ಯಾಸದತ್ತ ಗಮನ ಕೇಂದ್ರೀಕರಿಸುವಂತೆ ಸುಪ್ರೀಂಕೋರ್ಟ್ ಮಂಗಳವಾರ ಕಾನೂನು ವಿದ್ಯಾರ್ಥಿಗೆ ಕಿವಿಮಾತು ಹೇಳಿದೆ.

ಸಂವಿಧಾನದಲ್ಲಿ ನಿಬಂಧನೆಗಳಿಗೆ ಒಳಪಟ್ಟು ಲಿಂಗ ತಟಸ್ಥ ಪದಗಳನ್ನು ಬಳಸಲಾಗುತ್ತಿದೆ. ಇವುಗಳ ಬಳಕೆಗೆ ನಿರ್ಬಂಧ ಹೇರಬೇಕು ಎಂದು ವಿದ್ಯಾರ್ಥಿ ಹರ್ಷ ಗುಪ್ತಾ ಎಂಬುವರು ಪಿಐಎಲ್ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್. ನರಸಿಂಹ ಅವರಿದ್ದ ವಿಭಾಗೀಯ ಪೀಠವು, ಕಾನೂನು ಶಾಲೆಯಲ್ಲಿ ಅಧ್ಯಯನ ಮಾಡುವ ಬದಲು ವಿನಾಕಾರಣ ಇಂತಹ ಅರ್ಜಿಯನ್ನು ನ್ಯಾಯಾಲಯಕ್ಕೆ ಸಲ್ಲಿಸುವ ಅಗತ್ಯ ನಿಮಗಿದೆಯೇ' ಎಂದು ಪ್ರಶ್ನಿಸಿತು.

ಮಹಿಳೆ ಕೂಡ ಸಾಂವಿಧಾನಿಕವಾಗಿ ಅಧ್ಯಕ್ಷ ಸ್ಥಾನಕ್ಕೇರಬಹುದು. ಆಗ ಲಿಂಗ ಆಧರಿಸಿ ಅಧ್ಯಕ್ಷ ಸ್ಥಾನವನ್ನು ಸಂಬೋಧಿಸಲು ಸಾಧ್ಯವಿಲ್ಲ ಎಂದು ಪೀಠ ಹೇಳಿತು.

ನಿರಾಶ್ರಿತರಿಗೆ ಮೈಸೂರು ನಗರಪಾಲಿಕೆ ನಾಮಕಾವಸ್ತೆ ಆಶ್ರಯ!

ಬರೀ ಅಭಿಯಾನವಾಯ್ತೇ ಹೊರತು ಇದುವರೆಗೆ ನಿರಾಶ್ರಿತರಿಗೆ ಆಶ್ರಯವಂತೂ ಸಿಗಲಿಲ್ಲ



ಮೈಸೂರು, ಜು.4(ಎಂಕೆ)– ಮೈಸೂರು ನಗರದೆಲ್ಲೆಡೆ ಆಶ್ರಯವಿಲ್ಲದೆ ಅಲೆದಾಡುವ ನಿರಾಶ್ರಿತರಿಗೆ ಆಶ್ರಯ ನೀಡುವಲ್ಲಿ ಮೈಸೂರು ನಗರಪಾಲಿಕೆ ವಿಫಲವಾಗಿದೆ.

ಪಾಲಿಕೆಯ ಡೇ–ನಲ್ಮ್(ದೀನ್ ದಯಾಳ್ ಅಂತ್ಯೋದಯ ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ) ವಿಭಾಗದ ವತಿಯಿಂದ ತಿಂಗಳಿಗೆ ಎರಡು ಬಾರಿ ರ್‍ಯಾಪಿಡ್ ಸರ್ವೆ ಮಾಡಿ, ನಿರಾಶ್ರಿತರನ್ನು ಪತ್ತೆ ಹಚ್ಚುವ ಕೆಲಸವಾಗುತ್ತಿದೆಯೇ ಹೊರತು ಅವರಿಗೆ ಆಶ್ರಯ ಕಲ್ಪಿಸಲು ಸಾಧ್ಯವಾಗಿಲ್ಲ. ಅಲ್ಲದೆ ಗ್ರೀನ್‌ಡಾಟ್, ಜೆಎಂಜೆ ಚಾರಿಟಬಲ್ ಟ್ರಸ್ಟ್, ಮಡಿಲು ಶಿಕ್ಷಣ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಹಯೋಗದೊಂದಿಗೆ 2022ರ ಡಿ.29 ಮತ್ತು 30 ರಂದು ನಗರದೆಲ್ಲೆಡೆ ನಡೆದ ವಸತಿ ರಹಿತರನ್ನು ಗುರುತಿಸುವ ಅಭಿಯಾನದಲ್ಲಿ ಮಹಿಳೆಯರು ಸೇರಿದಂತೆ 120 ಮಂದಿ ನಿರಾಶ್ರಿತರನ್ನು ಗುರ್ತಿಸಲಾಯಿತಾದರೂ ಇದುವರೆಗೆ ಯಾವುದೇ ಪ್ರಯೋಜನವಾಗಿಲ್ಲ. ನಿರಾಶ್ರಿತ ಮಹಿಳೆಯರಿಗೆ ಗೋಕುಲಂ 4ನೇ ಹಂತದಲ್ಲಿರುವ ಗುರುದ್ವಾರ ಸಮುದಾಯ ಭವನ, ನಜರ್‌ಬಾದ್‌ನಲ್ಲಿರುವ ನಿರಾಶ್ರಿತರ ಕೇಂದ್ರ, ಪುರುಷರಿಗಾಗಿ ಜಯನಗರದಲ್ಲಿ ಬಸವಯ್ಯ ಸಮುದಾಯ ಭವನ, ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಪಾಲಿಕೆ ನಿರಾಶ್ರಿತರ ಕೇಂದ್ರ, ಸಿದ್ಧಾರ್ಥ ಬಡಾವಣೆಯಲ್ಲಿರುವ ಸಿಐಟಿಬಿ ಸಮುದಾಯ ಭವನದಲ್ಲಿ ಆಶ್ರಯ ನೀಡಬೇಕೆಂದು ತೀರ್ಮಾನಿಸಲಾಗಿತ್ತೇ ಹೊರತು ಕಾರ್ಯಗತವಾಗಿಲ್ಲ.

ತಪ್ಪದ ನರಳಾಟ, ಅಲೆದಾಟ: ಕೊರೆಯುವ ಚಳಿ, ಗಾಳಿ–ಮಳೆ ನಡುವೆಯೇ ನಿರಾಶ್ರಿತರು ಮೈ–ಕೈ ಮುದುಡಿಕೊಂಡು ರಾತ್ರಿ ಕಳೆಯುವುದು ಮುಂದುವರೆದಿದೆ. ನಿರಾಶ್ರಿತ ವಿಕಲಚೇತನರು ಮತ್ತು ವಯೋವೃದ್ಧರ ಸ್ಥಿತಿಯಂತೂ ಹೇಳ ತೀರದಾಗಿದೆ. ಕೆ.ಆರ್.ವೃತ್ತ, ಸಯ್ಯಾಜಿರಾವ್ ರಸ್ತೆ, ರೈಲ್ವೆ ನಿಲ್ದಾಣ ವೃತ್ತ, ಶೇಷಾದ್ರಿ ಅಯ್ಯರ್ ರಸ್ತೆ, ಹಿನಕಲ್ ಫ್ಲೈಓವರ್ ಕೆಳಗೆ ಸೇರಿದಂತೆ ನಗರದೆಲ್ಲೆಡೆ ನಿರಾಶ್ರಿತರು ಅಲೆದಾಡುತ್ತಾ, ಭಿಕ್ಷಾಟನೆ ಮಾಡಿಕೊಂಡೇ ಎಲ್ಲೆಂದರಲ್ಲಿ ರಾತ್ರಿ ಕಳೆಯುವುದು ತಪ್ಪದಾಗಿದೆ.

ಮಹಿಳೆಯರದ್ದು ಮರೀಚಿಕೆ: ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಪಾಲಿಕೆ ನಿರಾಶ್ರಿತರ ಕೇಂದ್ರ(ಪುರುಷರಿಗೆ ಮಾತ್ರ) ಹೊರತು ಬೇರೆಲ್ಲೂ ಆಶ್ರಯ ಕೇಂದ್ರಗಳಿಲ್ಲ. ನಿರಾಶ್ರಿತ ಮಹಿಳೆಯರಿಗೆ ಪ್ರತ್ಯೇಕ ಆಶ್ರಯ ಕೇಂದ್ರ ತೆರೆಯುತ್ತೇವೆ ಎಂದು ವರ್ಷದಿಂದ ಹೇಳುತ್ತಲೇ ಬರುತ್ತಿರುವ ಪಾಲಿಕೆ ಅಧಿಕಾರಿಗಳು ದಿನದೂಡುತ್ತಿದ್ದಾರೆಯೇ ಹೊರತು ನಿರಾಶ್ರಿತರಿಗೆ ಪ್ರಯೋಜನವಾಗುವ ಕೆಲಸ ಮಾಡಿಲ್ಲ. ಮಹಿಳೆಯರಿಗಾಗಿ ಗೋಕುಲಂ 4ನೇ ಹಂತದಲ್ಲಿರುವ ಗುರುದ್ವಾರ ಸಮುದಾಯ ಭವನ, ನಜರ್‌ಬಾದ್‌ನಲ್ಲಿರುವ ನಿರಾಶ್ರಿತರ ಕೇಂದ್ರದಲ್ಲಿ ಆಶ್ರಯತಾಣ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆಯೇ ಹೊರತು ಯಾವ ಪ್ರಕ್ರಿಯೆಯನ್ನೂ ನಡೆಸಿಲ್ಲ.

ಕೊರೊನಾ ಬಿಲ್ ಬಾಕಿ: ಕೊರೊನಾ ಲಾಕ್‌ಡೌನ್ ವೇಳೆ 2 ವರ್ಷಗಳ ಕಾಲ ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ ಪಾಲಿಕೆ ನಿರಾಶ್ರಿತರ ಕೇಂದ್ರದಲ್ಲಿ ಆಶ್ರಯ ಪಡೆದವರಿಗೆ ಹೋಟೆಲ್‌ನಿಂದ ಊಟ ನೀಡುವ ವ್ಯವಸ್ಥೆ ಮಾಡಲಾಗಿತ್ತು ಆದರೆ, ಊಟದ ಬಿಲ್ ಇನ್ನೂ ಬಾಕಿ ಇದೆ. ಒಂದು ವರ್ಷದ ಬಿಲ್ ಕ್ಲಿಯರ್ ಮಾಡಿದ್ದು, ಇನ್ನೂ ಒಂದು ವರ್ಷದ ಬಿಲ್ ಬಾಕಿ ಉಳಿಸಿಕೊಂಡಿದ್ದಾರೆ ಎಂದು ಪಾಲಿಕೆಯ ಸಿಬ್ಬಂದಿಯೊಬ್ಬರು ತಿಳಿಸಿದರು.

ಅಧಿಕಾರಿಗಳ ವರ್ಗಾವಣೆ ತೊಡಕು: ನಿರಾಶ್ರಿತ ಕೇಂದ್ರ ನಿರ್ವಹಣೆ ಮಾಡುವ ಪಾಲಿಕೆಯ ಡೇ–ನಲ್ಮ್ ವಿಭಾಗದಲ್ಲಿ ಕಳೆದ ಎರಡ್ಮೂರು ವರ್ಷದಲ್ಲಿ ಸಂಘಟನಾಧಿಕಾರಿ ಹಾಗೂ ಹೆಚ್ಚುವರಿ ಆಯುಕ್ತರ ಬದಲಾವಣೆಯಾಗಿದೆ. ಇದರಿಂದಾಗಿಯೂ ನಿರಾಶ್ರಿತ ಕೇಂದ್ರಗಳ ನಿರ್ವಹಣೆ ಹಾಗೂ ಹೊಸ ಕೇಂದ್ರಗಳನ್ನು ತೆರೆಯಲು ತೊಡಕಾಗುತ್ತಿದೆ ಎಂಬುದು ಕೆಲವರ ಅಭಿಪ್ರಾಯವಾದರೆ, ಮತ್ತೆ ಕೆಲವರು ಪ್ರಸ್ತುತ ಹೆಚ್ಚುವರಿ ಆಯುಕ್ತರು ಒಂದು ವಾರ ಕೆಲಸದಲ್ಲಿದ್ದರೆ ಮತ್ತೊಂದು ವಾರ ರಜೆಯಲ್ಲಿರುತ್ತಾರೆ ಎಂದು ಬೇಸರ ವ್ಯಕ್ತಪಡಿಸಿದ್ದಾರೆ.

35 ಮಂದಿ ಮಾತ್ರ: ನೂರಕ್ಕೂ ಹೆಚ್ಚು ನಿರಾಶ್ರಿತರಿರುವ ಮೈಸೂರಿನಲ್ಲಿ ಆಶ್ರಯ ಪಡೆದಿರುವುದು ಮಾತ್ರ ಸುಮಾರು 35 ಮಂದಿ. 50 ಮಂದಿ ನಿರಾಶ್ರಿತರು ಉಳಿದುಕೊಳ್ಳುವ ಸಾಮರ್ಥ್ಯವಿರುವ ಆಶ್ರಯ ಕೇಂದ್ರದಲ್ಲಿ ಸದ್ಯಕ್ಕೆ 35 ಮಂದಿ ಆಶ್ರಯ ಪಡೆದಿದ್ದು, ಉಳಿದವರು ರಸ್ತೆ ಬದಿಯಲ್ಲೇ ಉಳಿಯುವಂತಾಗಿದೆ ಅದರಲ್ಲೂ ನಿರಾಶ್ರಿತ ಮಹಿಳೆಯರು ಆಶ್ರಯವಿಲ್ಲದೆ ಅಲೆದಾಡುತ್ತಿದ್ದಾರೆ. ಸಿಗ್ನಲ್‌ಗಳಲ್ಲಿ ನಿಂತು ಭಿಕ್ಷಾಟನೆ ಮಾಡುತ್ತಿದ್ದಾರೆ.





ನಿರ್ದೇಶಕರ ಭೇಟಿ, ಪರಿಶೀಲನೆ...




ಶೇಷಾದ್ರಿ ಅಯ್ಯರ್ ರಸ್ತೆಯಲ್ಲಿರುವ 'ನಗರ ವಸತಿ ರಹಿತರ ಆಶ್ರಯ' ಪುರುಷರ ಕೇಂದ್ರಕ್ಕೆ ಮಂಗಳವಾರ ರಾಷ್ಟ್ರೀಯ ಜೀವನೋಪಾಯ ಅಭಿಯಾನದ ನಿರ್ದೇಶಕಿ ಡಾ.ರಾಗಪ್ರಿಯಾ ಭೇಟಿ ನೀಡಿ ಪ್ರಗತಿ ಪರಿಶೀಲನೆ ನಡೆಸಿದರು.

ಈ ವೇಳೆ ನಿರಾಶ್ರಿತರನ್ನು ಮಾತನಾಡಿಸಿ, ಅವರ ಸಮಸ್ಯೆಗಳನ್ನು ಆಲಿಸಿದ ಅವರು ಪಾಲಿಕೆಯ ಡೇ–ನಲ್ಮ್ ವಿಭಾಗದ ಅಧಿಕಾರಿಗಳಿಗೆ ನಿರಾಶ್ರಿತ ಕೇಂದ್ರದಲ್ಲಿ ಸ್ವಚ್ಛತೆ ಕಾಪಾಡುವ ಜೊತೆಗೆ ಆಶ್ರಯ ಇಲ್ಲದವರಿಗೆ ಹೊಸ ಕೇಂದ್ರಗಳನ್ನು ತೆರೆದು ಆಶ್ರಯ ನೀಡವಂತೆ ಸೂಚಿಸಿದರು. ಅಲ್ಲದೆ ದಿನಕ್ಕೊಮ್ಮೆ ನೀಡುವ ಉಚಿತ ಊಟದ ವ್ಯವಸ್ಥೆ ಸರಿಯಾಗಿ ನಿರ್ವಹಣೆಯಾಗಬೇಕು ಎಂದು ತಿಳಿಸಿದರು. ರಾಜ್ಯ ಜೀವನೋಪಾಯ ಅಭಿಯಾನದ ನಿಂಗಪ್ಪ, ಮೈಸೂರು ನಗರ ಪಾಲಿಕೆ ಡೇ–ನಲ್ಮ್ ವಿಭಾಗದ ಅಭಿಯಾನ ವ್ಯವಸ್ಥಾಪಕ ಭೈರಲಿಂಗಯ್ಯ, ನೋಡಲ್ ಅಧಿಕಾರಿಗಳು ಉಪಸ್ಥಿತರಿದ್ದರು.

ಕೊಡಗು ಜಿಲ್ಲೆಯಲ್ಲಿ ಮುಂಗಾರುಮಳೆ ಚುರುಕು

ಮತ್ತೆ ಅಪಾಯದ ಸ್ಥಿತಿಯಲ್ಲಿ ಮಡಿಕೇರಿಯ ಜಿಲ್ಲಾಡಳಿತ ಭವನದ ತಡೆಗೋಡೆ





ಮಡಿಕೇರಿ, ಜು.4– ಕಳೆದೆರಡು ದಿನಗಳಿಂದ ಕೊಡಗಿನಲ್ಲಿ ಮುಂಗಾರು ಮಳೆ ಚುರುಕುಗೊಂಡಿದ್ದು, ಮಡಿಕೇರಿ ವ್ಯಾಪ್ತಿಯಲ್ಲಿ ಸುರಿಯುತ್ತಿರುವ ಮಳೆಗೆ ಜಿಲ್ಲಾಡಳಿತ ಭವನದ ಬಹುಕೋಟಿ ವೆಚ್ಚದ ತಡೆಗೋಡೆ ಮತ್ತೆ ಸದ್ದು ಮಾಡತೊಡಗಿದೆ.

ಮಳೆಗಾಲದಲ್ಲಿ ಮಡಿಕೇರಿ–ಮಂಗಳೂರು ರಸ್ತೆಯ ನಿವಾಸಿಗಳಲ್ಲಿ ಆತಂಕ ಸೃಷ್ಟಿಸುತ್ತಿದ್ದ, ಬೇಸಿಗೆಯಲ್ಲಿ ಪ್ಲಾಸ್ಟಿಕ್ ಮುಸುಕಿನಡಿ ಸದ್ದಿಲ್ಲದೇ ನಿಂತಿದ್ದ ಬಹುಕೋಟಿ ವೆಚ್ಚದ ತಡೆಗೋಡೆ ಎರಡು ದಿನಗಳ ಸಾಧಾರಣ ಮಳೆಗೆ ಕಳಪೆ ಕಾಮಗಾರಿಯ ಬಗ್ಗೆ ಸಾಬೀತು ಪಡಿಸುತ್ತಿದೆ. ಇದೀಗ ಕೇವಲ ಎರಡು ದಿನಗಳ ಸಾಧಾರಣ ಗಾಳಿ ಮಳೆಗೆ ಬೃಹತ್ ಗಾತ್ರದ ಪ್ಲಾಸ್ಟಿಕ್ ಹೊದಿಕೆ ಅಲ್ಲಲ್ಲಿ ಹರಿದು ಹೋಗಿದೆ. ಪ್ಲಾಸ್ಟಿಕ್ ಹರಿದ ಸ್ಥಳದಲ್ಲಿಯೇ ಜಿಲ್ಲಾಡಳಿತ ಭವನದ ಮಳೆ ನೀರು ಹರಿದು ಹೋಗುವ ಪೈಪ್‌ಲೈನ್ ಇದ್ದು, ಪೈಪ್‌ಗೆ ಹಾನಿಯಾಗಿರುವುದೇ ಪ್ಲಾಸ್ಟಿಕ್ ಹೊದಿಕೆಯ ಒಳಗಿನಿಂದ ಮಣ್ಣು ಮಿಶ್ರಿತ ಕೆಸರು ನೀರು ಹರಿಯಲು ಕಾರಣವಾಗಿದೆ. ಹರಿದ ಪ್ಲಾಸ್ಟಿಕ್ ಹೊದಿಕೆಯನ್ನು ದುರಸ್ತಿಪಡಿಸುವ ಕಾಮಗಾರಿ ನಡೆಸಲಾಗಿದೆಯಾದರೂ ಮಣ್ಣಿನ ರಾಶಿ ಸಮೇತ ಹೊರಬರುತ್ತಿರುವ ಮಳೆಯ ನೀರು ತಡೆಗೋಡೆ ಕುಸಿಯುವ ಅಪಾಯಕ್ಕೆ ಎಡೆಮಾಡಿಕೊಡುವ ಸಾಧ್ಯತೆಗಳು ಕಾಣುತ್ತಿದೆ.

ಕಳೆದ ಮಳೆಗಾಲದ ಜುಲೈ ತಿಂಗಳಲ್ಲಿ ಸುರಿದ ಧಾರಾಕಾರ ಮಳೆಗೆ ಸುಮಾರು 7 ಕೋಟಿ ರೂಪಾಯಿಗಳ ವೆಚ್ಚದಲ್ಲಿ ನಿರ್ಮಿಸಲಾಗಿದ್ದ ಜಿಲ್ಲಾಡಳಿತ ಭವನದ ತಡೆಗೋಡೆಯ ಅಂದಾಜು 50 ಮೀಟರ್ ಉದ್ದಕ್ಕೂ ಕಾಂಕ್ರೀಟ್ ಸ್ಲ್ಯಾಬ್‌ಗಳಲ್ಲಿ ಬಿರುಕು ಕಾಣಿಸಿಕೊಂಡಿತ್ತು. ಬಳಿಕ ಹಾನಿಗೊಳಗಾದ ಎಲ್ಲಾ ಸ್ಲ್ಯಾಬ್‌ಗಳನ್ನು ಬದಲಿಸುವ ಕಾಮಗಾರಿ ನಡೆಸಲಾಯಿತು. ತೆರವು ಮಾಡಿದ್ದ ತಡೆಗೋಡೆಗೆ ಮಳೆ ನೀರು ಸೇರದಂತೆ ಬೃಹತ್ ಗಾತ್ರದ ಪ್ಲಾಸ್ಟಿಕ್ ಹೊದಿಕೆ ಹೊದಿಸಲಾಗಿತ್ತು.

ತಡೆಗೋಡೆ ಕಳಪೆ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕೋಪಯೋಗಿ ಇಲಾಖೆಯ ಮಡಿಕೇರಿ ಉಪ ವಿಭಾಗದ ಕಿರಿಯ ಇಂಜಿನಿಯರ್‌ರನ್ನು ಈಗಾಗಲೇ ಅಮಾನತು ಮಾಡಲಾಗಿದೆ. ಕಳೆದ ಆಗಸ್ಟ್ ತಿಂಗಳಿನಲ್ಲಿ ಅಂದಿನ ವಿಪಕ್ಷ ನಾಯಕರಾಗಿದ್ದ ಸಿದ್ದರಾಮಯ್ಯ ಅವರು, ಮಡಿಕೇರಿಯ ಜಿಲ್ಲಾಡಳಿತ ಭವನದ ತಡೆಗೋಡೆಯನ್ನು ವೀಕ್ಷಣೆ ಮಾಡಿದ್ದು, ರಾಜ್ಯಮಟ್ಟದಲ್ಲಿ ಈ ಜರ್ಮನ್ ತಂತ್ರಜ್ಞಾನದ ತಡೆಗೋಡೆ ಸದ್ದು ಮಾಡಿತ್ತು ಎಂಬುದನ್ನು ಇಲ್ಲಿ ಸ್ಮರಿಸಬಹುದು.

ಜಿಲ್ಲೆಯಲ್ಲಿ ಆರೆಂಜ್ ಅಲರ್ಟ್ ಘೋಷಣೆ

ಮಡಿಕೇರಿ, ಜು.4– ಕೊಡಗು ಜಿಲ್ಲೆಯಲ್ಲಿ ಉತ್ತಮ ಮಳೆಯಾಗುತ್ತಿದ್ದು, ಜಿಲ್ಲೆಯಾದ್ಯಂತ ಜು.5ರ ಬೆಳಗಿನ 8.30ರವರೆಗೆ 'ಆರೆಂಜ್ ಅಲರ್ಟ್' ಘೋಷಣೆ ಮಾಡಲಾಗಿದೆ. ಈ ಅವಧಿಯಲ್ಲಿ 115.6 ಮಿ. ಮೀಟರ್‌ನಿಂದ 204.4 ಮಿ.ಮೀಟರ್ ಮಳೆಯಾಗುವ ಸಾಧ್ಯತೆಗಳಿವೆ ಎಂದು ಹವಾಮಾನ ಇಲಾಖೆ ಮಾಹಿತಿ ನೀಡಿದೆ.

ಮಂಗಳವಾರ ಬೆಳಗ್ಗೆ 8.30ಕ್ಕೆ ಕೊನೆಗೊಂಡಂತೆ ಜಿಲ್ಲೆಯಲ್ಲಿ ಕಳೆದ 24 ಗಂಟೆ ಅವಧಿಯಲ್ಲಿ ಸರಾಸರಿ 14.62 ಮಿ.ಮೀ. ಮಳೆಯಾಗಿದ್ದರೆ, ಕಳೆದ ವರ್ಷ ಇದೇ ದಿನ 45.16 ಮಿ.ಮೀ. ಮಳೆಯಾಗಿತ್ತು. ಜನವರಿಯಿಂದ ಇಲ್ಲಿಯವರೆಗಿನ ಮಳೆ 356.90 ಮಿ.ಮೀ ಸುರಿದಿದ್ದರೆ, ಕಳೆದ ವರ್ಷ ಇದೇ ಅವಧಿಯಲ್ಲಿ 891 ಮಿ.ಮೀ ಮಳೆಯಾಗಿತ್ತು.

ಮಳೆ ಪ್ರಮಾಣ ಕುಸಿತ: ಹಿಂದಿನ ವರ್ಷಗಳಿಗೆ ಹೋಲಿಸಿದರೆ ಈ ವರ್ಷ ಜೂನ್ ತಿಂಗಳಲ್ಲಿ ನಿರೀಕ್ಷಿತ ಪ್ರಮಾಣದ ಮಳೆಯಾಗಿಲ್ಲ. ಪರಿಣಾಮ ಕೃಷಿ ಚಟುವಟಿಕೆಗಳು ಹಿನ್ನಡೆ ಕಾಣುವಂತಾಗಿದ್ದು, ಭತ್ತದ ಕೃಷಿ ಕಾರ್ಯ ಮತ್ತಷ್ಟು ವಿಳಂಬವಾಗುವ ಲಕ್ಷಣಗಳು ಜಿಲ್ಲೆಯಾದ್ಯಂತ ಗೋಚರಿಸುತ್ತಿದೆ. ಇನ್ನು ಜೂನ್ ತಿಂಗಳಲ್ಲಿ ವಾಡಿಕೆ ಮಳೆ ಕೂಡ ಕೈ ಕೊಟ್ಟಿದ್ದು, ಇದೀಗ ಸುರಿಯುತ್ತಿರುವ ಪುನರ್ವಸು ಮಳೆ ಪ್ರಾರಂಭದ ಬಿರುಸು ತೋರುತ್ತಿದೆ. ಜು.20ರವರೆಗೆ ಪುನರ್ವಸು ಮಳೆ ಮುಂದುವರೆಯಲಿದೆ. 2022ರ ಜನವರಿಯಿಂದ ಜು.4ರವರೆಗೆ ಒಟ್ಟು 891 ಮಿ.ಮೀಟರ್ ಮಳೆ ಸುರಿದಿದ್ದು, ಈ ವರ್ಷ ಮಳೆ ಪ್ರಮಾಣ ಕೇವಲ 356.90 ಮಿ.ಮೀಟರ್ ಮಾತ್ರ ಜಿಲ್ಲೆಯಲ್ಲಿ ಒಟ್ಟು 534.1 ಮಿ.ಮೀಟರ್ ಪ್ರಮಾಣದ ಮಳೆ ಕುಸಿತವಾಗಿದೆ.

ಹಾರಂಗಿ ಜಲಾಶಯ ವಿವರ: ಜಿಲ್ಲೆಯ ಹಾರಂಗಿ ಜಲಾನಯನ ಪ್ರದೇಶಗಳಲ್ಲಿ ಉತ್ತಮ ಮಳೆಯಾಗುತ್ತಿರುವ ಕಾರಣ ಜಲಾಶಯಕ್ಕೆ ಉತ್ತಮ ಒಳಹರಿವು ಕಂಡು ಬಂದಿದೆ. ಹಾರಂಗಿ ಜಲಾಶಯದ ಗರಿಷ್ಠ ಮಟ್ಟ 2859 ಅಡಿಗಳಾಗಿದ್ದು, ಪ್ರಸ್ತುತ ಜಲಾಶಯದಲ್ಲಿ 2822.61 ಅಡಿಗಳಷ್ಟು ನೀರಿನ ಸಂಗ್ರಹವಿದೆ. ಹಾರಂಗಿ ಜಲಾಶಯದ ನದಿ ಮೂಲ ಪ್ರದೇಶಗಳಾದ ಮಡಿಕೇರಿ, ಗಾಳಿಬೀಡು, ಮಕ್ಕಂದೂರು, ಕಾಲೂರು, ಮಾದಾಪುರ ಮತ್ತಿತರ ಕಡೆಗಳಲ್ಲಿ ಉತ್ತಮ ಮಳೆ ಸುರಿಯುತ್ತಿರುವ ಕಾರಣ ಕೂಟುಹೊಳೆ, ಹಟ್ಟಿಹೊಳೆ, ಮಾದಾಪುರ ಹೊಳೆಗಳಲ್ಲಿ ನೀರಿನ ಪ್ರಮಾಣ ಅಲ್ಪ ಮಟ್ಟಿಗೆ ಏರಿಕೆ ಕಂಡಿದೆ. ಪರಿಣಾಮವಾಗಿ ಹಾರಂಗಿ ಜಲಾಶಯದ ನೀರಿನ ಒಳಹರಿವು 1,110 ಕ್ಯುಸೆಕ್‌ಗೆ ಏರಿಕೆಯಾಗಿದೆ. ಪ್ರಸ್ತುತ ನದಿಗೆ 30 ಕ್ಯುಸೆಕ್, ನಾಲೆಗೆ 20 ಕ್ಯುಸೆಕ್ ಪ್ರಮಾಣದ ನೀರನ್ನು ಹರಿಸಲಾಗುತ್ತಿದೆ. ಕಳೆದ ವರ್ಷ ಇದೇ ದಿನ ನದಿ ಪಾತ್ರಕ್ಕೆ 12,700 ಕ್ಯುಸೆಕ್ ಪ್ರಮಾಣದ ನೀರನ್ನು ಹರಿಸಲಾಗಿತ್ತು.

ಗಾಂಜಾ ಮಾರಾಟಗಾರರು ಮಾತ್ರವಲ್ಲ, ಸೇವಿಸುವವರ ಮೇಲೂ ಪೊಲೀಸರ ಕೆಂಗಣ್ಣು

ಪ್ರತಿಷ್ಠಿತ ಕಾಲೇಜಿನ ವಿದ್ಯಾರ್ಥಿಗಳ ಬಂಧನ


ವಿರಾಜಪೇಟೆ, ಜು.4– ಮಾದಕ ವಸ್ತು ಮತ್ತು ಗಾಂಜಾ ಮಾರಾಟ ಮಾಡುವವರ ವಿರುದ್ಧ ಸಮರ ಸಾರಿರುವ ಪೊಲೀಸರು ಇದೀಗ ಮಾದಕ ವಸ್ತು ಮತ್ತು ಗಾಂಜಾ ಸೇವಿಸುವವರ ಮೇಲೂ ಕಣ್ಣಾಗವಲಿಟ್ಟಿದ್ದು, ಐವರು ವಿದ್ಯಾರ್ಥಿಗಳನ್ನು ಬಂಧಿಸಿದ್ದಾರೆ.

ವಿರಾಜಪೇಟೆಯ ಪ್ರತಿಷ್ಠಿತ ಕಾಲೇಜಿನ ಐವರು ವಿದ್ಯಾರ್ಥಿಗಳು ಮಾದಕ ವಸ್ತು ಸೇವಿಸಿ ಸಿಕ್ಕಿಬಿದ್ದಿದ್ದು, ಅವರನ್ನು ಜೈಲಿಗೆ ಕಳುಹಿಸಲಾಗಿದೆ. ಗಾಂಜಾ ಮತ್ತು ಮಾದಕ ವಸ್ತು ಮಾರಾಟ ಮಾಡುತ್ತಿದ್ದ ಆರೋಪಿಗಳನ್ನು ಬಂಧಿಸಿದ ವೇಳೆ ಅವರು ನೀಡಿದ ಮಾಹಿತಿ ಆಧರಿಸಿ, ಪ್ರತಿಷ್ಠಿತ ಕಾಲೇಜಿನ ಮೇಲೆ ದಾಳಿ ನಡೆಸಿ ವಿರಾಜಪೇಟೆ ಪೊಲೀಸರು ಏಳು ವಿದ್ಯಾರ್ಥಿಗಳನ್ನು ತಮ್ಮ ವಶಕ್ಕೆ ಪಡೆದು ಅವರನ್ನು ವೈದ್ಯಕೀಯ ಪರೀಕ್ಷೆಗೊಳಪಡಿಸಿದರು.

ಇವರಲ್ಲಿ ಐವರು ಮಾದಕ ವಸ್ತು ಮತ್ತು ಗಾಂಜಾ ಸೇವಿಸಿರುವುದು ದೃಢಪಟ್ಟಿರುವ ಹಿನ್ನೆಲೆಯಲ್ಲಿ ಅವರುಗಳ ವಿರುದ್ಧ ಎಫ್‌ಐಆರ್ ದಾಖಲಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿ, ಅವರುಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಗಾಂಜಾ ಮಾರಾಟ, ಇಬ್ಬರ ಸೆರೆ: ವಿರಾಜಪೇಟೆ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಗಾಂಜಾ ಮಾರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಬಂಧಿಸಲಾಗಿದೆ. ಅಮ್ಮತ್ತಿ ನಿವಾಸಿ ಎನ್.ಎ. ಪೊನ್ನಣ್ಣ(46) ಮತ್ತು ವಿರಾಜಪೇಟೆ ಸುಂಕದಕಟ್ಟೆ ನಿವಾಸಿ ಹೆಚ್.ಆರ್. ಲೋಹಿತ್ (26) ಬಂಧಿತ ಆರೋಪಿಗಳಾಗಿದ್ದಾರೆ.

ಗಾಂಜಾ ಮಾರುತ್ತಿದ್ದ ಇಬ್ಬರ ಸೆರೆ





ಅಮ್ಮತ್ತಿಯ ಮುತ್ತಪ್ಪ ದೇವಾಲಯ ಸಮೀಪ ಮಾದಕ ವಸ್ತು ಮಾರಾಟಕ್ಕೆ ಯತ್ನಿಸುತ್ತಿರುವ ಬಗ್ಗೆ ದೊರೆತ ಖಚಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ಆರೋಪಿಗಳಿಂದ 104 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದ್ದು, ಪೊಲೀಸರು ಮುಂದಿನ ಕಾನೂನು ಕ್ರಮ ಕೈಗೊಂಡಿದ್ದಾರೆ. ವಿರಾಜಪೇಟೆ ಡಿವೈಎಸ್‌ಪಿ ಆರ್. ಮೋಹನ್ ಕುಮಾರ್, ವೃತ್ತ ನಿರೀಕ್ಷಕ ಬಿ.ಎಸ್. ಶಿವರುದ್ರಪ್ಪ ಠಾಣಾಧಿಕಾರಿ ಮಂಜುನಾಥ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಎಂಡಿಎಂಎ, ಗಾಂಜಾ ಮಾರುತ್ತಿದ್ದ ಇಬ್ಬರ ಬಂಧನ





ಮಡಿಕೇರಿ, ಜು.4– ನಿಷೇಧಿತ ಎಂಡಿಎಂಎ ಮಾದಕ ವಸ್ತು ಮತ್ತು ಗಾಂಜಾ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ನಾಪೋಕ್ಲು ಪೊಲೀಸರು ಬಂಧಿಸಿದ್ದಾರೆ. ಮಡಿಕೇರಿ ನಿವಾಸಿಗಳಾದ ಮೊಹಮದ್ ಹ್ಯಾರಿಸ್(40) ಮತ್ತು ಹ್ಯಾರಿಸ್ (37) ಬಂಧಿತ ಆರೋಪಿಗಳು. ಬಂಧಿತರಿಂದ 4 ಗ್ರಾಂ ಎಂಡಿಎಂಎ ಮತ್ತು 225 ಗ್ರಾಂ ಗಾಂಜಾವನ್ನು ವಶಕ್ಕೆ ಪಡೆಯಲಾಗಿದೆ.

ನಾಪೋಕ್ಲು ಸಮೀಪದ ಕೊಟ್ಟಮುಡಿ ಗ್ರಾಮದ ಜಂಕ್ಷನ್ ಬಳಿಯ ಬಸ್ ನಿಲ್ದಾಣದ ಸಮೀಪ ಇಬ್ಬರು ವ್ಯಕ್ತಿಗಳು ನಿಷೇಧಿತ ಮಾದಕ ವಸ್ತುಗಳನ್ನು ಮಾರಾಟ ಮಾಡುತ್ತಿರುವ ಕುರಿತು ನಾಪೋಕ್ಲು ಪೊಲೀಸರಿಗೆ ಖಚಿತ ಮಾಹಿತಿ ಲಭಿಸಿತ್ತು. ಈ ಮಾಹಿತಿ ಆಧರಿಸಿ ದಾಳಿ ನಡೆಸಿದ ಸಂದರ್ಭ ಆರೋಪಿಗಳು ಮಾಲು ಸಹಿತ ಸೆರೆಯಾಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಮಡಿಕೇರಿ ಡಿವೈಎಸ್‌ಪಿ ಜಗದೀಶ್, ವೃತ್ತನಿರೀಕ್ಷಕ ಅನೂಪ್ ಮಾದಪ್ಪ, ನಾಪೋಕ್ಲು ಠಾಣಾಧಿಕಾರಿ ಮಂಜುನಾಥ್ ಮತ್ತು ಸಿಬ್ಬಂದಿಗಳು ಕಾರ್ಯಾಚರಣೆ ನಡೆಸಿದ್ದಾರೆ.

ಇಂದು ನೇರ ಸಂದರ್ಶನ

ಮಡಿಕೇರಿ, ಜು.4– ಗಾಳಿಬೀಡು ಜವಾಹರ ನವೋದಯ ವಿದ್ಯಾಲಯ ವತಿಯಿಂದ 2023–24 ನೇ ಸಾಲಿಗೆ ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ವೈದ್ಯಕೀಯ ಶುಶ್ರೂಷಕಿ (ಸ್ಟಾಫ್ ನರ್ಸ್) ಹುದ್ದೆಗೆ ಜು.5 ರಂದು ಬೆಳಗ್ಗೆ 10 ರಿಂದ ನೇರ ಸಂದರ್ಶನ ನಡೆಯಲಿದೆ.

ಸ್ಟಾಫ್ ನರ್ಸ್ ಹುದ್ದೆಯು ತಾತ್ಕಾಲಿಕವಾಗಿದ್ದು, ತಿಂಗಳಿಗೆ ರೂ. 34,125 ವೇತನ ನೀಡಲಾಗುತ್ತದೆ. ಆಸಕ್ತರು ಅಗತ್ಯ ದಾಖಲೆಗಳೊಂದಿಗೆ ನೇರ ಸಂದರ್ಶನಕ್ಕೆ ಬೆಳಗ್ಗೆ 10 ರಿಂದ ಮಧ್ಯಾಹ್ನ 12.30 ಗಂಟೆವರೆಗೆ ಹಾಜರಾಗಬಹುದು. ಮಾಹಿತಿಗೆ ವೆಬ್‌ಸೈಟ್ nvsjnv_kodagu ಹಾಗೂ ಮೊ. 9447368470 ಸಂಪರ್ಕಿಸಬಹುದಾಗಿದೆ.

ಚೆಸ್ಕಾಂ ಬೇಜವಾಬ್ದಾರಿಯಿಂದ ಮುತ್ತಾರ್ಮುಡಿ ಗ್ರಾಮದಲ್ಲಿ ಕಗ್ಗತ್ತಲು

ಮಡಿಕೇರಿ, ಜು.4– ಮೂರ್ನಾಡು ಚೆಸ್ಕಾಂ ವಿದ್ಯುತ್ ನಿಗಮದ ಕಿರಿಯ ಅಭಿಯಂತರರು ಹಾಗೂ ಲೈನ್‌ಮೆನ್ ಕಳೆದ ಒಂದು ವರ್ಷದಿಂದ ಮುತ್ತಾರ್ಮುಡಿ ಗ್ರಾಮದ ಮನೆಗಳಿಗೆ ಸರಿಯಾಗಿ ವಿದ್ಯುತ್ ಸರಬರಾಜು ಮಾಡದೆ ಕರ್ತವ್ಯಲೋಪ ಎಸಗುತ್ತಿದ್ದಾರೆ ಎಂದು ಮುತ್ತಾರ್ಮುಡಿ ಗ್ರಾಮಸ್ಥರು ಆರೋಪಿಸಿದ್ದಾರೆ.

ಮುತ್ತಾರ್ಮುಡಿ ಗ್ರಾಮಸ್ಥರ ಪರವಾಗಿ 54 ಗ್ರಾಮಸ್ಥರ ಸಹಿ ಸಹಿತ ಮಡಿಕೇರಿ ವಿಧಾನಸಭಾ ಕ್ಷೇತ್ರದ ಶಾಸಕ ಡಾ.ಮಂಥರ್ ಗೌಡ ಹಾಗೂ ಗ್ರಾಮಾಂತರ ಪೊಲೀಸ್ ಠಾಣಾಧಿಕಾರಿಗಳಿಗೆ ಮನವಿ ಸಲ್ಲಿಸಿದ ಗ್ರಾಮಸ್ಥರಾದ ತೆಕ್ಕಡೆ ಆರ್.ಸುನಂದ ಹಾಗೂ ಪಾರೆಮಜಲು ದಿನೇಶ್ ಗ್ರಾಮದ ಸಮಸ್ಯೆಗಳ ಬಗ್ಗೆ ವಿವರಿಸಿದರು. ಮೂರ್ನಾಡು ಪಟ್ಟಣದಿಂದ ಕೇವಲ 2ಕಿ.ಮೀ ಅಂತರದಲ್ಲಿರುವ ಮುತ್ತಾರ್ಮುಡಿ ಗ್ರಾಮಕ್ಕೆ ಮೂರ್ನಾಡಿನಿಂದ ಬರುವ ಕಂಬ ಮತ್ತು ವಿದ್ಯುತ್ ತಂತಿಗಳಿಗೆ ಅಡಚಣೆ ಆಗುವ ಮರದ ಕೊಂಬೆ, ರೆಂಬೆಗಳನ್ನು ಕತ್ತರಿಸದೆ ಜೋತು ಬಿದ್ದ ತಂತಿಗಳನ್ನು ಸರಿಪಡಿಸದೆ ನಿರ್ಲಕ್ಷ್ಯ ವಹಿಸಲಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಅಲ್ಲದೆ ವಿದ್ಯುತ್ ಕಂಬಗಳಲ್ಲಿ ಬೆಂಕಿ ಕಾಣಿಸಿಕೊಂಡಾಗ, ಕಂಬದಿಂದ ತಂತಿ ತುಂಡಾದಾಗ, ರಸ್ತೆ ಬದಿಯ ಕಂಬಕ್ಕೆ ವಾಹನಗಳು ಡಿಕ್ಕಿಯಾದಾಗ ಮತ್ತು ತುರ್ತು ಸಂದರ್ಭಗಳಲ್ಲಿ ಚೆಸ್ಕಾಂ ಕಿರಿಯ ಅಭಿಯಂತರ ಹಾಗೂ ಲೈನ್‌ಮೆನ್ ಗ್ರಾಮಸ್ಥರ ಕರೆಗಳನ್ನು ಸ್ವೀಕರಿಸುವುದಿಲ್ಲ. ಕಚೇರಿಗೆ ತೆರಳಿ ವಿದ್ಯುತ್ ಇಲ್ಲ ಎಂದು ಸಿಬ್ಬಂದಿಗಳಿಗೆ ಹೇಳಿದರೆ ಬೆಳಗ್ಗೆ 10 ಗಂಟೆಗೆ ವಿದ್ಯುತ್ ನೀಡಿ ಸಂಜೆ 6 ಗಂಟೆಗೆ ವಿದ್ಯುತ್ ಸ್ಥಗಿತಗೊಳಿಸಲಾಗುತ್ತಿದೆ. ಇದರಿಂದ ಗ್ರಾಮಸ್ಥರಿಗೆ ಮಾನಸಿಕ ಹಿಂಸೆಯಾಗುತ್ತಿದೆ ಎಂದು ಆರೋಪಿಸಿದರು.

ವಿದ್ಯುತ್ ಇಲ್ಲದೆ ಗ್ರಾಮಸ್ಥರು ತತ್ತರಿಸಿ ಹೋಗಿದ್ದು, ಕುಡಿಯುವ ನೀರಿನ ಸಮಸ್ಯೆಯನ್ನು ಕೂಡ ಎದುರಿಸುತ್ತಿದ್ದಾರೆ. ವಿದ್ಯಾರ್ಥಿಗಳು ಓದಲು, ಬರೆಯಲು ಸಾಧ್ಯವಾಗದೆ ಶೈಕ್ಷಣಿಕವಾಗಿ ಹಿಂದುಳಿಯುತ್ತಿದ್ದಾರೆ. ತೋಟದ ಕಾರ್ಮಿಕರು ಬೆಳಗ್ಗಿನ ಉಪಾಹಾರ ತಯಾರಿಸಲು ಸಾಧ್ಯವಾಗದೆ ತೋಟಗಳಲ್ಲಿ ನಿತ್ರಾಣಗೊಂಡು ಬಿದ್ದಿರುವ ಘಟನೆಗಳು ಕೂಡ ನಡೆದಿದೆ ಎಂದು ಸುನಂದ ಹಾಗೂ ದಿನೇಶ್ ಬೇಸರ ವ್ಯಕ್ತಪಡಿಸಿದರು. ಹಲವು ಬಾರಿ ಸಂಬಂಧಿಸಿದ ಅಧಿಕಾರಿಗಳಿಗೆ ಮನವಿ ಮಾಡಿದರೂ ಇಲ್ಲಿಯವರೆಗೆ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ ಮೂರ್ನಾಡು ವಿದ್ಯುತ್ ಇಲಾಖೆಗೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದ್ದಾರೆ.

ಜು.11 ರಿಂದ ಶಸ್ತ್ರಚಿಕಿತ್ಸಾ ಶಿಬಿರ

ಮಡಿಕೇರಿ, ಜು.4– ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಿಂದ ಜುಲೈನಲ್ಲಿ ಮಹಿಳಾ ಸಂತಾನಶಕ್ತಿಹರಣ ಶಸ್ತ್ರಚಿಕಿತ್ಸಾ ಶಿಬಿರ ನಡೆಯಲಿದೆ. ಜು.11 ಸಿದ್ದಾಪುರ, ಜು.20 ನಾಪೋಕ್ಲು, ಜು.21 ಕುಟ್ಟ ಮತ್ತು ಜು.25 ಕುಶಾಲನಗರ ಸಮುದಾಯ ಆರೋಗ್ಯ ಕೇಂದ್ರ, ಜು.18 ಸೋಮವಾರಪೇಟೆ ಸಾರ್ವಜನಿಕ ಆಸ್ಪತ್ರೆಯಲ್ಲಿ ಲ್ಯಾಪ್ರೋಸ್ಕೋಪಿಕ್ ಚಿಕಿತ್ಸೆ ನಡೆಯಲಿದೆ. ಜುಲೈ, 12 ಚೆಟ್ಟಳ್ಳಿ, ಜು.19 ಮಾದಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಟ್ಯುಬೆಕ್ಟಮಿ ಚಿಕಿತ್ಸೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.

ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ರೈತರ ಪ್ರತಿಭಟನೆ



ಚಾಮರಾಜನಗರ, ಜು.4– ಮಲೆ ಮಹದೇಶ್ವರಸ್ವಾಮಿ ಹಾಗೂ ಕಾವೇರಿ ವನ್ಯಜೀವಿ ವಿಭಾಗದ ಡಿಸಿಎಫ್‌ಗಳಿಂದ ರೈತರಿಗೆ ತೊಂದರೆಯಾಗುತ್ತಿದೆ ಎಂದು ಆರೋಪಿಸಿ ಹಾಗೂ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ನಗರದಲ್ಲಿ ಮಂಗಳವಾರ ರಾಜ್ಯ ರೈತ ಸಂಘದ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು.

ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಮುಂಭಾಗ ಜಮಾಯಿಸಿದ ಪ್ರತಿಭಟನಾಕಾರರು ಅಲ್ಲಿಂದ ಮೆರವಣಿಗೆಯಲ್ಲಿ ಭುವನೇಶ್ವರಿ ವೃತ್ತಕ್ಕೆ ತೆರಳಿ ಕೆಲಕಾಲ ರಸ್ತೆ ತಡೆದು ಪ್ರತಿಭಟಿಸಿದರು. ಬಳಿಕ ಜಿಲ್ಲಾಡಳಿತ ಭವನಕ್ಕೆ ತೆರಳಿ ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ಮಲೆ ಮಹದೇಶ್ವರ ಬೆಟ್ಟದ ಸುತ್ತಮುತ್ತಲಿನ ಪೋಡುಗಳಲ್ಲಿ ರೈತರು ಹಲವು ವರ್ಷಗಳಿಂದ ಜೀವನ ನಡೆಸುತ್ತಿದ್ದಾರೆ. ಆದರೆ, ಡಿಸಿಎಫ್‌ಗಳಾದ ಸಂತೋಷ್ ಕುಮಾರ್ ಹಾಗೂ ನಂದೀಶ್ ರೈತರ ದೊಡ್ಡಿಗಳಿಗೆ ಬೆಂಕಿ ಹಾಕಿ, ಪಟಾಕಿ ಸಿಡಿಸಿ ಸಣ್ಣ ಕರುಗಳನ್ನು ಓಡಿಸಿ ತೊಂದರೆ ನೀಡುತ್ತಿದ್ದಾರೆ. ಅಲ್ಲದೇ ಹಿಂದಿನ ಡಿಸಿಎಫ್ ಏಡುಕೊಂಡಲು ಅವರು ರೈತರಿಗೆ ಎಲ್ಲಾ ಸೌಲಭ್ಯಗಳನ್ನು ನಿಲ್ಲಿಸಿದ್ದಾರೆ ಎಂದು ದೂರಿದರು.

ರೈತರಿಗೆ ತೊಂದರೆ ನೀಡುತ್ತಿರುವ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಬೇಕು. ಇಲ್ಲದಿದ್ದರೆ ಮಹದೇಶ್ವರ ಬೆಟ್ಟದಲ್ಲಿ ರಸ್ತೆ ತಡೆ ನಡೆಸಲಾಗುವುದು. ಅಲ್ಲದೇ ಬೆಟ್ಟಕ್ಕೆ ಜನಪ್ರತಿನಿಧಿಗಳನ್ನು ಬರುವುದನ್ನು ತಡೆಯಲಾಗುವುದು ಎಂದು ಎಚ್ಚರಿಸಿದರು.

ಕಾಡಿನಲ್ಲಿ ರೈತರಿಗೆ ದೊಡ್ಡಿ ಹಾಕಲು ಅವಕಾಶ ಕಲ್ಪಿಸಬೇಕು. ಹಿಂದೆ ಇದ್ದ ಏಡುಕುಂಡಲು ಅವರ ಜನಪರ ಕಾರ್ಯಕ್ರಮಗಳನ್ನು ಮುಂದುವರಿಸಬೇಕು. ಸಂತೋಷ್ ಕುಮಾರ್ ಹಾಗೂ ನಂದೀಶ್ ಮೇಲೆ ಎಫ್‌ಐಆರ್ ದಾಖಲಿಸಬೇಕು. ಕೂಡಲೇ ಜಿಲ್ಲಾ ಉಸ್ತುವಾರಿ ಸಚಿವರು ಆ ಭಾಗದ ಸಮಸ್ಯೆಗಳನ್ನು ಬಗೆಹರಿಸಲು ಅಧಿಕಾರಿಗಳ ಸಭೆ ಕರೆಯಬೇಕು ಎಂದು ಆಗ್ರಹಿಸಿದರು.

ಈ ವೇಳೆ ಸ್ಥಳಕ್ಕಾಗಮಿಸಿದ ಪ್ರಭಾರ ಜಿಲ್ಲಾಧಿಕಾರಿ ಎಸ್.ಪೂವಿತಾ ಅವರಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಅಂತ್ಯಗೊಳಿಸಲಾಯಿತು. ಪ್ರತಿಭಟನೆಯಲ್ಲಿ ರೈತ ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್, ಮುಖಂಡರಾದ ಚಂಗಡಿ ಕರಿಯಪ್ಪ, ಪಿ.ಜಗದೀಶ್, ಕುಮಾರ್, ಶಿವಮೂರ್ತಿ, ಮಾದೇಶ, ಪರಮೇಶ್, ಬಲರಾಮ, ಅಲಗ ತಂಬಡಿ, ಪುಟ್ಟ, ಹುಚ್ಚಯ್ಯ, ಮಹದೇವ, ಕೆಂಪರಾಜು, ಚಿನ್ನಪ್ಪ, ಮಹೇಶ್, ಬೊಮ್ಮೇಗೌಡ ಸೇರಿದಂತೆ ಇತರರಿದ್ದರು.

ಜು.8ಕ್ಕೆ ರಾಷ್ಟ್ರೀಯ ಲೋಕ್ ಅದಾಲತ್

ಜಿಲ್ಲಾ ನ್ಯಾಯಾಧೀಶೆ ಬಿ.ಎಸ್. ಭಾರತಿ



ಚಾಮರಾಜನಗರ, ಜು.4– ಚಾಮರಾಜನಗರ ಜಿಲ್ಲೆಯ ಎಲ್ಲಾ ನ್ಯಾಯಾಲಯಗಳಲ್ಲಿ ಬಾಕಿ ಇರುವ ರಾಜಿಯೋಗ್ಯ ಹಾಗೂ ವ್ಯಾಜ್ಯ ಪೂರ್ವ ಪ್ರಕರಣಗಳನ್ನು ಇತ್ಯರ್ಥಪಡಿಸಲು ಜು.8ರಂದು ರಾಷ್ಟ್ರೀಯ ಲೋಕ್ ಅದಾಲತ್ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಅಧ್ಯಕ್ಷರು ಹಾಗೂ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಬಿ.ಎಸ್.ಭಾರತಿ ತಿಳಿಸಿದರು.

ನಗರದ ಜಿಲ್ಲಾ ನ್ಯಾಯಾಲಯದ ಆವರಣದಲ್ಲಿರುವ ವ್ಯಾಜ್ಯ ಪೂರ್ವ ಪರಿಹಾರಗಳ ಕೇಂದ್ರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚಾಮರಾಜನಗರ ಜಿಲ್ಲಾ ನ್ಯಾಯಾಲಯ, ಯಳಂದೂರು, ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆ ತಾಲೂಕಿನ ನ್ಯಾಯಾಲಯಗಳಲ್ಲಿ ಲೋಕ್ ಅದಾಲತ್ ನಡೆಯಲಿದೆ ಎಂದರು.

ರಾಜಿಯಾಗಬಲ್ಲ ಅಪರಾಧಿಕ ಪ್ರಕರಣಗಳು, ಬ್ಯಾಂಕ್ ವಸೂಲಾತಿ ಪ್ರಕರಣಗಳು, ಉದ್ಯೋಗದಲ್ಲಿ ಪುನರ್ ಸ್ಥಾಪಿಸಲ್ಪಡುವ, ಕೈಗಾರಿಕಾ ಕಾರ್ಮಿಕ ವೇತನ, ಗ್ರಾಹಕರ ವೇದಿಕೆ, ರಿಯಲ್ ಎಸ್ಟೇಟ್, ಸಾಲ ವಸೂಲಾತಿ, ಚೆಕ್ ಅಮಾನ್ಯ ಪ್ರಕರಣಗಳು, ಮೋಟಾರ್ ಅಪಘಾತ ಪರಿಹಾರ, ವಿದ್ಯುತ್ ಮತ್ತು ನೀರಿನ ಶುಲ್ಕ, ಕಾರ್ಮಿಕ ವಿವಾದಗಳು, ಭೂಸ್ವಾಧೀನ, ವೇತನ ಭತ್ಯೆ ಹಾಗೂ ಪಿಂಚಣಿಗೆ ಸಂಬಂಧಿಸಿದ ಪ್ರಕರಣಗಳು, ಸಾರ್ವಜನಿಕ ಉಪಯುಕ್ತತೆ ಸೇವೆಗಳಿಗೆ ಸಂಬಂಧಿಸಿದ ಪ್ರಕರಣಗಳು, ರಾಜಿಯೋಗ್ಯ ಸಿವಿಲ್ ಮತ್ತು ಕ್ರಿಮಿನಲ್ ಪ್ರಕರಣಗಳು ಹಾಗೂ ಇತರೆ ಪ್ರಕರಣಗಳು, ಕುಟುಂಬ ನ್ಯಾಯಾಲಯದ ಪ್ರಕರಣ (ವಿವಾಹ ವಿಚ್ಛೇದನವನ್ನು ಹೊರತುಪಡಿಸಿ)ಗಳನ್ನು ಲೋಕ್ ಅದಾಲತ್‌ನಲ್ಲಿ ಇತ್ಯರ್ಥಪಡಿಸಲಾಗುವುದು ಎಂದು ತಿಳಿಸಿದರು.

ಕರ್ನಾಟಕ ಉಚ್ಚ ನ್ಯಾಯಾಲಯದ ಮಾರ್ಗಸೂಚಿ (ಎಸ್‌ಓಪಿ) ಯಂತೆ ಲೋಕ್ ಅದಾಲತ್‌ನಲ್ಲಿ ನ್ಯಾಯಾಲಯಗಳಲ್ಲಿ ಬಾಕಿ ಇರುವ ರಾಜಿಯೋಗ್ಯ ಪ್ರಕರಣಗಳನ್ನು ಶೀಘ್ರ ಹಾಗೂ ಪರಿಣಾಮಕಾರಿ ತೀರ್ಮಾನಕ್ಕಾಗಿ ಚಾಮರಾಜನಗರ ಜಿಲ್ಲಾ ಕೇಂದ್ರ ನ್ಯಾಯಾಲಯಗಳಲ್ಲಿ, ಯಳಂದೂರು, ಕೊಳ್ಳೇಗಾಲ ಹಾಗೂ ಗುಂಡ್ಲುಪೇಟೆ ನ್ಯಾಯಾಲಯಗಳಲ್ಲಿ ಉಭಯ ಪಕ್ಷಕಾರರು ರಾಜಿ ಮಾಡಿಕೊಳ್ಳಲು ಸಂಧಾನಕಾರರ ಮೂಲಕ ಸೂಕ್ತ ಮಾರ್ಗದರ್ಶನ ನೀಡುವ ಪ್ರತಿದಿನ ಪೂರ್ವಭಾವಿ ಸಮಾಲೋಚನೆಗಳು ಭೌತಿಕ /ವಿಸಿ ಮೂಲಕ ನಡೆಯುತ್ತಿದೆ. ಪ್ರಾಧಿಕಾರ ಹಾಗೂ ತಾಲೂಕು ಕಾನೂನು ಸೇವಾ ಸಮಿತಿಗಳಲ್ಲಿ ಆನ್‌ಲೈನ್, ವಿಡಿಯೋ ಕಾನ್ಫರೆನ್ಸ್, ಇ–ಮೇಲ್, ಎಸ್.ಎಂ.ಎಸ್, ವಾಟ್ಸ್‌ಆಪ್ ಮೂಲಕ ಅಥವಾ ಖುದ್ದಾಗಿ ಹಾಜರಾಗುವ ಮೂಲಕ ಸಂಬಂಧಪಟ್ಟ ಪ್ರಾಧಿಕಾರ ಮತ್ತು ಸಮಿತಿಗಳನ್ನು ಸಂಪರ್ಕಿಸಿ ಪ್ರಕರಣಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸಿಕೊಳ್ಳಬಹುದಾಗಿದೆ ಎಂದರು.

ಜು.8ರಂದು ನಡೆಯುವ ಮೆಗಾ ಲೋಕಾ ಅದಾಲತ್‌ನಲ್ಲಿ ಸಂಬಂಧಿತ ವಕೀಲರು, ಕಕ್ಷಿದಾರರು ತಮ್ಮ ಸಹಕಾರ ನೀಡಿದಲ್ಲಿ ಸಂಧಾನಕಾರರು ನೀಡುವ ಸಲಹೆಗಳನ್ನು ಆಲಿಸಿ, ಪರಸ್ಪರ ಒಪ್ಪಿಗೆಯಾದಲ್ಲಿ ಪ್ರಕರಣ ಬಗೆಹರಿಸಿಕೊಳ್ಳಬಹುದು. ಇದರಿಂದ ಕಕ್ಷಿದಾರರ ಸಮಯ ಮತ್ತು ಹಣ ಉಳಿತಾಯವಾಗಿ ಪಕ್ಷಕಾರರ ನಡುವೆ ಬಾಂಧವ್ಯ ನೆಲೆಸುವಂತಾಗುತ್ತದೆ ಎಂದರು. ಕಳೆದ ಫೆ.11ರಂದು ನಡೆದ ರಾಷ್ಟ್ರೀಯ ಲೋಕ್‌ಅದಾಲತ್‌ನಲ್ಲಿ ಒಟ್ಟು 11,975 ಪ್ರಕರಣಗಳನ್ನು ಇತ್ಯರ್ಥಪಡಿಸಲಾಗಿದೆ. ಈ ಪೈಕಿ 1621 ನ್ಯಾಯಾಲಯದ ಪ್ರಕರಣ ಗಳಾಗಿದ್ದು, 10354 ವ್ಯಾಜ್ಯ ಪೂರ್ವ ಪ್ರಕರಣಗಳಾಗಿವೆ ಎಂದರು.

ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಇಂದುಶೇಖರ್ ಮಾತನಾಡಿ, ಬೃಹತ್ ಲೋಕ್ ಅದಾಲತ್‌ನಲ್ಲಿ ರಾಜಿಯಾಗಬಲ್ಲ ಕ್ರಿಮಿನಲ್ ಪ್ರಕರಣಗಳನ್ನು ಇತ್ಯರ್ಥಪಡಿಸಲಾಗುತ್ತದೆ. ಇತರೆ ರಾಜಿಯೋಗ್ಯ ಪ್ರಕರಣಗಳನ್ನು ಬಗೆಹರಿಸಲಾಗುತ್ತದೆ. ಕಕ್ಷಿದಾರರು ಈ ಲೋಕ್ ಅದಾಲತ್ ಸದುಪಯೋಗ ಮಾಡಿಕೊಳ್ಳಬೇಕೆಂದು ತಿಳಿಸಿದರು.

> **ಲೋಕ್ ಅದಾಲತ್‌ನಲ್ಲಿ ಹೆಚ್ಚೆಚ್ಚು ಪ್ರಕರಣಗಳನ್ನು ರಾಜಿ ಸಂಧಾನದ ಮೂಲಕ ಇತ್ಯರ್ಥಪಡಿಸುವ ಸಲುವಾಗಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದಿಂದ ವಿಮಾ ಕಂಪನಿಗಳು, ಭೂ ಸ್ವಾಧೀನಾಧಿಕಾರಿಗಳು, ಬ್ಯಾಂಕ್‌ಗಳು, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಪೊಲೀಸ್ ಇಲಾಖೆ, ವಕೀಲರು, ಕಂದಾಯ ಇಲಾಖೆ, ಅಬಕಾರಿ ಇಲಾಖೆ ಅಧಿಕಾರಿಗಳೊಂದಿಗೆ ಈಗಾಗಲೇ ಪೂರ್ವಭಾವಿ ಸಭೆ ನಡೆಸಲಾಗಿದೆ. ಜು.8ರಂದು ನಡೆಯುವ ಲೋಕ್ ಅದಾಲತ್‌ನಲ್ಲಿ 13 ಸಾವಿರ ಪ್ರಕರಣಗಳನ್ನು ಇತ್ಯರ್ಥಪಡಿಸುವ ಗುರಿ ಹೊಂದಲಾಗಿದೆ.**
>
> – ಎಂ.ಶ್ರೀಧರ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ.

ಸಾರಿಗೆ ಬಸ್ ನಿಲುಗಡೆಗೆ ಆಗ್ರಹಿಸಿ ಪ್ರತಿಭಟನೆ



ಚಾಮರಾಜನಗರ, ಜು.4– ಕೆಎಸ್‌ಆರ್‌ಟಿಸಿ ಬಸ್ ನಿಲುಗಡೆಗೆ ಆಗ್ರಹಿಸಿ ತಾಲೂಕಿನ ಪಣ್ಯದಹುಂಡಿ ಗ್ರಾಮದಲ್ಲಿ ವಿದ್ಯಾರ್ಥಿಗಳು ಮಂಗಳವಾರ ಬೆಳಗ್ಗೆ ಪ್ರತಿಭಟನೆ ನಡೆಸಿದರು.

ಗ್ರಾಮದ ಬಸ್ ನಿಲ್ದಾಣದಲ್ಲಿ ಜಮಾಯಿಸಿದ ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರು ಸಾರಿಗೆ ಬಸ್‌ಗಳನ್ನು ತಡೆದು ಆಕ್ರೋಶ ವ್ಯಕ್ತಪಡಿಸಿದರು. ಇದರಿಂದ ಕೆಲಕಾಲ ರಸ್ತೆ ಸಂಚಾರ ಸ್ಥಗಿತವಾಗಿತ್ತು.

ಗ್ರಾಮದಿಂದ ನಿತ್ಯ ಶಾಲಾ–ಕಾಲೇಜು ವಿದ್ಯಾರ್ಥಿಗಳು ವ್ಯಾಸಂಗಕ್ಕಾಗಿ ಸಮೀಪದ ಚಾಮರಾಜನಗರ, ನಂಜನಗೂಡು ಹಾಗೂ ಮೈಸೂರಿಗೆ ಹೋಗುತ್ತಾರೆ. ಅಲ್ಲದೇ ಕೆಲಸಕ್ಕೆಂದು ಗ್ರಾಮದಿಂದ ಹಲವರು ಮೈಸೂರು– ಚಾಮರಾಜನಗರಕ್ಕೆ ತೆರಳುತ್ತಾರೆ. ಚಾಮರಾಜನಗರ– ಮೈಸೂರು ನಡುವೆ ಸಂಚರಿಸುವ ಬಹುತೇಕ ಕೆಎಸ್‌ಆರ್‌ಟಿಸಿ ಬಸ್‌ಗಳು ಗ್ರಾಮೀಣ ಪ್ರದೇಶವಾದ ಪಣ್ಯದಹುಂಡಿಯಲ್ಲಿ ನಿಲುಗಡೆ ಮಾಡುತ್ತಿಲ್ಲ. ಇದರಿಂದ ವಿದ್ಯಾರ್ಥಿಗಳು ಹಾಗೂ ಗ್ರಾಮಸ್ಥರಿಗೆ ತೊಂದರೆಯಾಗಿದೆ. ಒಂದು ಬಸ್ ನಿಂತರೂ ವಿದ್ಯಾರ್ಥಿಗಳು ಹರಸಾಹಸ ಪಟ್ಟು ಪ್ರಯಾಣಿಸಬೇಕಾಗುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಈ ಭಾಗದಲ್ಲಿ ಸಂಚರಿಸುವ ಬಸ್ ಚಾಲಕರು, ನಿರ್ವಾಹಕರಿಗೆ ಬಸ್ ನಿಲ್ಲಿಸುವಂತೆ ಸೂಚಿಸುವ ಮೂಲಕ ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಬೇಕು ಎಂದು ತಿಳಿಸಿದರು.

ಪಣ್ಯದಹುಂಡಿಯಲ್ಲಿ ಪ್ರತಿಭಟನೆ ವಿಷಯ ತಿಳಿದು ಸ್ಥಳಕ್ಕೆ ಚಾಮರಾಜನಗರ ಗ್ರಾಮಾಂತರ ಠಾಣೆ ಪೊಲೀಸರು ಭೇಟಿ ನೀಡಿ, ಪ್ರತಿಭಟನಾಕಾರರ ಮನವೊಲಿಸಲು ಪ್ರಯತ್ನಿಸಿದರು. ಆದರೆ ಇದಕ್ಕೆ ಒಪ್ಪದ ಪ್ರತಿಭಟನಾಕಾರರು ಸ್ಥಳಕ್ಕೆ ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಬರುವಂತೆ ಪಟ್ಟು ಹಿಡಿದರು. ಬಳಿಕ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಚಂದ್ರಶೇಖರ್ ಭೇಟಿ ನೀಡಿ ಪ್ರತಿಭಟನಾಕಾರರ ಅಹವಾಲು ಆಲಿಸಿದರು.

ಈ ವೇಳೆ ಮಾತನಾಡಿದ ಚಂದ್ರಶೇಖರ್, ಬುಧವಾರದಿಂದ ಪಣ್ಯದಹುಂಡಿಯಲ್ಲಿ ಅಂತರರಾಜ್ಯ ಬಸ್‌ಗಳನ್ನು ಹೊರತುಪಡಿಸಿ ಎಲ್ಲಾ ರೀತಿಯ ವೇಗದೂತ ಬಸ್‌ಗಳು ನಿಲುಗಡೆಗೆ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿದ ಮೇರೆಗೆ ವಿದ್ಯಾರ್ಥಿಗಳು, ಗ್ರಾಮಸ್ಥರು ಪ್ರತಿಭಟನೆ ಕೈಬಿಟ್ಟರು.

ಈ ವೇಳೆ ಗ್ರಾಮದ ನೂರಾರು ವಿದ್ಯಾರ್ಥಿಗಳು, ಗ್ರಾಮಸ್ಥರು, ಸ್ಥಳೀಯ ಮುಖಂಡರು ಇದ್ದರು.

5 ಕಿಮೀ ಒಳಗೆ ಗೃಹಬಳಕೆ ಸಿಲಿಂಡರ್ ಸಾಗಾಣಿಕೆ ಉಚಿತ

ಚಾಮರಾಜನಗರ, ಜು.4– ಜಿಲ್ಲೆಯ ಎಲ್ಲಾ ಅನಿಲ ವಿತರಕರು 5 ಕಿಮೀ ಒಳಗೆ ಭರ್ತಿ ಗೃಹ ಬಳಕೆ ಅನಿಲ ಸಿಲಿಂಡರ್‌ಗಳನ್ನು ಗ್ರಾಹಕರಿಗೆ ಸಾಗಾಣಿಕೆ ಮಾಡಲು ಯಾವುದೇ ದರ ಪಡೆಯದೆ ಉಚಿತವಾಗಿ ಸರಬರಾಜು ಮಾಡುವಂತೆ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ತಿಳಿಸಿದೆ.

ಅನಿಲ ವಿತರಕರು 5 ಕಿಮೀ ಒಳಗೆ ಗೃಹ ಬಳಕೆ ಅನಿಲ ಸಿಲಿಂಡರ್‌ಗಳನ್ನು ಗ್ರಾಹಕರಿಗೆ ತಲುಪಿಸಲು ಯಾವುದೇ ದರ ಪಡೆಯುವಂತಿಲ್ಲ. 5 ಕಿಮೀ ನಂತರ ಪ್ರತೀ ಕಿಲೋ ಮೀಟರ್‌ಗೆ ಪ್ರತಿ ಸಿಲಿಂಡರ್‌ಗೆ 1.60 ರೂ. ಪಡೆಯಬೇಕು. ಹೆಚ್ಚು ಪಡೆದಲ್ಲಿ ದಿ ಲಿಕ್ವಿಫೈಡ್ ಪೆಟ್ರೋಲಿಯಂ ಗ್ಯಾಸ್ ರೆಗ್ಯುಲೇಷನ್ ಆಫ್ ಸಪ್ಲೈ ಅಂಡ್ ಡಿಸ್ಟ್ರಿಬ್ಯೂಷನ್ ಆದೇಶ 2000ರ ರೀತ್ಯಾ ಕಾನೂನು ಕ್ರಮ ಜರುಗಿಸಲಾಗುವುದು ಎಂದು ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಉಪನಿರ್ದೇಶಕ ಯೋಗಾನಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಚಿಲಕವಾಡಿಯಲ್ಲಿ ಕುಮಾರ ನಿಜಗುಣರ ಸ್ಮರಣೋತ್ಸವ

ಗುರುಗಳ ನೆನೆಯುವುದು ಪುಣ್ಯದ ಕೆಲಸ: ಮಾಜಿ ಶಾಸಕ ನಂಜುಂಡಸ್ವಾಮಿ



ಕೊಳ್ಳೇಗಾಲ, ಜು.4– ಜಗತ್ತಿನಲ್ಲಿ ಗುರುಗಳ ಸಾಧನೆ ಅನನ್ಯ. ಗುರುವೇ ಎಲ್ಲಾ. ಗುರುವಿಲ್ಲದೇ ಏನೂ ಇಲ್ಲ. ಅರಿವೇ ಗುರು. ಗುರುಗಳ ನೆನೆಯುವುದು ಪುಣ್ಯದ ಕೆಲಸ ಎಂದು ಮಾಜಿ ಶಾಸಕ ಜಿ.ಎನ್.ನಂಜುಂಡಸ್ವಾಮಿ ತಿಳಿಸಿದರು.

ತಾಲೂಕಿನ ಚಿಲಕವಾಡಿ ಮಠದ ಶಂಭುಲಿಂಗೇಶ್ವರ ಕ್ಷೇತ್ರದಲ್ಲಿ ಗುರು ಪೂರ್ಣಿಮೆ ಅಂಗವಾಗಿ ನಿಜಗುಣ ಫೌಂಡೇಷನ್ ವತಿಯಿಂದ ಆಯೋಜಿಸಿದ್ದ ಕುಮಾರ ನಿಜಗುಣರ 2ನೇ ವರ್ಷದ ಸ್ಮರಣೋತ್ಸವ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಈ ಕ್ಷೇತ್ರ ನಿಜಗುಣ ಶಿವಯೋಗಿಗಳ ತಪೋಭೂಮಿಯಾಗಿದ್ದು, ಗುರು ಪೂರ್ಣಿಮೆ ಮೂಲಕ ಅಗಲಿದ ಕುಮಾರ ನಿಜಗುಣಶ್ರೀಗಳ ಸ್ಮರಿಸುವ ಕೆಲಸ ಶ್ಲಾಘನೀಯ. ಕುಮಾರ ನಿಜಗುಣಶ್ರೀಗಳ ಸಾಧನೆ ಬಣ್ಣಿಸಲಾಗದು. ಅವರಲ್ಲಿದ್ದ ಅಪಾರ ಜ್ಞಾನದಿಂದಲೇ ಅವರು ಅತ್ಯುತ್ತಮ ಸಾಧನೆ ಮಾಡುವಂತಾಯಿತು. ಅವರನ್ನು ಕಣ್ಣಾರೆ ಕಂಡಿದ್ದೇವೆ. ಅವರ ಮಾರ್ಗದರ್ಶನ ಪಡೆದಿದ್ದೇವೆ ಎಂಬುದೇ ಹೆಮ್ಮೆ ಪಡುವ ವಿಚಾರ. ಅವರ ಮಾರ್ಗದರ್ಶನದಲ್ಲಿ ಎಲ್ಲರೂ ಸಾಗೋಣ. ಅವರ ಪುಣ್ಯಭೂಮಿಯಾದ ಶಂಭುಲಿಂಗಕ್ಷೇತ್ರ ಇನ್ನಷ್ಟು ಅಭಿವೃದ್ಧಿಯಾಗಲಿ ಎಂದರು.

ಹಾಸನ ಹೇಮ ಗಂಗೋತ್ರಿ ಕಾಲೇಜಿನ ಪ್ರಾಧ್ಯಾಪಕ ಪ್ರೊ.ಶಂಕರ್ ಮಾತನಾಡಿ, ನಿಜಗುಣಶ್ರೀಗಳು ಅಭಿನವ ಬಸವಣ್ಣರಂತೆ. ಅವರು ಕಟ್ಟಿಕೊಟ್ಟ ಕೈವಲ್ಯ ಪದ್ಧತಿಯ ಕವಿತೆಗಳು ಬಣ್ಣಿಸಲಾಗದು. ಅವರು ಸಾಹಿತ್ಯ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಅನನ್ಯ. 5 ದಶಕಗಳ ಕಾಲ ನಮ್ಮ ನೆಲದಲ್ಲಿದ್ದು ಈ ಭೂಮಿಯನ್ನು ಪಾವನಗೊಳಿಸಿದ್ದಾರೆ. ನಾವೆಲ್ಲರೂ ಅವರ ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳೋಣ ಎಂದರು.

ಮೈಸೂರು ಭಾರತೀಯ ಸಂಸ್ಥಾನದ ಕೇಂದ್ರದ ಯೋಜನಾ ನಿರ್ದೇಶಕ ಡಾ. ನೀಲಗಿರಿ ತಳವಾರ ಮಾತನಾಡಿ, ನಿಜಗುಣ ಶಿವಯೋಗಿಗಳು ಅತ್ಯುತ್ತಮ ಸಂತರ ಸಾಲಿನಲ್ಲಿ ನಿಲ್ಲುತ್ತಾರೆ. ಅವರು ಇಲ್ಲಿ ಉಳಿಸಿಹೋಗಿರುವ ಹೆಜ್ಜೆ ಗುರುತುಗಳನ್ನು ನಾವು ಸ್ಮರಿಸಬೇಕಿದೆ ಎಂದರು.

ಕಾರ್ಯಕ್ರಮದಲ್ಲಿ ಜಗಜ್ಯೋತಿ ಬಸವೇಶ್ವರ ರಾಷ್ಟ್ರೀಯ ಪ್ರಶಸ್ತಿ ಪುರಸ್ಕೃತ ಡಾ.ಪರಮೇಶ್ವರಪ್ಪ ಅವರನ್ನು ಸನ್ಮಾನಿಸಲಾಯಿತು.

ಈ ವೇಳೆ ನಿಜಗುಣ ಪೀಠಾಧ್ಯಕ್ಷ ಬಾಲ ಷಡಕ್ಷರಿ ಸ್ವಾಮೀಜಿ, ಮುಡುಕನಪುರದ ಷಡಕ್ಷರಿ ದೇಶಿಕೇಂದ್ರ ಸ್ವಾಮೀಜಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ತೋಟೇಶ್, ಉದ್ಯಮಿ ವೃಷಭೇಂದ್ರಪ್ಪ, ಸಾವಯವ ಕೃಷಿಕ ಕುಮಾರಸ್ವಾಮಿ, ಹೇಮ ಗಂಗೋತ್ರಿ ಪ್ರಾಧ್ಯಾಪಕರಾದ ಎಂ.ಶಂಕರ್, ಪುಟ್ಟಪ್ಪ, ರೈತ ಸಂಘದ ಶಿವಣ್ಣ, ಮಾಲಂಗಿ ರೇಚಣ್ಣ, ಕುಮಾರ್, ಶಿವಸ್ವಾಮಿ ಇನ್ನಿತರರಿದ್ದರು.

ಮೈಸೂರು ಮಿತ್ರ ಬುಧವಾರ 5 ಜುಲೈ 2023

ಸಚಿವ ಸೆಂಥಿಲ್ ಬಾಲಾಜಿ ಪ್ರಕರಣದಲ್ಲಿ ಭಿನ್ನ ತೀರ್ಪು ನೀಡಿದ ಮದ್ರಾಸ್ ಹೈಕೋರ್ಟ್ ವಿಭಾಗೀಯ ಪೀಠ



ಚೆನ್ನೈ: ತಮಿಳುನಾಡು ಸಚಿವ ವಿ.ಸೆಂಥಿಲ್ ಬಾಲಾಜಿ ಅವರ ಹೇಬಿಯಸ್ ಕಾರ್ಪಸ್ ಅರ್ಜಿಯ ಕುರಿತು ಮದ್ರಾಸ್ ಹೈಕೋರ್ಟ್ ವಿಭಾಗೀಯ ಪೀಠ ಮಂಗಳವಾರ ಭಿನ್ನ ತೀರ್ಪು ನೀಡಿದೆ. ಅಕ್ರಮ ಹಣ ವರ್ಗಾವಣೆ ತಡೆ ಕಾಯ್ದೆ (ಪಿಎಂಎಲ್ಎ) ಅಡಿಯಲ್ಲಿ ಜಾರಿ ನಿರ್ದೇಶನಾಲಯ (ಇಡಿ) ಸೆಂಥಿಲ್‌ನನ್ನು ಬಂಧಿಸಿದೆ.

ನ್ಯಾಯಮೂರ್ತಿ ಜೆ. ನ್ಯಾಯಮೂರ್ತಿ ನಿಶಾ ಬಾನು ಮತ್ತು ನ್ಯಾಯಮೂರ್ತಿ ಡಿ. ಭರತ್ ಚಕ್ರವರ್ತಿ ಅವರು ಈ ವಿಷಯದ ಕುರಿತು ವಿಭಜಿತ ತೀರ್ಪು ನೀಡಿದರು. ಅಲ್ಲದೆ ಈ ಪ್ರಕರಣವನ್ನು ಮತ್ತೊಂದು ಪೀಠಕ್ಕೆ ವರ್ಗಾಯಿಸಲು ಮುಖ್ಯ ನ್ಯಾಯಮೂರ್ತಿಗಳಿಗೆ ಶಿಫಾರಸು ಮಾಡಲು ನಿರ್ಧರಿಸಿದೆ. ಬಾಲಾಜಿ ಪತ್ನಿ ಮೇಗಾಲಾ ಸಲ್ಲಿಸಿದ್ದ ಹೇಬಿಯಸ್ ಕಾರ್ಪಸ್ ಅರ್ಜಿಯನ್ನು ನಿಶಾ ಬಾನು ಅಂಗೀಕರಿಸಿದ್ದು, ನ್ಯಾಯಮೂರ್ತಿ ಡಿ.ಭರತ್ ಚಕ್ರವರ್ತಿ ಅವರು ವಜಾಗೊಳಿಸಿದ್ದರು. ಅರ್ಜಿಯನ್ನು ಸಮರ್ಥನೀಯ ಎಂದು ವಿವರಿಸಿದ ನ್ಯಾಯಮೂರ್ತಿ ಬಾನು, ಬಾಲಾಜಿಯನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಪೊಲೀಸರಿಗೆ ಸೂಚಿಸಿದರು.

ಆದರೆ ಭಾನು ಅವರ ನಿರ್ಧಾರವನ್ನು ಒಪ್ಪದ ನ್ಯಾಯಮೂರ್ತಿ ಚಕ್ರವರ್ತಿ ಅವರು ತಮ್ಮ ಆದೇಶವನ್ನು ನೀಡಿದರು. ಬಂಧನ ಅಕ್ರಮ ಎಂದು ತೋರಿಸಲು ಅರ್ಜಿದಾರರು ಯಾವುದೇ ಪ್ರಕರಣವನ್ನು ಮಾಡಿಲ್ಲ. ಸೆಂಥಿಲ್ ಬಾಲಾಜಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗುವವರೆಗೆ ಅಥವಾ ಇಂದಿನಿಂದ 10 ದಿನಗಳ ಕಾಲ ಖಾಸಗಿ ಆಸ್ಪತ್ರೆಯಲ್ಲಿ (ಕಾವೇರಿ ಆಸ್ಪತ್ರೆ) ಚಿಕಿತ್ಸೆ ಪಡೆಯಬಹುದು. ಇದಾದ ನಂತರ ಜೈಲು, ಸರ್ಕಾರಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಬಹುದು ಎಂದು ನ್ಯಾಯಾಧೀಶರು ಹೇಳಿದರು. ಸೆಂಥಿಲ್ ಬಾಲಾಜಿಯನ್ನು ಜಾರಿ ನಿರ್ದೇಶನಾಲಯ (ಇಡಿ) ಜೂನ್ 14ರಂದು 'ನೌಕರಿಗಾಗಿ ನಗದು' ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಬಂಧಿಸಿತ್ತು. 2014–15ರಲ್ಲಿ ರಾಜ್ಯ ಸಾರಿಗೆ ಸಂಸ್ಥೆಗಳಲ್ಲಿ ಆಪಾದಿತ 'ನೌಕರಿಗಾಗಿ ನಗದು' ಹಗರಣದಲ್ಲಿ ಸಚಿವರು ತಮ್ಮ ಸ್ಥಾನವನ್ನು ದುರುಪಯೋಗಪಡಿಸಿಕೊಂಡಿದ್ದಾರೆ ಎಂದು ಇಡಿ ಆರೋಪಿಸಿದೆ. ಬಾಲಾಜಿ ಅವರು ಈ ಹಿಂದೆ ಅಖಿಲ ಭಾರತ ಅಣ್ಣಾ ದ್ರಾವಿಡ ಮುನ್ನೇತ್ರ ಕಳಗಂ (ಎಐಎಡಿಎಂಕೆ) ಪಕ್ಷದಲ್ಲಿದ್ದರು ಮತ್ತು ದಿವಂಗತ ಮುಖ್ಯಮಂತ್ರಿ ಜಯಲಲಿತಾ ಅವರ ಸರ್ಕಾರದಲ್ಲಿ ಸಾರಿಗೆ ಸಚಿವರಾಗಿದ್ದರು.

ಒಂದನೇ ಪುಟದಿಂದ

ಸದನದ ಒಳ–ಹೊರಗೆ ಬಿಜೆಪಿ ಹೋರಾಟ

ಆರಂಭಗೊಳ್ಳುತ್ತಿದ್ದಂತೆ ಉಭಯ ಸದನಗಳಲ್ಲೂ ಬಿಜೆಪಿ ಸದಸ್ಯರು ನಿಲುವಳಿ ಸೂಚನೆ ನೋಟಿಸ್ ನೀಡಿ, ಪ್ರಶ್ನೋತ್ತರ ಸೇರಿದಂತೆ ಇತರೆ ಕಾರ್ಯಕಲಾಪಗಳನ್ನು ಬದಿಗೊತ್ತಿ ಚರ್ಚೆಗೆ ಅವಕಾಶ ನೀಡಬೇಕು ಎಂದು ಪಟ್ಟು ಹಿಡಿದು ಸಭಾಧ್ಯಕ್ಷರ ಮುಂದಿನ ಬಾವಿಯಲ್ಲಿ ಕುಳಿತು ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಧರಣಿ ನಡೆಸಿದರು. ಮತ್ತೊಂದೆಡೆ ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಹಾಗೂ ಬಿಜೆಪಿ ರಾಜ್ಯಾಧ್ಯಕ್ಷ ನಳಿನ್ ಕುಮಾರ್ ಕಟೀಲ್ ನೇತೃತ್ವದಲ್ಲಿ ನಗರ ಫ್ರೀಡಂ ಪಾರ್ಕ್‌ನಲ್ಲಿ ಧರಣಿ ನಡೆಸಿ ಗ್ಯಾರಂಟಿ ಯೋಜನೆಗಳನ್ನು ಷರತ್ತಿಲ್ಲದೆ, ಅನುಷ್ಠಾನಗೊಳಿಸುವಂತೆ ಆಗ್ರಹಿಸಿದರು. ಅಷ್ಟೇ ಅಲ್ಲ, ಬಿಜೆಪಿ ಆಡಳಿತದಲ್ಲಿ ಜಾರಿಗೆ ತಂದಿದ್ದ ಮತಾಂತರ ನಿಷೇಧ ಹಾಗೂ ಗೋಹತ್ಯೆ ನಿಷೇಧ ಕಾನೂನು ವಾಪಸ್ಸು ಪಡೆಯಬಾರದು. ಮಹಿಳಾ ಸ್ವಸಹಾಯ ಸಂಘಗಳ ಸಾಲ ಮನ್ನಾ ಮಾಡಬೇಕು ಎಂದು ಒತ್ತಾಯಿಸಿ ಧರಣಿ ನಡೆಸಿದರು. ಪಕ್ಷದ ಮುಖಂಡರು ಹಾಗೂ ಸಾವಿರಾರು ಕಾರ್ಯಕರ್ತರು ಸರ್ಕಾರದ ವಿರುದ್ಧ ಘೋಷಣೆ ಕೂಗಿ, ಮತದಾರರನ್ನು ವಂಚಿಸಿರುವ ಕಾಂಗ್ರೆಸ್ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು. ಇತ್ತ ವಿಧಾನಮಂಡಲದಲ್ಲಿ ಉಭಯ ಸದನಗಳ ಸಭಾಧ್ಯಕ್ಷರು ಕಲಾಪದ ಕಾರ್ಯಸೂಚಿಯಂತೆ ಪ್ರಶ್ನೋತ್ತರ ಕೈಗೆತ್ತಿಕೊಂಡು ನಂತರ ನಿಲುವಳಿ ಸೂಚನೆ ಪೂರ್ವಭಾವಿ ಪ್ರಸ್ತಾಪಕ್ಕೆ ಅವಕಾಶ ನೀಡುವ ಭರವಸೆ ನೀಡಿದರು. ಆದರೆ, ಈ ಭರವಸೆಯಿಂದ ಸಮಾಧಾನಗೊಳ್ಳದ ಬಿಜೆಪಿ ಸದಸ್ಯರು ಉಭಯ ಸದನಗಳಲ್ಲಿ ಚರ್ಚೆಗೆ ಅವಕಾಶ ಕೋರಿ ಪಟ್ಟು ಹಿಡಿದು, ಆಗ್ರಹಿಸಿದರು.

ಈ ಹಂತದಲ್ಲಿ ಆಡಳಿತ ಮತ್ತು ಬಿಜೆಪಿ ಸದಸ್ಯರ ನಡುವೆ ಮಾತಿನ ಚಕಮಕಿ ನಡೆದು ಗದ್ದಲ, ಗೊಂದಲದ ವಾತಾವರಣ ಸೃಷ್ಟಿಯಾಯಿತು. ಪಟ್ಟು ಬಿಡದ ಬಿಜೆಪಿ ಸದಸ್ಯರು ಎಲ್ಲಾ ಕಾರ್ಯಕಲಾಪಗಳನ್ನು ಬದಿಗಿರಿಸಿ ಗ್ಯಾರಂಟಿ ಯೋಜನೆ ವಿಚಾರದ ಚರ್ಚೆ ಕೈಗೆತ್ತಿಕೊಳ್ಳುವಂತೆ ಆಗ್ರಹಿಸಿ ಧರಣಿ ನಡೆಸಿ ಸರ್ಕಾರದ ವಿರುದ್ಧ ಘೋಷಣೆ ಕೂಗಿದರು. ವಿಧಾನಸಭಾಧ್ಯಕ್ಷ ಯು.ಟಿ.ಖಾದರ್, ಧರಣಿ ನಿರತ ಸದಸ್ಯರ ಮನವೊಲಿಸುವ ಪ್ರಯತ್ನವೂ ವಿಫಲವಾದಾಗ ಕೆಲಕಾಲ ಸದನವನ್ನು ಮುಂದೂಡಿದರು. ಮತ್ತೆ ಸದನ ಸಮಾವೇಶಗೊಂಡಾಗ ಬಿಜೆಪಿ ಸದಸ್ಯರ ಧರಣಿ, ಗದ್ದಲದ ನಡುವೆ ಪ್ರಶ್ನೋತ್ತರ ಹಾಗೂ ಶೂನ್ಯವೇಳೆ ಕಲಾಪಕ್ಕೆ ಅನುವು ಮಾಡಿಕೊಟ್ಟರು. ವಿಧಾನಪರಿಷತ್ತಿನಲ್ಲೂ ಇದೇ ಪರಿಸ್ಥಿತಿ ಮುಂದುವರೆದು ಸಭಾಪತಿ ಬಸವರಾಜ ಹೊರಟ್ಟಿ ಅವರು ಕಲಾಪವನ್ನು ಕೆಲಕಾಲ ಮುಂದೂಡಿದರು.

ಮಂತ್ರಿಯ ವಜಾ ಮಾಡ್ತೀರಾ...

ಕೊಟ್ಟರೆ ಈ ಸರ್ಕಾರ ಎಲ್ಲಿರುತ್ತೊ ಗೊತ್ತಿಲ್ಲ. ಸುಮ್ಮನೆ ಸ್ವಲ್ಪ ದಿನ ಈ ಸರಕಾರ ನೆಮ್ಮದಿಯಾಗಿರಲಿ ಎಂದು ಬಿಟ್ಟಿದ್ದೀನಿ. ಸರಕಾರ ತಿದ್ದಿಕೊಂಡರೆ ಒಳ್ಳೆಯದು ಎಂದು ಬಿಟ್ಟಿದ್ದೀನಿ ಅಷ್ಟೇ ಎಂದರು. ಕಳೆದ ಎರಡು ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷದಿಂದ ಕೊನೆಪಕ್ಷ ಒಂದು ದಾಖಲೆಯನ್ನೂ ಬಿಡುಗಡೆ ಮಾಡಲಾಗಲಿಲ್ಲ. ಮಂತ್ರಿಯೊಬ್ಬರು ನಾನು ದಾಖಲೆ ಸಮೇತ ಆರೋಪ ಮಾಡಿದ್ದೆ ಎಂದು ಹೇಳಿಕೆ ನೀಡಿದ್ದಾರೆ. ಅದು ಯಾವ ದಾಖಲೆ ಕೊಟ್ಟಿದ್ದಾರೆ, ಯಾವ ತನಿಖೆ ನಡೆದಿದೆ ಎನ್ನುವುದರ ಬಗ್ಗೆ ಮಾಹಿತಿ ಕೊಡಲಿ. ಚುನಾವಣೆ ಸಮಯದಲ್ಲಿ ಇವರು ಭ್ರಷ್ಟಾಚಾರದ ಬಗ್ಗೆ ಪುಟಗಟ್ಟಲೆ ಜಾಹೀರಾತು ಕೊಟ್ಟರು. ಆದರೆ, ಒಂದು ದಾಖಲೆಯನ್ನಾದರೂ ಬಿಡುಗಡೆ ಮಾಡಿದ್ದಾರಾ. ಸುಳ್ಳು ದಾಖಲೆ ಹೇಳಿ ಅಧಿಕಾರಕ್ಕೆ ಬಂದಿದ್ದೀರಾ ಎಂದು ಅವರು ಪ್ರಶ್ನಿಸಿದರು.

ನನ್ನ ಅವಧಿಯಲ್ಲಿ ನಡೆದ ವರ್ಗಾವಣೆಗಳ ಬಗ್ಗೆಯೂ ತನಿಖೆ ನಡೆಸುವುದಾಗಿ ಹೇಳಿದ್ದಾರೆ. ನನ್ನ ಕಾಲದಲ್ಲಿ ನಡೆದ ವರ್ಗಾವಣೆಯನ್ನು ತನಿಖೆ ಮಾಡಲಿ. ಐದು ವರ್ಷ ಕಾಂಗ್ರೆಸ್ ಪಕ್ಷದ ಪೂರ್ಣ ಸರಕಾರ ಇತ್ತಲ್ಲ. ಆ ಸರಕಾರದ ಅವಧಿಯಲ್ಲಿ ನಡೆದ ವರ್ಗಾವಣೆಗಳ ಕುರಿತು ತನಿಖೆ ನಡೆಸಲಿ ಎಂದು ಅವರು ಪ್ರಶ್ನೆಯೊಂದಕ್ಕೆ ಉತ್ತರ ನೀಡಿದರು. ಕಾಂಗ್ರೆಸ್‌ನವರು ಹಗಲುದರೋಡೆಗೆ ಇಳಿದಿದ್ದಾರೆ. ವರ್ಗಾವಣೆ ದಂಧೆಗೆ ಹಣ ನಿಗದಿ ಮಾಡಿದ್ದಾರೆ ಅಂತ ಗೊತ್ತು. ಪ್ರತಿ ಹುದ್ದೆಗೂ ಒಂದೊಂದು ರೇಟ್ ಫಿಕ್ಸ್ ಮಾಡಿದ್ದಾರೆ. ಸಮಯ ಬಂದಾಗ ದಾಖಲೆ ಕೊಟ್ಟೆ ಕೊಡುತ್ತೇನೆ. ನಾನು ಎಲ್ಲಿಯೂ ಓಡಿ ಹೋಗುವುದಿಲ್ಲ ಎಂದರು. ನಾನು ಕೊಡುವ ದಾಖಲೆ ನೋಡಿದ ಮೇಲೆ ಯಾವ ರೀತಿ ಕ್ರಮ ಕೈಗೊಳ್ಳುತ್ತೀರಿ ಅಂತ ಮೊದಲು ಅವರು ಹೇಳಲಿ. ಈ ಬಗ್ಗೆ ಪ್ರಶ್ನೆ ಎತ್ತಿದವರು ಉತ್ತರ ಕೊಡಲಿ ಎಂದ ಅವರು; ಕೆಲವರು ಸತೀಶ್ ಜಾರಕಿಹೊಳಿ ಮುಂದಿನ ಮುಖ್ಯಮಂತ್ರಿ ಅಂತ ಹೇಳ್ತಾರೆ. ಈಗಾಗಲೇ ಡಿ.ಕೆ.ಶಿವಕುಮಾರ್ ಅವರು ಟವೆಲ್ ಹಾಕಿದ್ದಾರೆ ಎಂದು ಅವರು ಟಾಂಗ್ ನೀಡಿದರು.

ವಿವಿ ನೌಕರರು, ಪಿಂಚಣಿದಾರರು ನಿರಾಳ

ಮುಂದಿನ ಆದೇಶದವರೆಗೂ ಯಾವುದೇ ಪ್ರಮುಖ ನೀತಿ(policy) ನಿರ್ಧಾರ ತೆಗೆದುಕೊಳ್ಳದಂತೆ ರಾಜ್ಯಪಾಲರ ನಿರ್ದೇಶನದ ಮೇರೆಗೆ ಅವರ ವಿಶೇಷ ಕಾರ್ಯದರ್ಶಿ ಸೂಚನೆ ನೀಡಿದ್ದಾರೆ. ಈ ಸಂಬಂಧ ಮೈಸೂರು ವಿವಿ ಹಣಕಾಸು ಅಧಿಕಾರಿ ಡಾ.ಸಂಗೀತಾ ಗಜಾನನ ಭಟ್ ಪ್ರತಿಕ್ರಿಯಿಸಿ, ರಾಜ್ಯಪಾಲರ ಕಚೇರಿಯಿಂದ ಮಂಗಳವಾರ ಸಂಜೆ ಸೂಚನೆ ಬಂದಿದ್ದು, ಬುಧವಾರ ಪಿಂಚಣಿ ಮೊತ್ತವನ್ನು ಬಿಡುಗಡೆ ಮಾಡಲಾಗುವುದು ಎಂದು ತಿಳಿಸಿದ್ದಾರೆ. ಮೈಸೂರು ವಿವಿ ಇತಿಹಾಸದಲ್ಲೇ ಮೊದಲ ಬಾರಿಗೆ ಪಿಂಚಣಿ ವಿಳಂಬವಾಗಿತ್ತು. ಜೂ.30ರಂದು ಮಧ್ಯಾಹ್ನ ಬ್ಯಾಂಕ್‌ಗೆ ಬಂದ ಪಿಂಚಣಿದಾರರು ಹಾಗೂ ಅವರ ಕುಟುಂಬದವರು ಬರಿಗೈಯಲ್ಲಿ ವಾಪಸ್ಸಾಗಿದ್ದರು. ಕುಲಪತಿಗಳಿಲ್ಲದ ಕಾರಣ ನಿವೃತ್ತರ ಪಿಂಚಣಿ ಸಂದಾಯ ಮಾಡಲು ಸಾಧ್ಯವಾಗಿಲ್ಲ. ಸುಮಾರು 1840 ಜನರ ಒಟ್ಟು 6.25 ಕೋಟಿ ರೂ. ಪಿಂಚಣಿ ಸಂದಾಯ ಮಾಡಲು ಕುಲಪತಿಗಳ ಅನುಮೋದನೆ ಬೇಕು. ಈ ಬಗ್ಗೆ ಸರ್ಕಾರಕ್ಕೆ ಪತ್ರ ಬರೆದಿದ್ದು, ಸೂಚನೆ ಬಂದರಷ್ಟೇ ಮುಂದುವರೆಯಬಹುದು ಎಂದು ವಿವಿ ಅಧಿಕಾರಿಗಳು ತಿಳಿಸಿದ್ದರು. ಇದರಿಂದ ಪಿಂಚಣಿದಾರರು ಆತಂಕಗೊಂಡು ಸೋಮವಾರ ವಿವಿಯ ಕ್ರಾಫರ್ಡ್ ಭವನದ ಮುಂದೆ ಜಮಾಯಿಸಿ, ಕುಲಸಚಿವರಿಗೆ ಮನವಿ ಸಲ್ಲಿಸಿದ್ದರು. ಸದ್ಯ ರಾಜ್ಯಪಾಲರ ಕಚೇರಿಯಿಂದ ಸೂಚನೆ ಬಂದಿರುವುದರಿಂದ ಪಿಂಚಣಿ ಹಾಗೂ ವೇತನದಾರರು ನಿರಾಳರಾಗಿದ್ದಾರೆ.

ಹಂಗಾಮಿ ನೇಮಕವಿಲ್ಲವೇ?: ಮೈಸೂರು ವಿವಿ ಕುಲಪತಿಯಾಗಿ ಪ್ರೊ.ಎನ್.ಕೆ. ಲೋಕನಾಥ್ ಅವರನ್ನು ನೇಮಕಮಾಡಿ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ಜೂ.21ರಂದು ಮಧ್ಯಂತರ ತಡೆ ನೀಡಿದೆ. ತಡೆಯಾಜ್ಞೆ ತೆರವುಗೊಳಿಸುವಂತೆ ಕೋರಿ ಸಲ್ಲಿಸಿದ ಅರ್ಜಿ ವಿಚಾರಣೆಯನ್ನು ನ್ಯಾಯಾಲಯ ಜು.13ಕ್ಕೆ ಮುಂದೂಡಿದೆ. ನ್ಯಾಯಾಲಯ ತಡೆ ನೀಡಿ 22 ದಿನಗಳೇ ಕಳೆದಿದ್ದು, ಈವರೆಗೆ ಹಂಗಾಮಿ ಕುಲಪತಿ ನೇಮಕವಾಗಿಲ್ಲ. ಸದ್ಯ ಹಣಕಾಸು ನಿರ್ವಹಣೆಗೆ ಅವಕಾಶ ಸಿಕ್ಕಿದೆಯಾದರೂ ಯಾವುದೇ ಆಡಳಿತಾತ್ಮಕ ನಿರ್ಧಾರಗಳನ್ನು ಕೈಗೊಳ್ಳಲು ಸಾಧ್ಯವಿಲ್ಲ. ಇದರಿಂದ ಶೈಕ್ಷಣಿಕ ಚಟುವಟಿಕೆ ಮೇಲೂ ಪರಿಣಾಮವಾಗಬಹುದು ಎನ್ನಲಾಗಿದೆ.


ಎನ್‌ಸಿಪಿ ಯಾವ ಬಣದ್ದು ನಿರ್ಧಾರ

ಎಂಇಟಿ ಬಾಂದ್ರಾದಲ್ಲಿ ಸಭೆಗೆ ಹಾಜರಾಗುವಂತೆ ಅಜಿತ್ ಪವಾರ್ ಅವರು ತಮ್ಮ ಬೆಂಬಲಿಗರಿಗೆ ಕೇಳಿ ಕೊಂಡಿದ್ದಾರೆ. ಅದೇ ಸಮಯದಲ್ಲಿ, ಶರದ್ ಪವಾರ್ ಅವರು ಸಹ ವೈಬಿ ಚವಾಣ್ ಆಡಿಟೋರಿಯಂನಲ್ಲಿ ಎಲ್ಲಾ ಎನ್‌ಸಿಪಿ ನಾಯಕರ ಸಭೆ ಕರೆದಿದ್ದಾರೆ. ಎನ್‌ಸಿಪಿ ನಾಯಕರು ಯಾರ ಸಭೆಯಲ್ಲಿ ಭಾಗ ವಹಿಸಿದ್ದಾರೆ ಎಂಬುದು ತೀವ್ರ ಕುತೂಹಲಕ್ಕೆ ಕಾರಣವಾಗಿದೆ. ಪಕ್ಷದ ವಿರುದ್ಧ ಬಂಡಾಯ ವೆದ್ದಿರುವ ಅಜಿತ್ ಪವಾರ್ ಅವರು ಭಾನುವಾರ ತಮ್ಮ ಬೆಂಬಲಿಗರೊಂದಿಗೆ ಮಹಾರಾಷ್ಟ್ರ ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಲಲಿತಾದ್ರಿಪುರ ಉತ್ತರ ಬಡಾವಣೆಯಲ್ಲಿ ನಿವೇಶನ ವಿತರಿಸಿ ಕೈತೊಳೆದುಕೊಂಡ ಮುಡಾ

● ಲಲಿತಾದ್ರಿ ಬಡಾವಣೆ ನಿವಾಸಿಗಳಿಗೆ ನೀರಿಲ್ಲ, ಬೆಳಕಿಲ್ಲ; ಸದಾ ಭಯ-ಭೀತಿಯಲ್ಲಿ ಬದುಕು ಬವಣೆ ● ಮನವಿ ಮೇಲೆ ಮನವಿ ಸಲ್ಲಿಸಿದರೂ ಕನಿಷ್ಠ ಸ್ಪಂದಿಸದ ಮುಡಾ ಅಧಿಕಾರಿಗಳು; ಇನ್ನು ಕೇಳಿದರೆ ಉಡಾಫೆ ಉತ್ತರ





● ಚೇತನ್ ನರಸಿಂಹ ವಿ.

ಮೈಸೂರು, ಜು.4–ಚಾಮುಂಡೇಶ್ವರಿಯ ನೆಲೆ ಚಾಮುಂಡಿಬೆಟ್ಟದ ಮಡಿಲಲ್ಲಿರುವ ನಾಗರಿಕರಿಗೆ ಮೂಲ ಸೌಕರ್ಯ ಮರೀಚಿಕೆಯಾಗಿದೆ. ಅದೂ ಮುಡಾ ಅಭಿವೃದ್ಧಿಪಡಿಸಿದ ಬಡಾವಣೆಯ ನಿವಾಸಿಗಳ ಪಾಡೇ ಈ ರೀತಿ ಆಗಿದೆ. ಇನ್ನು ಖಾಸಗಿ ಬಡಾವಣೆಗಳ ಪರಿಸ್ಥಿತಿ ಏನಾಗಿರಬೇಕು. ಅಂತಹ ದಯನೀಯ ಪರಿಸ್ಥಿತಿಯನ್ನು ಲಲಿತಾದ್ರಿ ಉತ್ತರ ಬಡಾವಣೆ ನಿವಾಸಿಗಳು ಎದುರಿಸುತ್ತಿದ್ದಾರೆ.

ನಿವೇಶನಗಳ ಹಂಚಿಕೆಯಾಗಿ 6 ವರ್ಷಗಳೇ ಕಳೆದಿವೆ. ಕತ್ತಲಾದರೆ ಕಳ್ಳ–ಕಾಕರ ಕಾಟ ಹೆಚ್ಚಾಗಿದ್ದು, ಭಯದಲ್ಲೇ ಜೀವಿಸುವ ಪರಿಸ್ಥಿತಿ ಎದುರಾಗಿದೆ. ಖಾಲಿ ನಿವೇಶನಗಳಲ್ಲಿ ಭಾರೀ ಗಿಡ–ಗಂಟಿಗಳು ಆಳೆತ್ತರಕ್ಕೆ ಬೆಳೆದು ನಿಂತಿದ್ದು, ಉರಗಗಳ ಆವಾಸ ಸ್ಥಾನವಾಗಿದೆ. ಈ ಎಲ್ಲ ಅವಸ್ಥೆಗಳಿಂದಾಗಿ ಮನೆ ನಿರ್ಮಾಣಕ್ಕೆ ಹಲವರು ಹಿಂದೇಟು ಹಾಕುತ್ತಿದ್ದಾರೆ.

ಮುಡಾ ಅಧಿಕಾರಿಗಳು ಮೂಲ ಸೌಲಭ್ಯ ಕಲ್ಪಿಸಿದರೆ, ನಿವೇಶನದಾರರಿಗೆ ಮನೆ ನಿರ್ಮಾಣಕ್ಕೆ ಅನುಕೂಲವಾಗಲಿದೆ ಎಂದು ಇಲ್ಲಿನ ನಿವಾಸಿಗಳು 'ಮೈಸೂರು ಮಿತ್ರ'ನಲ್ಲಿ ತಮ್ಮ ಅಳಲು ತೋಡಿಕೊಂಡಿದ್ದಾರೆ.

ನಗರದ ಹೊರವಲಯದ, ಚಾಮುಂಡಿ ಬೆಟ್ಟದ ಮಡಿಲಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ನಿರ್ಮಿಸಿರುವ ಈ ಲಲಿತಾದ್ರಿ ನಗರ (ಉತ್ತರ) ಬಡಾವಣೆ ನಿವೇಶನದಾರರ ಸಮಸ್ಯೆ ಹೇಳತೀರದಂತಾಗಿದೆ. 2017–18ನೇ ಸಾಲಿನಲ್ಲಿ, ಲಾಟರಿ ಎತ್ತುವ ಮುಖಾಂತರ ಸುಮಾರು 500 ನಿವೇಶನಗಳನ್ನು ವಿತರಿಸಿ, ಸಂಖ್ಯೆಗಳನ್ನು ನಮೂದಿಸಲಾಗಿತ್ತು. ಆದಾದ ಬಳಿಕ ಹಲವು ವರ್ಷಗಳ ಕಾಲ ಬಡಾವಣೆ ಪ್ರದೇಶ ಖಾಲಿ ಬಿದ್ದಿತ್ತು. ಮುಡಾದವರು ಸ್ಪಂದಿಸದ ಕಾರಣ, ಬೇಸತ್ತ ಫಲಾನುಭವಿಗಳು ಮನೆ ನಿರ್ಮಾಣಕ್ಕೆ ಮನಸ್ಸು ಮಾಡಿರಲಿಲ್ಲ. ಈ ಎಲ್ಲಾ ಸಮಸ್ಯೆ ನಡುವೆಯೂ ಎರಡು ಮನೆಗಳು ನಿರ್ಮಾಣಗೊಂಡಿವೆ. ಆದರೆ ಮುಡಾ ನಿರ್ಲಕ್ಷ್ಯದಿಂದ ಇವರಿಗೂ ಯಾವುದೇ ಮೂಲ ಸೌಲಭ್ಯ ಸಿಕ್ಕಿಲ್ಲ.

ಇಲ್ಲಿನ ನಿವಾಸಿಯೊಬ್ಬರು ಸುಮಾರು 3 ವರ್ಷದಿಂದ ಮುಡಾ ಆಯುಕ್ತರಿಗೆ ಸಮಸ್ಯೆ ಕುರಿತು ಸಾಲು–ಸಾಲು ಪತ್ರ ಬರೆದಿದ್ದಾರೆ. ಆದರೆ ಅಧಿಕಾರಿಗಳು ಸ್ವೀಕೃತಿ ಚೀಟಿ ನೀಡಿ ಕಳುಹಿಸುತ್ತಿದ್ದಾರೆಯೇ ವಿನಃ ಶಾಶ್ವತ ಪರಿಹಾರಕ್ಕಾಗಿ ಕ್ರಮ ವಹಿಸಿಲ್ಲ. ಈ ಬಗ್ಗೆ ಪ್ರಶ್ನೆ ಮಾಡಿ ಪತ್ರ ಬರೆದ ನಿವಾಸಿಯೊಬ್ಬರಿಗೆ ಮುಡಾ ಅಧಿಕಾರಿಗಳು 12–03–2021ರಲ್ಲಿ ತಮ್ಮ ಕಚೇರಿಯಿಂದ ಹಿಂಬರಹ ನೀಡಿದ್ದಾರೆ. ಅದರಲ್ಲಿ 'ಮೂಲ ಸೌಕರ್ಯಗಳಿಗಾಗಿ ಟೆಂಡರ್ ಕರೆದಿದ್ದು, ಗುತ್ತಿಗೆದಾರರು ನಿಗದಿಯಾದ ಬಳಿಕ ನಿಮ್ಮ ಮನವಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ನಮೂದಿಸಲಾಗಿದೆ. ಆದರೆ ಈ ಪತ್ರ ತಲುಪಿ ಎರಡು ವರ್ಷ ಕಳೆದರೂ ಗುತ್ತಿಗೆದಾರರ ನೇಮಕ ಪ್ರಕ್ರಿಯೆ ಪೂರ್ಣವಾಗಿಲ್ಲವೇ? ಎಂಬ ಪ್ರಶ್ನೆ ಉದ್ಭವಿಸಲಾರಂಭಿಸಿದೆ. ಮುಡಾ ತನ್ನದೇ ಬಡಾವಣೆಯ ಸಮಸ್ಯೆಗೆ ಶಾಶ್ವತ ಪರಿಹಾರ ವ್ಯವಸ್ಥೆ ಕಲ್ಪಿಸಬೇಕಿದೆ.

ಬೃಹತ್ ಟ್ಯಾಂಕ್ ಇದೆ, ನೀರಿಲ್ಲ ಲೇಔಟ್ ನಿರ್ಮಾಣ ಸಂದರ್ಭದಲ್ಲೇ ಎರಡು ಬೃಹತ್ ನೀರು ಶೇಖರಣಾ ಟ್ಯಾಂಕ್‌ಗಳನ್ನು ನಿರ್ಮಿಸಲಾಗಿದೆ. ಆದರೆ ಪ್ರಾರಂಭದಿಂದಲೂ ಒಂದು ತೊಟ್ಟು ನೀರು ಸಹ ತುಂಬಿಸಿಲ್ಲ. ನೀರಿನ ಸಂಪರ್ಕವೇ ಇಲ್ಲದೇ, ಟ್ಯಾಂಕ್‌ಗಳ ಸುತ್ತಲೂ ಗಿಡಗಳು ಬೆಳೆದು, ಅವ್ಯವಸ್ಥೆ ನಿರ್ಮಾಣವಾಗಿದೆ.

ವಾಯುವಿಹಾರಿಗಳಿಗೆ ಕಿರಿಕಿರಿ: ಬೆಳಗ್ಗೆ ಹಾಗೂ ಸಂಜೆ ವೇಳೆ ಬಡಾವಣೆಯ ಸುತ್ತಮುತ್ತ ನೂರಾರು ಮಂದಿ ವಾಯುವಿಹಾರ ನಡೆಸುತ್ತಾರೆ. ಇಲ್ಲಿನ ಕಸದ ರಾಶಿಯಿಂದ ಬೀರುವ ದುರ್ವಾಸನೆ ಅವರಿಗೆ ಕಿರಿಕಿರಿ ಉಂಟು ಮಾಡುತ್ತಿದೆ. ಕಸ ಹಾಕಲು ನಿಗದಿತ ಸ್ಥಳಗಳಿವೆ. ಆದರೆ ಇಲ್ಲೇ ತಂದು ಕಸ ಸುರಿಯಲಾಗುತ್ತಿದೆ ಎಂದು ವಾಯುವಿಹಾರಿಯೊಬ್ಬರು ಕಿಡಿಕಾರಿದರು.



"ಈ ಬಡಾವಣೆ ನಿರ್ಮಾಣವಾಗಿ ಸುಮಾರು 6 ವರ್ಷ ಕಳೆದಿದೆ. ಆ ಸಮಯದಲ್ಲೇ ಇಲ್ಲಿ ಎರಡು ನೀರಿನ ಟ್ಯಾಂಕ್‌ಗಳನ್ನು ನಿರ್ಮಾಣ ಮಾಡಿದ್ದಾರೆ. ಅದನ್ನು ನಿರ್ಮಿಸಿದ್ದು ಯಾವ ಕಾರಣಕ್ಕೆ ಎಂಬುದೇ ಅವರಿಗೆ ಗೊತ್ತಿಲ್ಲ. ನಿರ್ಮಿಸಿದಾಗಿನಿಂದ ಇದುವರೆಗೂ ಒಂದು ತೊಟ್ಟು ನೀರು ತುಂಬಿಸಿಲ್ಲ. ಮೂಲ ಸೌಕರ್ಯವನ್ನೇ ಕೊಡದೇ ನಿವೇಶನದಾರರು ಹೇಗೆ ಮನೆ ನಿರ್ಮಾಣಕ್ಕೆ ಮುಂದಾಗುತ್ತಾರೆ ಹೇಳಿ? ಸರ್ಕಾರಿ ನಿವೇಶನಗಳಿಗೆ ಈ ಗತಿಯಾದರೆ ಕಷ್ಟವಾಗುತ್ತೆ. ಹಾಗಾಗಿ ಈ ಕೂಡಲೇ ಮೂಲ ಸೌಕರ್ಯ ಕಲ್ಪಿಸಲು ಮುಡಾ ಅಧಿಕಾರಿಗಳು ಮುಂದಾಗಬೇಕು.

-ಪ್ರಕಾಶ್, ಸ್ಥಳೀಯರು.

"ತುಂಬಾ ಸುಂದರವಾದ ಬಡಾವಣೆಯಲ್ಲಿ ತ್ಯಾಜ್ಯ ತಂದು ಸುರಿದು ಅನೈರ್ಮಲ್ಯ ಉಂಟುಮಾಡುತ್ತಿದ್ದಾರೆ. ನಾನು ನನ್ನ ಸ್ನೇಹಿತರೊಂದಿಗೆ ಪ್ರತಿ ಸಂಜೆ ವಾಯುವಿಹಾರಕ್ಕೆ ಬರುತ್ತೇನೆ, ಇಲ್ಲಿನ ಕಸ ನೋಡಿ ತುಂಬಾ ಬೇಸರವಾಗುತ್ತದೆ. ಇಲ್ಲಿ ಕಸ ಸುರಿಯದಂತೆ ಅಧಿಕಾರಿಗಳು ತಾಕೀತು ಮಾಡಬೇಕು. ಸುಂದರ ವಾತಾವರಣ ಮಲಿನವಾಗುವುದನ್ನು ತಡೆಯಬೇಕು. ಜೊತೆಗೆ ಬಡಾವಣೆ ಸೌಲಭ್ಯಗಳ ಬಗ್ಗೆ ಗಮನಹರಿಸಿ, ಮೂಲಸೌಲಭ್ಯ ಕಲ್ಪಿಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು.

- ನರಸಿಂಹಯ್ಯ, ವಾಯುವಿಹಾರಿ

ಇಲ್ಲೇ ನಡೆದಿತ್ತು ಘೋರ ಅತ್ಯಾಚಾರ ಪ್ರಕರಣ


ಕಳೆದ ಮೂರು ವರ್ಷಗಳ ಹಿಂದೆ ಇಡೀ ದೇಶದಲ್ಲೇ ಭಾರೀ ಸದ್ದು ಮಾಡಿದ್ದ ಕಾಲೇಜು ವಿದ್ಯಾರ್ಥಿನಿಯ ಸಾಮೂಹಿಕ ಅತ್ಯಾಚಾರ ಪ್ರಕರಣ ಇದೇ ಲಲಿತಾದ್ರಿಪುರ ಉತ್ತರ ಬಡಾವಣೆಯಲ್ಲಿ ನಡೆದಿತ್ತು. ಆ ಘಟನೆಯಾದ ಬಳಿಕ ಇಲ್ಲಿನ ನಿವೇಶನದಾರರು ಮನೆ ಕಟ್ಟಲು ಮತ್ತಷ್ಟು ಹೆದರುತ್ತಿದ್ದಾರೆ. ಅಲ್ಲದೇ ವಿದ್ಯುತ್ ಸಂಪರ್ಕವೂ ಇಲ್ಲದ ಕಾರಣಕ್ಕೆ ಮನೆ ನಿರ್ಮಾಣಕ್ಕೆ ಮುಂದಾಗುತ್ತಿಲ್ಲ. ಆ ಘೋರ ಘಟನೆ ನಡೆದರೂ ಅಧಿಕಾರಿಗಳು ಎಚ್ಚೆತ್ತು, ಮೂಲ ಸೌಲಭ್ಯ ವ್ಯವಸ್ಥೆ ಮಾಡಿಲ್ಲ. ಕನಿಷ್ಠ ವಿದ್ಯುತ್ ಸಂಪರ್ಕ ನೀಡಿದರೆ ಸಾಕು, ಮನೆಗಳನ್ನು ನಿರ್ಮಾಣ ಮಾಡಿಕೊಳ್ಳುತ್ತೇವೆ ಎಂದು ನಿವೇಶನದಾರರು ಬೇಡುವ ಮಟ್ಟಕ್ಕೆ ಮುಡಾ ಅವರನ್ನು ಪೀಡಿಸುತ್ತಿದೆ.

ನೆಮ್ಮದಿಯ ನೆಲೆಗೆ ಅವಕಾಶ ಮಾಡಿಕೊಡಿ



"2018ರಲ್ಲಿ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಅಧ್ಯಕ್ಷತೆಯಲ್ಲಿ ಮುಡಾದಿಂದ ಲಾಟರಿ ಮೂಲಕ 339 ಸಂಖ್ಯೆಯ ನಿವೇಶನ ನಮಗೆ ನೀಡಲಾಗಿತ್ತು. ನಿವೇಶನ ನೀಡಿ 6 ವರ್ಷಗಳೇ ಕಳೆದಿವೆ. ಮುಡಾದಿಂದ ನಮಗೆ ಯಾವುದೇ ಮೂಲ ಸೌಲಭ್ಯ ಕಲ್ಪಿಸಲಾಗಿಲ್ಲ. 2021ರಿಂದ ಸತತವಾಗಿ ಈ ಬಗ್ಗೆ ಪತ್ರ ಬರೆಯುತ್ತಿದ್ದೇನೆ. ನನ್ನ ಮನವಿಗೆ ಯಾವುದೇ ಸ್ಪಂದನೆ ಸಿಕ್ಕಿಲ್ಲ. ನಾನು ದೂರು ನೀಡಿದಾಗಲೆಲ್ಲಾ ಸ್ವೀಕೃತಿ ಚೀಟಿ ನೀಡಿ ಸಬೂಬು ಹೇಳಿ ಕಳುಹಿಸುತ್ತಾರೆ. ಆಮೇಲೆ ಇಲ್ಲಿನ ಸಮಸ್ಯೆ ಬಗ್ಗೆ ತಲೆಕೆಡಿಸಿಕೊಳ್ಳಲ್ಲ. ಸುಮಾರು 500 ನಿವೇಶನಗಳಿವೆ. ಈ ಪೈಕಿ ನಾನು ಮತ್ತು ಇನ್ನೊಬ್ಬರು ಮನೆ ನಿರ್ಮಾಣ ಮಾಡಿಕೊಂಡಿದ್ದೇವೆ. ಕಗ್ಗತ್ತಲು ಆವರಿಸಿದೆ. ಸಾಕಷ್ಟು ಬಾರಿ ಕಳ್ಳತನವಾಗಿದೆ. ಎರಡೇ ಮನೆ ಇರುವುದರಿಂದ ತೀವ್ರ ಭಯದಲ್ಲಿ ಬದುಕುತ್ತಿದ್ದೇವೆ. ರಾಶಿ ರಾಶಿ ಗಿಡ–ಗಂಟಿಗಳು ಬೆಳೆದು ನಿಂತಿವೆ. ಭಾರೀ ಪೊದೆಗಳು ನಿರ್ಮಾಣವಾಗಿವೆ. ಅಲ್ಲಿಂದ ಹಾವುಗಳು ಮನೆಗಳಿಗೆ ನುಗ್ಗುತ್ತವೆ. ನಾನು ಎಷ್ಟೋ ಬಾರಿ ಉರಗ ರಕ್ಷಕರಿಂದ ಹಾವುಗಳನ್ನು ಹಿಡಿಸಿದ್ದೇನೆ. ಕನಿಷ್ಠ ಪಕ್ಷ ವಿದ್ಯುತ್ ಕಂಬಗಳನ್ನು ಹಾಕಿದರೆ ಇನ್ನಷ್ಟು ಮಂದಿ ಮನೆಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಾರೆ. ಹೀಗೆ ಬಿಟ್ಟರೇ ಸಾಕಷ್ಟು ತೊಂದರೆಯಾಗುತ್ತದೆ, ಹಾಗಾಗಿ ನಮ್ಮ ಮನವಿಗೆ ಅಧಿಕಾರಿಗಳು ಸ್ಪಂದಿಸಬೇಕಿದೆ.

-ವಿ.ರಂಗಸ್ವಾಮಿ, ಲಲಿತಾದ್ರಿ ನಗರ(ಉತ್ತರ) ಬಡಾವಣೆ ನಿವಾಸಿ.



ಮಾದಕ ವಸ್ತು ವಿರುದ್ಧ ವ್ಯಾಪಕ ಅರಿವು ಮೂಡಿಸಿ

ಮೈಸೂರು ಡಿಸಿ ಡಾ. ಕೆ.ವಿ. ರಾಜೇಂದ್ರ ಸೂಚನೆ



ಮೈಸೂರು, ಜು. 4(ಆರ್‌ಕೆ)– ಶಾಲಾ–ಕಾಲೇಜು, ವಿಶ್ವವಿದ್ಯಾನಿಲಯಗಳ ಬಳಿ ಮಾದಕ ವಸ್ತುಗಳ ಬಳಕೆ, ಸಾಗಣೆ, ಮಾರಾಟ, ಸೇವನೆ ತಡೆಯುವ ಬಗ್ಗೆ ಜಾಗೃತಿ ಮೂಡಿಸುವಂತೆ ಪೊಲೀಸ್ ಅಧಿಕಾರಿಗಳಿಗೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಸೂಚನೆ ನೀಡಿದ್ದಾರೆ.

ಮೈಸೂರಿನ ಸಿದ್ಧಾರ್ಥನಗರದಲ್ಲಿರುವ ಹೊಸ ಜಿಲ್ಲಾ ಮಟ್ಟದ ಕಚೇರಿಗಳ ಸಂಕೀರ್ಣ ಸಭಾಂಗಣದಲ್ಲಿ ಸೋಮವಾರ ಸಭೆ ನಡೆಸಿದ ಅವರು, ಜಿಲ್ಲೆಯಾದ್ಯಂತ ಮಾದಕ ವಸ್ತು ಬಳಕೆಯಿಂದಾಗುವ ದುಷ್ಪರಿಣಾಮಗಳು, ಯುವಕರ ಮಾನಸಿಕ ವರ್ತನೆಯಿಂದಾಗಿ ಸಮಾಜಕ್ಕಾಗುವ ಅಪಾಯಗಳ ಬಗ್ಗೆ ಜಾಥಾ, ಶಿಬಿರ, ಬೀದಿ ನಾಟಕಗಳ ಮೂಲಕ ಜನಜಾಗೃತಿ ಮೂಡಿಸುವಂತೆಯೂ ಅವರು ಪೊಲೀಸ್ ಅಧಿಕಾರಿಗಳಿಗೆ ಸಲಹೆ ನೀಡಿದರು.

ಮೈಸೂರು ನಗರದ ಶಾಲಾ–ಕಾಲೇಜು, ವಿದ್ಯಾರ್ಥಿನಿಲಯಗಳ ಸುತ್ತಮುತ್ತ ಡ್ರಗ್ಸ್ ದಂಧೆ ಕೇಳಿ ಬರುತ್ತಿದ್ದು, ಆಯಾ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿ ಮಾದಕ ವಸ್ತು ಪೂರೈಸುವವರ ವಿರುದ್ಧ ಅಗತ್ಯ ಕ್ರಮ ಕೈಗೊಂಡು ಯುವ ಸಮೂಹವನ್ನು ಈ ದುಶ್ಚಟಗಳಿಂದ ಪಾರು ಮಾಡುವಂತೆಯೂ ಜಿಲ್ಲಾಧಿಕಾರಿಗಳು ಸೂಚಿಸಿದರು.

ಎಸ್‌ಪಿ ಸೀಮಾ ಲಾಟ್ಕರ್, ಮೈಸೂರು ನಗರ ಅಪರಾಧ ಮತ್ತು ಸಂಚಾರ ವಿಭಾಗದ ಡಿಸಿಪಿ ಎಸ್. ಜಾಹ್ನವಿ, ಇತರ ಪೊಲೀಸ್ ಅಧಿಕಾರಿಗಳು ಸಭೆಯಲ್ಲಿ ಹಾಜರಿದ್ದರು. ಅಂದೇ ಎಸ್ಪಿ ಸೀಮಾ ಲಾಟ್ಕರ್, ಅಡಿಷನಲ್ ಎಸ್ಪಿ ಡಾ. ನಂದಿನಿ ಅವರು ಮೈಸೂರು ತಾಲೂಕು, ರಮ್ಮನಹಳ್ಳಿಯ ಸೆಂಟ್ ಜೋಸೆಫ್ ಕಾಲೇಜಿನಲ್ಲಿ ಡ್ರಗ್ಸ್ ಸೇವನೆ ವಿರುದ್ಧ ವಿದ್ಯಾರ್ಥಿಗಳಿಗೆ ಅರಿವು ಮೂಡಿಸಿದರು.

ಯತೀಂದ್ರ ವಿರುದ್ಧ ಕುಮಾರಸ್ವಾಮಿ ಆರೋಪ ಆಧಾರರಹಿತ



ಮೈಸೂರು, ಜು.4(ಜಿಎ)–ಯತೀಂದ್ರ ಸಿದ್ದರಾಮಯ್ಯ ಸರ್ಕಾರದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂಬ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆ ಆಧಾರರಹಿತ ಆರೋಪವಾಗಿದೆ ಎಂದು ಮೈಸೂರು ನಗರ ಜಿಲ್ಲಾ ಕಾಂಗ್ರೆಸ್ ಸಮಿತಿ ವಕ್ತಾರ ರಾಜೇಶ್ ತಿಳಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಹೊಸದಾಗಿ ಯತೀಂದ್ರ ಸರ್ವಿಸ್ ಟ್ಯಾಕ್ಸ್ (YST) ಬಂದಿದೆ. ಸರ್ಕಾರದಲ್ಲಿ ಯತೀಂದ್ರ ಹಸ್ತಕ್ಷೇಪ ಮಾಡುತ್ತಿದ್ದಾರೆ ಎಂದು ಮಾಡಿರುವ ಆರೋಪ ಆಧಾರರಹಿತವಾಗಿದೆ ಎಂದರು.

ಈ ಆರೋಪಗಳು ಸಿದ್ದರಾಮಯ್ಯ ಅವರ ಮೇಲಿರುವ ರಾಜಕೀಯ ಸೇಡು, ದ್ವೇಷ ಅಷ್ಟೆ. ಸಿದ್ದರಾಮಯ್ಯ ಅವರನ್ನು ಕಟ್ಟಿಹಾಕುವ ತಂತ್ರವಾಗಿದೆ. ಯತೀಂದ್ರ ಸಿದ್ಧರಾಮಯ್ಯ ತಮ್ಮ ಕ್ಷೇತ್ರವನ್ನು ತಂದೆಗೆ ತ್ಯಾಗ ಮಾಡಿದ್ದಾರೆ, ಅವರು ಅಧಿಕಾರಕ್ಕಾಗಿ ಆಸೆ ಪಟ್ಟವರಲ್ಲ. ನಿಮ್ಮ ಕುಟುಂಬ ರಾಜಕಾರಣವನ್ನು ವಿರೋಧಿಸಿ ಚುನಾವಣೆಯಲ್ಲಿ ಕರ್ನಾಟಕದ ಮತದಾರರು ಜೆಡಿಎಸ್ ಪಕ್ಷಕೆ ಈಗಾಗಲೇ ತಕ್ಕ ಪಾಠ ಕಲಿಸಿದ್ದಾರೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಮೈಸೂರು ನಗರ ಕಾಂಗ್ರೆಸ್ ಕಾರ್ಯದರ್ಶಿ ನವೀದ್ ಪಾಷ ಸಾಹುಕಾರ್ ಚನ್ನಯ್ಯ ಬ್ಲಾಕ್ ಕಾರ್ಯದರ್ಶಿ ಎಸ್.ಎ. ರಹೀಮ್, ಕಾಂಗ್ರೆಸ್ ಮುಖಂಡ ಕುರುಬಾರಹಳ್ಳಿ ಪ್ರಕಾಶ್ ಉಪಸ್ಥಿತರಿದ್ದರು.

ಚಿಕಿತ್ಸೆಗೆ ಹಣ ಪಡೆದ ವಿಡಿಯೋ ವೈರಲ್

ಮೈಸೂರಿನ ಶಾಂತಿನಗರ ಪಿಹೆಚ್‌ಸಿ ವೈದ್ಯಾಧಿಕಾರಿ ಡಾ. ಕೆ.ಪಿ. ಕೋಮಲ ಅಮಾನತು



ಮೈಸೂರು, ಜು. 4(ಆರ್‌ಕೆ)– ರೋಗಿಗಳಿಗೆ ಚಿಕಿತ್ಸೆ ಮತ್ತು ಔಷಧಿಗಳನ್ನು ನೀಡಲು ಹಣ ಪಡೆಯುವ ವಿಡಿಯೋ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆದ ಹಿನ್ನೆಲೆಯಲ್ಲಿ ಮೈಸೂರಿನ ಶಾಂತಿನಗರ ಪ್ರಾಥಮಿಕ ಆರೋಗ್ಯ ಕೇಂದ್ರದ (ಪಿಹೆಚ್‌ಸಿ) ಡಾ. ಕೆ.ಪಿ. ಕೋಮಲ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಈ ಕುರಿತು ಇಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತ ಡಿ. ರಂದೀಪ್ ಅಮಾನತು ಆದೇಶ ಹೊರಡಿಸಿದ್ದು, ಕರ್ತವ್ಯ ಲೋಪ ಮತ್ತು ದುರ್ನಡತೆ ಆರೋಪದ ಮೇಲೆ ಶಿಸ್ತು ಕ್ರಮ ಕಾಯ್ದಿರಿಸಿ ಡಾ. ಕೆ.ಪಿ. ಕೋಮಲ ಅವರನ್ನು ಅಮಾನತುಗೊಳಿಸಿ, ಆದೇಶ ಹೊರಡಿಸಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯಾಗಿದ್ದ ಡಾ. ಕೆ.ಹೆಚ್.ಪ್ರಸಾದ್, ಪ್ರಕರಣದ ವಿಚಾರಣೆ ನಡೆಸಿ, ಜೂನ್ 28ರಂದು ಇಲಾಖೆಗೆ ವರದಿ ನೀಡಿದ್ದರು. ಸರ್ಕಾರದಿಂದ ಸಾರ್ವಜನಿಕರಿಗೆ ಉಚಿತವಾಗಿ ಔಷಧಿ ಮತ್ತು ಚಿಕಿತ್ಸಾ ಪರಿಕರಗಳನ್ನು ರಾಷ್ಟ್ರೀಯ ಆರೋಗ್ಯ ಅಭಿಯಾನ ಮತ್ತು ಎಬಿಎಆರ್‌ಕೆಯಡಿ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿದ್ದರೂ ಡಾ. ಕೋಮಲ ಅವರು ಚಿಕಿತ್ಸೆಗೆ ಬರುವ ರೋಗಿಗಳಿಂದ ಹಣ ಪಡೆಯುತ್ತಿದ್ದುದು ವಿಡಿಯೋದಲ್ಲಿ ಇರುವುದು ಮೇಲ್ನೋಟಕೆ ಆರೋಪ ಸಾಬೀತಾಗಿದೆ ಎಂದು ವರದಿಯಲ್ಲಿ ತಿಳಿಸಿದ್ದರು.

ಅವರು ಭ್ರಷ್ಟಾಚಾರದಲ್ಲಿ ತೊಡಗಿರುವುದು ಸಾಮಾಜಿಕ ಜಾಲತಾಣದಲ್ಲಿ ಕಂಡುಬಂದಿರುವುದರಿಂದ ಕರ್ತವ್ಯ ಲೋಪ ಮತ್ತು ದುರ್ನಡತೆಯನ್ನು ಗಂಭೀರವಾಗಿ ಪರಿಗಣಿಸಿ ಡಾ. ಕೋಮಲರನ್ನು ಸೇವೆಯಿಂದ ಅಮಾನತುಗೊಳಿಸುವಂತೆಯೂ ಅವರು ಶಿಫಾರಸು ಮಾಡಿದ್ದ ಹಿನ್ನೆಲೆಯಲ್ಲಿ ಆಯುಕ್ತರು ಇಲಾಖಾ ವಿಚಾರಣೆ ಬಾಕಿ ಇರಿಸಿ, ಅಮಾನತುಗೊಳಿಸಿದ್ದಾರೆ.

ಯೂತ್ ಹಾಸ್ಟೆಲ್ಸ್ ಗಂಗೋತ್ರಿ ಘಟಕದಿಂದ ಉಚಿತ ಆರೋಗ್ಯ ತಪಾಸಣಾ ಶಿಬಿರ



ಮೈಸೂರು, ಜು. 4–ಮೈಸೂರು ಜಿಲ್ಲಾ ಕುಟುಂಬ ವೈದ್ಯರ ಸಂಘದ ಸಹಯೋಗ ದೊಂದಿಗೆ ಮೈಸೂರಿನ ಯೂತ್ ಹಾಸ್ಟೆಲ್ಸ್ ಗಂಗೋತ್ರಿ ಘಟಕವು ವೈದ್ಯರ ದಿನಾಚರಣೆಯ ಅಂಗವಾಗಿ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ವಿದ್ಯಾರಣ್ಯಪುರಂ ಹಾಗೂ ಅಶೋಕಪುರಂ ನಿವಾಸಿಗಳ 30 ವರ್ಷ ಮೇಲ್ಪಟ್ಟ ವಯೋಮಿತಿಯ ವರಿಗಾಗಿ ಭಾನುವಾರ ಮೈಸೂರಿನ ವಿದ್ಯಾರಣ್ಯಪುರಂ ಸಾರ್ವಜನಿಕ ಹಾಸ್ಟೆಲ್ ಪಕ್ಕದ ಶ್ರೀ ಹೇರಂಬ ಮೆಡಿಕಲ್ಸ್ ಮುಂಭಾಗದಲ್ಲಿ ಏರ್ಪಡಿಸಲಾಗಿತ್ತು.

ಶಿಬಿರದಲ್ಲಿ ರಕ್ತದೊತ್ತಡ, ಸಕ್ಕರೆ ಖಾಯಿಲೆ, ಹಲ್ಲಿನ ತೊಂದರೆ ಹಾಗೂ ಕೀಲು, ಮೂಳೆ ತೊಂದರೆಗಳಿಗೆ ಸಂಬಂಧಪಟ್ಟಂತೆ ಮೈಸೂರು ಜಿಲ್ಲಾ ಕುಟುಂಬ ವೈದ್ಯರ ಸಂಘದ ನುರಿತ ವೈದ್ಯರು ತಪಾಸಣೆ ನಡೆಸಿ ಸೂಕ್ತ ಸಲಹೆಗಳನ್ನು ನೀಡಿದರು.

ವಿದ್ಯಾರಣ್ಯಪುರಂ ವಾರ್ಡ್ ನಂಬರ್ 61ರ ಪಾಲಿಕೆ ಸದಸ್ಯೆ ಶೋಭಾ ದೀಪ ಬೆಳಗುವ ಮೂಲಕ ಶಿಬಿರವನ್ನು ಉದ್ಘಾಟಿಸಿದರು. ಬಳಿಕ ಮಾತನಾಡಿದ ಅವರು, ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಏರ್ಪಾಡು ಮಾಡುವ ಮೂಲಕ ಯೂತ್ ಹಾಸ್ಟೆಲ್‌ನವರು ಬಹಳ ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಅದರಲ್ಲೂ ಶಿಬಿರಕ್ಕಾಗಿ ಈ ವಾರ್ಡನ್ನು ಪ್ರಥಮವಾಗಿ ಪರಿಗಣಿಸಿದ್ದು ಬಹಳ ಸಂತಸಪಡುವ ವಿಚಾರವೆಂದು ತಿಳಿಸಿ, ಬೇರೆಡೆಗಳಲ್ಲೂ ಇಂತಹ ಶಿಬಿರಗಳನ್ನು ಆಗಿಂದಾಗ್ಗೆ ಏರ್ಪಾಡು ಮಾಡುವಂತೆ ಮನವಿ ಮಾಡಿದರು. ಶಿಬಿರದಲ್ಲಿ ಒಟ್ಟಾರೆ 127 ಮಂದಿ ಆರೋಗ್ಯ ತಪಾಸಣೆ ಮಾಡಿಸಿಕೊಂಡರು.

ಮೈಸೂರು ಜಿಲ್ಲಾ ಕುಟುಂಬ ವೈದ್ಯರ ಸಂಘದ ಸದಸ್ಯರಾದ ಡಾ. ಕೆ. ನಾಗೇಂದ್ರ ಪ್ರಸಾದ್, ಡಾ.ಎಚ್.ವಿ.ರಮಾ, ಡಾ. ಜಯಕುಮಾರ್, ಡಾ.ಸಿ.ಜಿ. ಪ್ರಹ್ಲಾದ ರಾವ್, ಡಾ.ನಂದಕುಮಾರ್, ಡಾ. ಗಾಯತ್ರಿ ಅಲ್ಲದೆ ಮಾಜಿ ಪಾಲಿಕೆ ಸದಸ್ಯ ಸುನೀಲ್, ಯೂತ್ ಹಾಸ್ಟೆಲ್ಸ್ ಗಂಗೋತ್ರಿ ಘಟಕದ ಛೇರ್ಮನ್ ಎಂ.ವಿ. ಪರಶಿವಮೂರ್ತಿ, ಕಾರ್ಯಕ್ರಮದ ವ್ಯವಸ್ಥಾಪಕ ಮುನೀಶ್ ಕುಮಾರ್, ಘಟಕದ ಹಿರಿಯ ಸದಸ್ಯರಾದ ಡಾ. ಆರ್.ಜಿ.ಸಿ. ಶೇಖರ್, ವೈ.ಎನ್. ರಾಜೇಂದ್ರ, ಕೆ.ಎಂ.ಗೋಪಮ್ಮ, ಸತೀಶ್ ಬಾಬು, ಪೂರ್ಣಿಮಾ ಸುರೇಶ್, ಸರೋಜಾ ಶೇಖರ್, ಕೃಷ್ಣ ಹೆಬ್ಬಾರ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಶ್ರೀ ಸುತ್ತೂರು ಮಠದಲ್ಲಿ ನಡೆದ 256ನೇ ಬೆಳದಿಂಗಳ ಸಂಗೀತ ಕಾರ್ಯಕ್ರಮದಲ್ಲಿ ಚಿಲಕುಂದ ಸೋದರಿಯರಾದ ವಿದುಷಿ ಲಕ್ಷ್ಮಿ ನಾಗರಾಜ್ ಮತ್ತು ವಿದುಷಿ ನಾಗರಾಜ್ ದ್ವಂದ್ವ ಗಾಯನ ಪ್ರಸ್ತುತಪಡಿಸಿದರು. ವಿದ್ವಾನ್ ಆನೂರು ವಿನೋದ್ ಶ್ಯಾಮ್, ವಿದ್ವಾನ್ ಎಸ್.ಮಂಜುನಾಥ್ ಹಾಗೂ ವಿದ್ವಾನ್ ಕೇಶವ ಮೋಹನ್‌ಕುಮಾರ್ ಅವರುಗಳಿದ್ದಾರೆ.



ಮೈಸೂರು ತಾಲೂಕಿನ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯ ನೂತನ ಶಿಕ್ಷಣಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿದ ಎಂ.ವಿವೇಕಾನಂದ ಅವರನ್ನು ಜಿಲ್ಲಾ ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಬಿ.ಸೋಮೇಗೌಡ ಅಭಿನಂದಿಸಿದರು. ಈ ವೇಳೆ ಮಹದೇವ, ರಾಮೇಗೌಡ, ಜವರೇಗೌಡ, ಕೆಂಚೇಗೌಡ, ಪುಟ್ಟಸ್ವಾಮಿ, ಶಾಂತರಾಜು, ಶಿವಲಿಂಗರಾಜು, ನಾಗೇಂದ್ರ, ಕಡಕೊಳ ರವಿ, ಸಾಲುಂಡಿ ಎಸ್.ದೊರೆಸ್ವಾಮಿ, ಡ್ಯಾನಿಯಲ್ ರಿಂಕ್ ಇನ್ನಿತರರು ಉಪಸ್ಥಿತರಿದ್ದರು.

ಮೇಟಗಳ್ಳಿ ಜೆಎಸ್‌ಎಸ್ ಆಂಗ್ಲ ಶಾಲೆಯಲ್ಲಿ ಗುರುಪೂರ್ಣಿಮೆ



ಮೈಸೂರು, ಜು. 4– ಮೈಸೂರಿನ ಮೇಟಗಳ್ಳಿಯ ಜೆಎಸ್‌ಎಸ್ ಆಂಗ್ಲ ಮಾಧ್ಯಮ ಶಾಲೆಯಲ್ಲಿ ಗುರು ಪೂರ್ಣಿಮೆಯನ್ನು ಆಚರಿಸಲಾಯಿತು. ಅಧ್ಯಕ್ಷತೆ ವಹಿಸಿದ್ದ ಶಾಲಾ ಮುಖ್ಯೋಪಾಧ್ಯಾಯ ಎನ್.ಪಿ.ಸತೀಶ್, ಅರ್ಜುನ ಮತ್ತು ಶ್ರೀಕೃಷ್ಣರ ಕಥೆಯ ಮೂಲಕ ಗುರುವಿನ ಮಹತ್ವವನ್ನು ತಿಳಿಸಿದರು ಹಾಗೂ ವೇದವ್ಯಾಸ ಮಹರ್ಷಿಗಳ ಜೀವನ ಚರಿತ್ರೆಯ ಬಗ್ಗೆ ವಿವರಿಸಿದರು. ಪ್ರೌಢಶಾಲಾ ಶಿಕ್ಷಕರಾದ ದೀಪ ಅವರು, ಮಕ್ಕಳಿಗೆ ಗುರುವಿನ ಮಹತ್ವ ಮತ್ತು ಗುರು ಪೂರ್ಣಿಮೆಯ ಹಿನ್ನೆಲೆಯನ್ನು ತಿಳಿಸಿದರು. ಶಾಲೆಯ ಎಲ್ಲಾ ಸಿಬ್ಬಂದಿ ವರ್ಗದವರು ಮತ್ತು ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಸಕ್ರಿಯವಾಗಿ ಭಾಗವಹಿಸಿದ್ದರು.

ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆಯಲ್ಲಿ ಗುರುವಂದನಾ ಕಾರ್ಯಕ್ರಮ



ಮೈಸೂರು, ಜು. 4–ಮೈಸೂರಿನ ಸರಸ್ವತಿಪುರಂನ ಜೆಎಸ್‌ಎಸ್ ಬಾಲಿಕಾ ಪ್ರೌಢಶಾಲೆಯಲ್ಲಿ ಏರ್ಪಡಿಸಲಾಗಿದ್ದ ಗುರುವಂದನಾ ಕಾರ್ಯಕ್ರಮದಲ್ಲಿ ಶಾಲೆಯ ಗಣಿತ ಶಿಕ್ಷಕ ಎಂ.ಎಸ್. ಭಾಸ್ಕರ್ ಅವರು, ಗುರು ಪೂರ್ಣಿಮೆ, ತಂದೆ, ತಾಯಿ, ಗುರು ಹಾಗೂ ದೈವದ ಮಹತ್ವವನ್ನು ತಿಳಿಸಿದರು. ಗುರುಗಳ ಮಾರ್ಗದರ್ಶನದಲ್ಲಿ ನಡೆದಾಗ ಮಾತ್ರ ನಮ್ಮ ಗುರಿಯನ್ನು ತಲುಪಲು ಸಾಧ್ಯ ಎಂಬುದನ್ನು ನಿದರ್ಶನಗಳ ಮೂಲಕ ತಿಳಿಸಿದರು. ಶಾಲೆಯ ಮುಖ್ಯೋಪಾಧ್ಯಾಯ ಮಹದೇವಪ್ಪ ಅಧ್ಯಕ್ಷತೆ ವಹಿಸಿ ಮಾತನಾಡಿ, ಗುರುಹಿರಿಯರ ಬಗ್ಗೆ ಗೌರವ ಹೊಂದಿ ವಿಧೇಯತೆಯಿಂದ ವಿದ್ಯಾರ್ಜನೆ ಮಾಡಬೇಕು. ಆಗ ಮಾತ್ರ ಗುರಿ ಸಾಧಿಸಲು ಸಾಧ್ಯ ಎಂದು ಹೇಳಿದರು. ಶಿಕ್ಷಕರಾದ ಕೆ.ಎನ್.ಜಗದೀಶ್ ಸ್ವಾಗತಿಸಿದರು. ಜೆ.ಶಶಿಕಲಾ ವಂದಿಸಿದರು. ಸತ್ಯಪ್ರೇಮ ದೇವಿ ನಿರೂಪಿಸಿದರು.

ಮೈಸೂರು ತಾಲೂಕು ಕಚೇರಿಯಲ್ಲಿ ಇ-ಆಫೀಸ್ ತಂತ್ರಾಂಶ ಅಳವಡಿಸಿ

ತಹಸೀಲ್ದಾರ್‌ಗೆ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಸೂಚನೆ

ಮೈಸೂರು, ಜು. 4(ಆರ್‌ಕೆ)– ಮೈಸೂರು ತಾಲೂಕು ಕಚೇರಿಯಲ್ಲಿ ಇ-ತಂತ್ರಾಂಶ ಅಳವಡಿಸಿ ಸಾರ್ವಜನಿಕರು, ರೈತರು ಹಾಗೂ ಸಾಮಾಜಿಕ ರಕ್ಷಣಾ ಯೋಜನೆ ಫಲಾನುಭವಿಗಳಿಗೆ ಪಾರದರ್ಶಕ ಸೇವೆ ಕಲ್ಪಿಸುವಂತೆ ಜಿಲ್ಲಾಧಿಕಾರಿ ಡಾ. ಕೆ.ವಿ. ರಾಜೇಂದ್ರ ಇಂದಿಲ್ಲಿ ತಹಸೀಲ್ದಾರ್‌ರಿಗೆ ಸೂಚನೆ ನೀಡಿದ್ದಾರೆ.



ಮೈಸೂರಿನ ನಜರ್‌ಬಾದ್‌ನ ಮಿನಿ ವಿಧಾನಸೌಧದಲ್ಲಿರುವ ತಾಲೂಕು ಕಚೇರಿಗೆ ಸೋಮವಾರ ಸಂಜೆ ಭೇಟಿ ನೀಡಿ ಅಲ್ಲಿನ ತಹಸೀಲ್ದಾರ್ ಕಚೇರಿ, ಕಂದಾಯ ಶಾಖೆ, ರೆವಿನ್ಯೂ ಇನ್ಸ್‌ಪೆಕ್ಟರ್‌ಗಳ ಕೊಠಡಿ, ಟಪಾಲು ಶಾಖೆ, ಆರ್‌ಆರ್‌ಟಿ, ಭೂಮಿ ಕೇಂದ್ರ, ರೆಕಾರ್ಡ್ ಸೆಕ್ಷನ್, ಉಪತಹಸೀಲ್ದಾರ್ ಕಚೇರಿ, ಸರ್ವೆ ಶಾಖೆ, ಚುನಾವಣಾ ಶಾಖೆಗಳಿಗೆ ಭೇಟಿ ನೀಡಿ ಕಾರ್ಯವೈಖರಿ ಪರಿಶೀಲಿಸಿದ ಅವರು, ಸರ್ಕಾರದ ಎಲ್ಲಾ ಇಲಾಖೆಗಳಲ್ಲೂ ಆನ್‌ಲೈನ್‌ನಲ್ಲಿ ಕೆಲಸ ನಡೆಯುತ್ತಿದೆಯಾದರೂ ತಾಲೂಕು ಕಚೇರಿಯಲ್ಲಿ ಇನ್ನೂ ಇ-ಕಚೇರಿ ತಂತ್ರಾಂಶ ಅನುಷ್ಠಾನಗೊಳಿಸದಿರುವ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿದರು.

ಅಂಗವಿಕಲರು, ವೃದ್ಧಾಪ್ಯ, ಸಂಧ್ಯಾ ಸುರಕ್ಷಾ, ವಿಧವೆಯರ ಸಾಮಾಜಿಕ ಭದ್ರತಾ ವೇತನಗಳಿಗೆ ಬರುವ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡುವ ಜೊತೆಗೆ ಆರ್‌ಟಿಸಿ ತಿದ್ದುಪಡಿ, ಖಾತಾ-ಕಂದಾಯ, ಪೌತಿ ಖಾತೆ, ಭೂ ದಾಖಲೆಗಳ ಪ್ರತಿ ವಿತರಣೆಯಂತಹ ಸೇವೆಗಳನ್ನು ವಿಳಂಬ ಮಾಡದೇ ವಿತರಿಸಬೇಕು, ಯಾವ ಹಂತದಲ್ಲೂ ಅರ್ಜಿಗಳನ್ನು ಬಾಕಿ ಉಳಿಸಿಕೊಳ್ಳದಂತೆ ಟ್ರ್ಯಾಕ್ ಮಾಡಬೇಕೆಂದೂ ತಹಸೀಲ್ದಾರ್ ಬಿ.ಎನ್. ಗಿರೀಶ್ ಅವರಿಗೆ ಜಿಲ್ಲಾಧಿಕಾರಿಗಳು ತಾಕೀತು ಮಾಡಿದರು.

ಅದೇ ವೇಳೆ ಸಾರ್ವಜನಿಕರ ಕುಂದು-ಕೊರತೆ ಆಲಿಸಿದ ಡಾ.ರಾಜೇಂದ್ರ, ರೈತರು ತಮ್ಮ ಜಮೀನುಗಳ ಸಂಬಂಧ ಅರ್ಜಿ ಸಲ್ಲಿಸಿ ತಿಂಗಳು ಕಳೆದರೂ ವಿಲೇವಾರಿ ಮಾಡದ ಬಗ್ಗೆ ಹಲವು ದೂರುಗಳು ಕೇಳಿಬಂದವು. ಅನಗತ್ಯವಾಗಿ ಕಡತಗಳನ್ನು ಬಾಕಿ ಇರಿಸಿಕೊಂಡು ಜನರಿಗೆ ತೊಂದರೆ ಕೊಡುತ್ತಿರುವುದು ತಮ್ಮ ಗಮನಕ್ಕೆ ಬಂದರೆ ಅಗತ್ಯ ಕ್ರಮ ಕೈಗೊಳ್ಳುವುದಾಗಿಯೂ ಎಚ್ಚರಿಕೆ ನೀಡಿದರು.

ನಂತರ ಕೋರ್ಟ್‌ಹಾಲ್‌ನಲ್ಲಿ ತಹಸೀಲ್ದಾರ್, ಉಪ ತಹಸೀಲ್ದಾರ್, ಶಿರಸ್ತೇದಾರ್, ರೆವಿನ್ಯೂ ಇನ್ಸ್‌ಪೆಕ್ಟರ್, ವಿಲೇಜ್ ಅಕೌಂಟೆಂಟ್‌ಗಳೊಂದಿಗೆ ಸಭೆ ನಡೆಸಿದ ಜಿಲ್ಲಾಧಿಕಾರಿಗಳು, ಆರ್‌ಟಿಸಿ ಕಾಲಂ ನಂಬರ್ 3 ಮತ್ತು 9ರಲ್ಲಿ ನಮೂದಾಗಿರುವ ವ್ಯತ್ಯಾಸಗಳನ್ನು ಸರಿಪಡಿಸದಿರುವುದನ್ನು ಗಮನಿಸಿ ಆದ್ಯತೆ ಮೇಲೆ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ತಾಕೀತು ಮಾಡಿದರು. ತಾಲೂಕಿನಾದ್ಯಂತ ಗ್ರಾಮಗಳಲ್ಲಿ ಜನಸಂಖ್ಯೆಗನುಸಾರ ಸ್ಮಶಾನಕ್ಕೆ ಜಮೀನು ಲಭ್ಯವಿರುವ ಬಗ್ಗೆ ಖಚಿತಪಡಿಸಿಕೊಂಡು ಹೆಚ್ಚುವರಿ ಜಾಗದ ಅವಶ್ಯವಿದ್ದಲ್ಲಿ ಪ್ರಸ್ತಾವನೆ ಸಲ್ಲಿಸಲು ಸೂಚಿಸಿದ ಡಾ. ರಾಜೇಂದ್ರ, ಒಂದು ವೇಳೆ ಸರ್ಕಾರಿ ಜಾಗ ಲಭ್ಯವಿಲ್ಲದಿದ್ದಲ್ಲಿ ಖಾಸಗಿ ಜಮೀನು ಖರೀದಿಸುವ ಬಗ್ಗೆ ಪ್ರಸ್ತಾವನೆ ನೀಡುವಂತೆಯೂ ತಿಳಿಸಿದರು. ಅಟಲ್ ಜನಸ್ನೇಹಿ ಕೇಂದ್ರಗಳಲ್ಲಿ ಸ್ವೀಕರಿಸುತ್ತಿರುವ ಎಲ್ಲಾ ಅರ್ಜಿಗಳನ್ನೂ 7 ದಿನದೊಳಗಾಗಿ ವಿಲೇವಾರಿ ಮಾಡಬೇಕು, ಭೂಮಿ ತಂತ್ರಾಂಶದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಇತ್ಯರ್ಥಗೊಳಿಸುವತ್ತ ಗಮನಹರಿಸಿ ಎಂದ ಅವರು, ಕಚೇರಿಗೆ ಹಾಜರಾಗುವ ಸಾರ್ವಜನಿಕರೊಂದಿಗೆ ಸೌಹಾರ್ದತೆಯಿಂದ ಸ್ಪಂದಿಸಿ ಕಾನೂನು ಚೌಕಟ್ಟಿನಲ್ಲಿ ವಿಳಂಬ ಮಾಡದೇ ಸೇವೆ ಸಲ್ಲಿಸುವಂತೆಯೂ ಸೂಚಿಸಿದರು.


ವಾರಾಂತ್ಯ ಅಭಿನಯ, ರಂಗ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು, ಜು. 4–ಅದವ್ಯ ರಂಗಶಾಲೆಯು ದಿ ನೆಸ್ಟ್ ಮಾಂಟೇಸರಿ ಶಾಲೆಯ ಸಹಕಾರದೊಂದಿಗೆ ಮಕ್ಕಳಿಗಾಗಿ ಒಂದು ವರ್ಷ ಅವಧಿಯ ವಾರಾಂತ್ಯ ಅಭಿನಯ ಕಾರ್ಯಾಗಾರ ಹಾಗೂ ರಂಗ ತರಬೇತಿ ಕೋರ್ಸ್ ಅನ್ನು ಜು. 8 ರಿಂದ ಆರಂಭಿಸಲಿದ್ದು, ರಂಗಾಸಕ್ತ ಮಕ್ಕಳಿಂದ ನೋಂದಣಿಗಾಗಿ ಅರ್ಜಿ ಆಹ್ವಾನಿಸಲಾಗಿದೆ ಎಂದು ರಂಗಶಾಲೆಯ ಗೌರವ ಕಾರ್ಯದರ್ಶಿ ಟಿ. ಸತೀಶ್ ಜವರೇಗೌಡ ತಿಳಿಸಿದ್ದಾರೆ.

ಆಸಕ್ತ ಪೋಷಕರು ತಮ್ಮ ಮಕ್ಕಳನ್ನು ಜು.8ರೊಳಗೆ ದಾಖಲಿಸಿ ಪ್ರವೇಶಾತಿಯನ್ನು ಪಡೆಯಬೇಕು. ಜು. 8 ರಿಂದಲೇ ತರಗತಿಗಳು ಪ್ರಾರಂಭವಾಗಲಿವೆ. ಅಭಿನಯ, ರಂಗ ಸಂಗೀತ, ಆಂಗಿಕ ಚಲನೆ, ಧ್ವನಿ ಬಳಕೆ ಮತ್ತು ಪರಿಷ್ಕರಣೆ, ಪ್ರಸಾದನ, ಬೆಳಕು, ರಂಗವಿನ್ಯಾಸ, ಪರಿಕರ ನಿರ್ಮಾಣ, ರಂಗ ಇತಿಹಾಸ, ನಾಟಕ ತಯಾರಿ, ನಾಟಕ ಪ್ರದರ್ಶನ ಸೇರಿದಂತೆ ರಂಗಭೂಮಿಯ ಮತ್ತು ಸಿನಿಮಾ ಮಾಧ್ಯಮದ ಬೇರೆ ಬೇರೆ ಆಯಾಮಗಳ ಕುರಿತು ಪರಿಚಯಾತ್ಮಕ ಪ್ರಾಯೋಗಿಕ ತರಗತಿಗಳು ನಡೆಯಲಿದ್ದು, ನುರಿತ ರಂಗಭೂಮಿಯ ಸಂಪನ್ಮೂಲ ಶಿಕ್ಷಕರು ತರಬೇತಿ ನೀಡಲಿದ್ದಾರೆ.

ಪ್ರತಿ ಶನಿವಾರ ಸಂಜೆ 5.30 ರಿಂದ 8.30ರವರೆಗೂ ಭಾನುವಾರ ಬೆಳಗ್ಗೆ 10 ರಿಂದ 2 ರವರೆಗೂ ರಂಗ ತರಗತಿಗಳು ನಡೆಯಲಿವೆ. ಕಾರ್ಯಾಗಾರಕ್ಕೆ ಗರಿಷ್ಠ 25 ಮಂದಿ ಮಕ್ಕಳಿಗೆ ಮಾತ್ರ ಅವಕಾಶ ಕಲ್ಪಿಸಲಾಗಿದೆ. ಮೊದಲು ಬಂದವರಿಗೆ ಮೊದಲ ಆದ್ಯತೆ ನೀಡಲಾಗುವುದು. ಮಕ್ಕಳ ವಯೋಮಿತಿ 5 ವರ್ಷದಿಂದ 13 ವರ್ಷವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ರಂಗಶಾಲೆಯ ಕಾರ್ಯದರ್ಶಿ ಚಂದ್ರು ಮಂಡ್ಯ ಅವರನ್ನು 86601 03141 ಮೂಲಕ ಸಂಪರ್ಕಿಸಬಹುದು.

ಪೊಲೀಸರಿಗೆ ಯೋಗ ಶಿಬಿರ: ಒತ್ತಡಕ್ಕೆ ಸೂಕ್ತ ಉಪಶಮನ



ಮೈಸೂರು, ಜು. 4(ಆರ್‌ಕೆ)– ಕರ್ತವ್ಯದ ಒತ್ತಡ ಶಮನಕ್ಕೆ ಮೈಸೂರು ಜಿಲ್ಲಾ ಪೊಲೀಸರಿಗೆ 15 ದಿನಗಳ ಯೋಗ ಶಿಬಿರ ಆರಂಭವಾಗಿದೆ.

ಮೈಸೂರಿನ ಜ್ಯೋತಿನಗರದಲ್ಲಿರುವ ಡಿಎಆರ್ ಮೈದಾನದಲ್ಲಿ ಆರಂಭವಾಗಿರುವ ಶಿಬಿರದಲ್ಲಿ ಪ್ರತೀದಿನ ಒಂದೊಂದು ಉಪವಿಭಾಗದ ಡಿವೈಎಸ್ಪಿಗಳು, ಇನ್ಸ್‌ಪೆಕ್ಟರ್, ಸಬ್‌ಇನ್ಸ್‌ಪೆಕ್ಟರ್, ಎಎಸ್‌ಐ ಹಾಗೂ ಸಿಬ್ಬಂದಿಗಳು ಪಾಲ್ಗೊಂಡು ಯೋಗಾಭ್ಯಾಸ ಮಾಡುತ್ತಿದ್ದಾರೆ. ಜೂನ್ 26ರಿಂದ ಆರಂಭವಾಗಿರುವ ಯೋಗ ಶಿಬಿರವು ಪ್ರತಿದಿನ ಬೆಳಗ್ಗೆ 8ರಿಂದ 9 ಗಂಟೆವರೆಗೆ ನಡೆಯಲಿದ್ದು, ಯೋಗ ಗುರುಗಳು ನಾನಾ ಆಸನಗಳನ್ನು ಹೇಳಿಕೊಡುತ್ತಿದ್ದಾರೆ. ಆರಂಭದ ದಿನ ಎಸ್ಪಿ ಸೀಮಾ ಲಾಟ್ಕರ್ ಭಾಗವಹಿಸಿ ಪೊಲೀಸರು ನಿತ್ಯ ಒತ್ತಡದಲ್ಲಿ ಕರ್ತವ್ಯ ನಿರ್ವಹಿಸುವುದರಿಂದ ಅವರ ಮಾನಸಿಕ ಮತ್ತು ದೈಹಿಕ ಆರೋಗ್ಯ ಕಾಪಾಡಿಕೊಳ್ಳಲು ಯೋಗಾಭ್ಯಾಸ ಪ್ರಮುಖವಾಗಿದೆಯಾದ್ದರಿಂದ ನಿತ್ಯ ಯೋಗ ಮಾಡಬೇಕೆಂದು ಸಲಹೆ ನೀಡಿದರು. ಅಡಿಷನಲ್ ಎಸ್ಪಿ ಡಾ. ಬಿ.ಎನ್. ನಂದಿನಿ ಸೇರಿದಂತೆ ಹಲವರು ಉಪಸ್ಥಿತರಿದ್ದರು.

ಕೇಂದ್ರದಿಂದ ಅಕ್ಕಿ ಕೊಡಿಸಲು ನೆರವಾಗದ ರಾಜ್ಯ ಬಿಜೆಪಿಯವರು ಪ್ರತಿಭಟನೆ ನಡೆಸುತ್ತಿದ್ದಾರೆ

ಮೈಸೂರು, ಜು.4(ಬಿಎಲ್‌ಯು)– ರಾಜ್ಯದ ಬಗ್ಗೆ ಕಾಳಜಿ ಇಲ್ಲದ ಬಿಜೆಪಿಯವರಿಗೆ ಮಾನ-ಮರ್ಯಾದೆ ಇಲ್ಲ. ಇಂತಹವರು ಕಾಂಗ್ರೆಸ್ ಸರ್ಕಾರದ ವಿರುದ್ಧ ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಕೆಪಿಸಿಸಿ ರಾಜ್ಯ ವಕ್ತಾರ ಎ.ಎನ್.ನಟರಾಜಗೌಡ ಕಿಡಿಕಾರಿದ್ದಾರೆ. ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಮಂಗಳವಾರ ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಅಕ್ಕಿ ಕೊಡಿಸದವರು ಈಗ ಯಾವ ಮುಖ ಇಟ್ಟುಕೊಂಡು ಪ್ರತಿಭಟನೆ ನಡೆಸುತ್ತಿದ್ದಾರೆ ಎಂದು ಕೇಸರಿ ನಾಯಕರ ಪ್ರತಿಭಟನೆಗೆ ತಿರುಗೇಟು ನೀಡಿದರು.

ಅನ್ನಭಾಗ್ಯ ಯೋಜನೆಯಲ್ಲಿ 10 ಕೆ.ಜಿ.ಅಕ್ಕಿ ಕೊಡುವ ಗ್ಯಾರಂಟಿ ಸ್ಕೀಂಗೆ ಕಾಂಗ್ರೆಸ್ ಸರ್ಕಾರ ಈಗಲೂ ಬದ್ಧವಾಗಿದೆ. ಆದರೆ ಮೊದಲು ಅಕ್ಕಿ ಕೊಡುತ್ತೇವೆ ಅಂತ ಹೇಳಿ ಈಗ ಕೇಂದ್ರದ ಬಿಜೆಪಿ ಸರ್ಕಾರ ರಾಜಕೀಯ ದುರುದ್ದೇಶದಿಂದ ಉಲ್ಟಾ ಹೊಡೆದಿದೆ. ಈ ಕಾರಣದಿಂದಲೇ ಅಕ್ಕಿ ಬದಲು ಹಣ ನೀಡಲಾಗುತ್ತಿದೆ ಎಂದು ನಟರಾಜ್‌ಗೌಡ ಸ್ಪಷ್ಟಪಡಿಸಿದರು. ರಾಜ್ಯದ ಜನರ ಕಾಳಜಿ ಇದ್ದಿದ್ದರೆ ಕರ್ನಾಟಕದ 26 ಸಂಸದರು ಹಾಗೂ 66 ಶಾಸಕರು ತಮ್ಮದೇ ಪಕ್ಷದ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಿ ಅಕ್ಕಿ ಕೊಡಿಸುತ್ತಿದ್ದರು. ಆದರೆ ಅವರಿಗೆ ಆ ಬದ್ಧತೆ ಇಲ್ಲ. ಈ ಮಧ್ಯೆ ಕಾಂಗ್ರೆಸ್ ಸರ್ಕಾರದ ಗ್ಯಾರಂಟಿ ಸ್ಕೀಂ ಬಗ್ಗೆ ಪ್ರತಿಭಟನೆ ನಡೆಸುತ್ತಿದ್ದಾರೆ. ಇದು ನಾಚಿಕೆಗೇಡಿನ ಸಂಗತಿ ಎಂದು ನಟರಾಜ್ ಆಕ್ರೋಶ ವ್ಯಕ್ತಪಡಿಸಿದರು.



ಭಾರತ ಸರ್ಕಾರದ ಉಗ್ರಾಣದಲ್ಲಿ 730 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಗೋಧಿ ಸೇರಿದಂತೆ ಹಲವು ದವಸ ಧಾನ್ಯವಿದೆ. ಎಥನಾಲ್‌ಗೆ ಅಕ್ಕಿ ಕೊಡುವ ಬಿಜೆಪಿ ಸರ್ಕಾರ ಹಸಿದವರಿಗೆ ಅಕ್ಕಿ ನೀಡುತ್ತಿಲ್ಲ ಎಂದು ಕಿಡಿಕಾರಿದರು. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಬಿ.ಜೆ.ವಿಜಯಕುಮಾರ್, ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮಾಜಿ ಕಾರ್ಪೊರೇಟರ್ ಶಿವಣ್ಣ ಮಾಧ್ಯಮಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ನಿಗಮ ಮಂಡಳಿ ನೇಮಕದಲ್ಲಿ ಲಾಬಿ ನಡೆಯಲ್ಲ: ಬಿ.ಜೆ.ವಿಜಯಕುಮಾರ್

ಮೈಸೂರು, ಜು.4(ಬಿಎಲ್‌ಯು)–ನಿಗಮ ಮಂಡಳಿಗಳಿಗೆ ನೇಮಕಗೊಳ್ಳಲು ಈ ಬಾರಿಯ ಕಾಂಗ್ರೆಸ್ ಸರ್ಕಾರದಲ್ಲಿ ಲಾಬಿ ನಡೆಯುವುದಿಲ್ಲ ಎಂದು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್ ಸ್ಪಷ್ಟಪಡಿಸಿದ್ದಾರೆ. ಮೈಸೂರಿನ ಕಾಂಗ್ರೆಸ್ ಭವನದಲ್ಲಿ ಇಂದು ಮಾಧ್ಯಮಗೋಷ್ಠಿಯಲ್ಲಿ ಮಾತನಾಡಿದ ಅವರು, ನಿಗಮ ಮಂಡಳಿ ನೇಮಕಕ್ಕೆ ಅರ್ಜಿ ಆಹ್ವಾನಿಸಲಾಗಿದ್ದು, ಜುಲೈ 15 ಕೊನೆಯ ದಿನವಾಗಿದೆ ಎಂದರು.


ಈ ಹಿಂದೆ ಸಚಿವರು ಹಾಗೂ ಶಾಸಕರ ಬೆಂಬಲಿಗರಿಗೆ ನಿಗಮ ಮಂಡಳಿಗಳಲ್ಲಿ ಸ್ಥಾನ ಸಿಗುತ್ತಿತ್ತು. ಆದರೆ ಅರ್ಹತೆ ಹಾಗೂ ಹಿರಿತನ ಇರುವ ಕಾಂಗ್ರೆಸ್ ಕಾರ್ಯಕರ್ತರು ಅಧಿಕಾರದಿಂದ ವಂಚಿತರಾಗುತ್ತಿದ್ದರು. ಆದರೆ ಈ ಬಾರಿ ಹಿರಿತನ ಹಾಗೂ ಮೀಸಲಾತಿ ಆಧಾರದ ಮೇಲೆ ನಿಗಮ ಮಂಡಳಿಗಳಿಗೆ ನೇಮಕ ಮಾಡಲಾಗುವುದು ಎಂದು ಹೇಳಿದರು. ಯಾವುದೇ ರೀತಿಯ ಲಾಬಿ ನಡೆಯಲ್ಲ. ಅರ್ಹತೆ ಇರುವವರಿಗೆ ಮೀಸಲಾತಿ ಆಧಾರದ ಮೇಲೆ ನಿಗಮ ಮಂಡಳಿಗಳಲ್ಲಿ ಸ್ಥಾನ ಸಿಗಲಿದೆ ಎಂದು ಡಾ.ವಿಜಯಕುಮಾರ್ ಹೇಳಿದರು.

ಮಹಾಜನ ಕಾಲೇಜಲ್ಲಿ ಯಶಸ್ವಿ ಉದ್ಯೋಗ ಮೇಳ

ನೋಂದಾಯಿಸಿಕೊಂಡ 600 ಜನರಲ್ಲಿ 450 ಮಂದಿ ಸಂದರ್ಶನಕ್ಕೆ ಹಾಜರು

ಮೈಸೂರು, ಜು. 4– ಮಹಾಜನ ಪ್ರಥಮ ದರ್ಜೆ ಕಾಲೇಜಿನಲ್ಲಿ ರಾಷ್ಟ್ರೀಯ ಮಟ್ಟದ ಅಂತರ ಕಾಲೇಜು ಮಹಾಮ್ 2023 ಫೆಸ್ಟ್ ಅಂಗವಾಗಿ ಡಾ. ಎ.ಪಿ.ಜೆ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಿದ್ದ ಉದ್ಯೋಗ ಮೇಳವನ್ನು ಮಹಾಜನ ವಿದ್ಯಾಸಂಸ್ಥೆಯ ಅಧ್ಯಕ್ಷ ಟಿ. ಮುರಳೀಧರ್ ಭಾಗವತ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, ಈವರೆಗೂ 600ಕ್ಕೂ ಹೆಚ್ಚು ಉದ್ಯೋಗಾಕಾಂಕ್ಷಿಗಳು ತಮ್ಮ ಹೆಸರನ್ನು ನೋಂದಾಯಿಸಿಕೊಂಡಿದ್ದು, 450ಕ್ಕೂ ಹೆಚ್ಚು ಅಭ್ಯರ್ಥಿಗಳು ಸಂದರ್ಶನಕ್ಕೆ ಹಾಜರಾಗಿರುವುದು ಸಂತಸದ ಸಂಗತಿ. ಮಹಾಜನ ವಿದ್ಯಾಸಂಸ್ಥೆ ವಿದ್ಯಾರ್ಥಿಗಳಿಗೆ ಮೌಲ್ಯಾಧಾರಿತ ಶಿಕ್ಷಣದ ಜೊತೆಗೆ ಆರ್ಥಿಕ ಸ್ವಾವಲಂಬನೆಗೂ ಇಂತಹ ಉದ್ಯೋಗ ಮೇಳವನ್ನು ಆಯೋಜಿಸಿರುವುದು ಅದರ ಸಾಮಾಜಿಕ ಬದ್ಧತೆ ಹಾಗೂ ಸಾಂಸ್ಕೃತಿಕ ನಾಯಕತ್ವವನ್ನು ಪ್ರತಿಧ್ವನಿಸುತ್ತದೆ. ಮಹಾಜನ ಕಾಲೇಜು



ಶಿಕ್ಷಣ ಪಡೆದ ಪ್ರತಿಯೊಬ್ಬರಿಗೂ ಉದ್ಯೋಗದ ಅವಕಾಶವನ್ನು ಕಲ್ಪಿಸಿಕೊಡುವ ನಿಟ್ಟಿನಲ್ಲಿ ಇಂತಹ ಉದ್ಯೋಗ ಮೇಳವು ಹೆಚ್ಚು ಪ್ರಯೋಜನಕಾರಿ. ಯುವಜನತೆ ಹೊಸ ತಂತ್ರಜ್ಞಾನವನ್ನು ಅರಿತು ಸಮಾಜದ ಏಳಿಗೆಗೆ ಪರಿಶ್ರಮದಿಂದ ದುಡಿಯಬೇಕು ಎಂದರು. ಇಂದಿನ ಉದ್ಯೋಗ ಮೇಳದಲ್ಲಿ ಪ್ರತಿಷ್ಠಿತ ಕಂಪನಿಗಳಾದ ICICI, AXIS, Kotak Mahindra ಬ್ಯಾಂಕುಗಳು, Saint Gobain, Wistron, Big Basket, Lenskart, UNEXT, Clean Fanatics, Greet Technologies, We-Technology, Simba Group, Grassroots, CASA Grand, Mahalakshmi Sweets and Infopine ನಂತಹ ಸುಮಾರು 16 ಕಂಪನಿಗಳು ಅಂತಿಮ ವರ್ಷದ ಬಿಎ, ಬಿಕಾಂ, ಬಿಎಸ್ಸಿ, ಬಿಸಿಎ, ಬಿಬಿಎ, ಎಂಎಸ್ಸಿ, ಎಂಕಾಂ ಮತ್ತು ಎಂಸಿಎ ವಿದ್ಯಾರ್ಥಿಗಳಿಗೆ Relationship Manager, Assistant Manager, Back Office Executive, Telecalling Executive, HR Recruiter, Branch Relationship Executives, Business Development Executive ಹುದ್ದೆಗಳಿಗೆ ವಿವಿಧ ಕಂಪನಿಗಳ ಪಾಲುದಾರರು, HR ಮ್ಯಾನೇಜರ್‌ಗಳು ಅಭ್ಯರ್ಥಿಗಳಿಗೆ ಸಂದರ್ಶನ ನಡೆಸಿದರು. ಗೌರವ ಕಾರ್ಯದರ್ಶಿ ಡಾ.ಟಿ. ವಿಜಯಲಕ್ಷ್ಮೀ ಮುರಳೀಧರ್, ಪ್ರಾಂಶುಪಾಲರಾದ ಡಾ. ಬಿ.ಆರ್. ಜಯಕುಮಾರಿ, ಕಾರ್ಯನಿರ್ವಹಣಾಧಿಕಾರಿ ಡಾ. ಎಸ್.ಆರ್. ರಮೇಶ್, ಮಹಾಜನ ಸ್ನಾತಕೋತ್ತರ ಕೇಂದ್ರದ ಪ್ರಭಾರ ನಿರ್ದೇಶಕ ಪ್ರೊ. ಹರೀಶ್ ಮಾಚಯ್ಯ ಕೋದಂಡೇರ, ಶೈಕ್ಷಣಿಕ ಡೀನ್ ಡಾ. ಶ್ರೀಧರ ಹೆಚ್, ಮಹಾಮ್ 2023ರ ಅಧ್ಯಾಪಕ ಸಂಯೋಜಕ ಡಾ. ಎಚ್.ಆರ್. ತಿಮ್ಮೇಗೌಡ ಹಾಗೂ ಕೆರಿಯರ್ ಗೈಡನ್ಸ್ & ಪ್ಲೇಸ್‌ಮೆಂಟ್ ಸೆಲ್‌ನ ಸಂಚಾಲಕರಾದ ಸೌಮ್ಯ ಹೆಚ್.ಎಲ್. ಉಪಸ್ಥಿತರಿದ್ದರು.

ಹೆಚ್.ಡಿ.ಕೋಟೆ ಪುರಸಭೆಯಲ್ಲಿ ಕೋಟ್ಯಾಂತರ ರೂ. ಹಗರಣ?

● ಇಂಜಿನಿಯರಿಂಗ್, ಕಂದಾಯ, ಸ್ವಚ್ಛತಾ ವಿಭಾಗಗಳು ಸೇರಿ ಹಲವು ವಿಭಾಗಗಳಲ್ಲಿ ಅವ್ಯವಹಾರ
● 17 ಹಗರಣಗಳ ಬಗ್ಗೆ ಜಿಲ್ಲಾಧಿಕಾರಿಗಳಿಗೆ 378 ಪುಟಗಳ ವರದಿಯೊಂದಿಗೆ ದೂರು


ಹೆಚ್.ಡಿ.ಕೋಟೆ, ಜು.4– ಹೆಚ್.ಡಿ.ಕೋಟೆ ಪುರಸಭೆಯಲ್ಲಿ 10 ಕೋಟಿಗೂ ಹೆಚ್ಚು ಹಗರಣ ನಡೆದಿದೆ ಎಂದು ಪುರಸಭೆ ಸ್ಥಾಯಿ ಸಮಿತಿ ಅಧ್ಯಕ್ಷ ಐಡಿಯಾ ವೆಂಕಟೇಶ್ ಗಂಭೀರ ಆರೋಪ ಮಾಡಿದ್ದಾರೆ.

ಪಟ್ಟಣದ ಪುರಸಭಾ ಕಚೇರಿಯಲ್ಲಿ ನಡೆದ ಸ್ಥಾಯಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, ಪುರಸಭೆಯಲ್ಲಿ ಇಂಜಿನಿಯರಿಂಗ್, ಕಂದಾಯ, ಸ್ವಚ್ಛತೆ ಸೇರಿದಂತೆ ಇನ್ನಿತರ ವಿಭಾಗಗಳಲ್ಲಿ ಸಾಕಷ್ಟು ದುರುಪಯೋಗಗಳನ್ನು ಮಾಡಿಕೊಂಡು, ಹಗರಣಗಳಲ್ಲಿ ಭಾಗಿಯಾಗಿರುವ ಸುಮಾರು 17 ಹಗರಣಗಳ ಬಗ್ಗೆ ಸವಿತಿಂಯು 378 ಪುಟಗಳ ವರದಿಯನ್ನು ಸಿದ್ಧಪಡಿಸಿದ್ದು, ಅದನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸುವ ಮೂಲಕ ದೂರು ನೀಡಿದ್ದೇನೆ ಎಂದರು.

ಪುರಸಭೆ ವ್ಯಾಪ್ತಿಯಲ್ಲಿ ಪಟ್ಟಣದ ಅಭಿವೃದ್ಧಿಗೆ ಮುಂದಾಗೋಣ ಎಂದು ಅಧಿಕಾರಿಗಳ ಜೊತೆಗೂಡಿ ಸಾಕಷ್ಟು ಸಭೆಗಳಲ್ಲಿ ಕರೆದು ಚರ್ಚೆ ಮಾಡಿದ್ದೇನೆ. ಹಗರಣಗಳಿಗೆ ಕಡಿವಾಣ ಹಾಕಲು ನಾನು ಮುಂದಾದರೆ ಅಧಿಕಾರಿಗಳು ಎಲ್ಲರೂ ಒಟ್ಟುಗೂಡಿ ಸಾಮೂಹಿಕ ವರ್ಗಾವಣೆಗೆ ಮುಂದಾಗುತ್ತಾರೆ ಎಂದರೆ, ಇದೆಂಥ ದುರ್ವಿಧಿ ಎಂದು ಬೇಸರ ವ್ಯಕ್ತಪಡಿಸಿದರು.

ಉತ್ತಮ ರೀತಿಯಲ್ಲಿ ಪಟ್ಟಣವನ್ನು ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕೆಲಸ ಮಾಡಿ ಎಂದು ಹಲವಾರು ಬಾರಿ ಅಧಿಕಾರಿಗಳಿಗೆ ಮನದಟ್ಟು ಮಾಡಿದರು, ಅಧಿಕಾರಿಗಳು ಅಭಿವೃದ್ಧಿಗೆ ಒತ್ತು ಕೊಡುತ್ತಿಲ್ಲ ಅದಕ್ಕೆ ಜಿಲ್ಲಾಧಿಕಾರಿಗಳಿಗೆ ದೂರು ನೀಡಿದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿಗಳು ಪರಿಶೀಲನೆ ಮಾಡಿ ಕ್ರಮ ಜರುಗಿಸುವ ಭರವಸೆ ನೀಡಿದ್ದಾರೆ ಎಂದರು.

ಹಗರಣ: ಪೈಪ್‌ಲೈನ್, ಮೋಟಾರ್ ಕಾಮಗಾರಿಯಲ್ಲಿ 18 ಲಕ್ಷ, ಬೀದಿದೀಪ ಕೆಲಸದಲ್ಲಿ 11ಲಕ್ಷ, ಸೇರಿದಂತೆ ಇನ್ನಿತರ ಕಾಮಗಾರಿಗಳಲ್ಲಿ ಅವ್ಯವಹಾರ ನಡೆಸಲಾಗಿದೆ. ಅಧಿಕಾರಿಗಳು ಪ್ರತಿ ಬಾರಿಯೂ ಒಬ್ಬ ವ್ಯಕ್ತಿಗೆ ಮಾತ್ರ ಟೆಂಡರ್ ನೀಡುತ್ತಿದ್ದಾರೆ. ಬೋರ್‌ವೆಲ್ ಮೋಟಾರ್‌ಗಳ ವಿಚಾರದಲ್ಲಿ ಸುಮಾರು 4.10 ಲಕ್ಷ ರೂ. ಖರ್ಚು ಮಾಡಿ ಮೋಟಾರ್ ಬದಲಾಯಿಸಿದ್ದು, ಮೋಟಾರ್‌ಗಳೇ ನಾಪತ್ತೆಯಾಗಿವೆ. ಪುರಸಭೆಯ ಅಭಿವೃದ್ಧಿ ವಿಚಾರದಲ್ಲಿ ಅಧಿಕಾರಿಗಳು ಕಾಳಜಿ ವಹಿಸುತ್ತಿಲ್ಲ. ಅಭಿವೃದ್ಧಿ ವಿಚಾರವಾಗಿ ಸಾಕಷ್ಟು ಸಭೆಗಳನ್ನು ಕರೆದು ಚರ್ಚೆ ಮಾಡಿದರೂ ಕೂಡ ಇದರ ಬಗ್ಗೆ ಗಮನ ಹರಿಸುತ್ತಿಲ್ಲ ಎಂದರು. ಇದೇ ಸಂದರ್ಭದಲ್ಲಿ ಸದಸ್ಯರುಗಳಾದ ಮಿಲ್ ನಾಗರಾಜ್, ಹರೀಶ್ ಗೌಡ ಇದ್ದರು.



"ಪುರಸಭಾ ಕಚೇರಿಯಲ್ಲಿ ಅಧಿಕಾರಿಗಳ ಕೊರತೆ, ಕೆಲಸಗಾರರ ಕೊರತೆ, ಇರುವ ಹಿನ್ನೆಲೆಯಲ್ಲಿ ಕೆಲವು ಅಭಿವೃದ್ಧಿ ಕೆಲಸಗಳು ಕುಂಠಿತವಾಗಿವೆ. ನಾನು ಮುಖ್ಯಾಧಿಕಾರಿಯಾಗಿ ಬಂದಾಗಿನಿಂದ, ಯಾವುದೇ ಲೋಪದೋಷಗಳು ಪುರಸಭೆಯಲ್ಲಿ ನಡೆಯದ ಹಾಗೆ ನೋಡಿಕೊಳ್ಳುತ್ತಿದ್ದೇನೆ. ಕೆಲವು ಅಧಿಕಾರಿಗಳ ಬೇಜವಾಬ್ದಾರಿತನದಿಂದ ಇಂತಹ ಸಂಗತಿಗಳು ನಡೆದಿದ್ದರೆ, ಮುಂದಿನ ದಿನದಲ್ಲಿ ಸರಿಪಡಿಸಲಾಗುವುದು.
-ಸುರೇಶ್.
ಪುರಸಭಾ ಮುಖ್ಯ ಅಧಿಕಾರಿ

"ಪುರಸಭೆ ವ್ಯಾಪ್ತಿಯಲ್ಲಿ ಪುರಸಭೆ ಅನುಮತಿ ಪಡೆಯದೆ ಅನಧಿಕೃತವಾಗಿ ಹೊರಗಿನವರು ಬಂದು ಜಮೀನು ಖರೀದಿಸಿ ಲೇಔಟ್ ನಿರ್ಮಾಣ ಮಾಡುತ್ತಿದ್ದಾರೆ. ಪುರಸಭೆಯಲ್ಲಿ 10 ಕೋಟಿ ಹೆಚ್ಚು ಹಗರಣಗಳು ನಡೆದಿರುವ ಹಿನ್ನೆಲೆಯಲ್ಲಿ, 378 ಪುಟಗಳ ವರದಿಯನ್ನು ಜಿಲ್ಲಾಧಿಕಾರಿಗಳಿಗೆ ನೀಡಲಾಗಿದೆ. ಈ ಸಂಬಂಧ ಜಿಲ್ಲಾಧಿಕಾರಿಗಳು ಪರಿಶೀಲನೆ ಮಾಡಿ ಕ್ರಮ ಕೈಗೊಳ್ಳುವ ಭರವಸೆ ನೀಡಿದ್ದಾರೆ.
-ಐಡಿಯಾ ವೆಂಕಟೇಶ್.
ಪುರಸಭಾ ಸ್ಥಾಯಿ ಸಮಿತಿ ಅಧ್ಯಕ್ಷ,

ತಂಗಳು ಮಾಂಸ ಮಾರುತ್ತಿದ್ದ ಹೋಟೆಲ್‌ಗೆ 6,400 ರೂ. ದಂಡ

ಕೆ.ಆರ್.ನಗರ, ಜು.4– ಫ್ರಿಡ್ಜ್‌ನಲ್ಲಿಟ್ಟು ತಂಗಳು ಮಾಂಸವನ್ನು ಗ್ರಾಹಕರಿಗೆ ಮಾರಾಟ ಮಾಡುತ್ತಿದ್ದ ಹೋಟೆಲ್ ಮೇಲೆ ದಾಳಿ ನಡೆಸಿದ ಆರೋಗ್ಯ ಇಲಾಖೆಯ ತಾಲೂಕು ಮಟ್ಟದ ಸಮನ್ವಯ ಸಮಿತಿಯ ಅಧಿಕಾರಿಗಳು ಮತ್ತು ಸಿಬ್ಬಂದಿ 6,400 ರೂ. ದಂಡ ವಿಧಿಸಿ, ಎಚ್ಚರಿಕೆ ನೀಡಿದ್ದಾರೆ. ಪಟ್ಟಣದ ಗಣೇಸ್ ಫ್ಯಾಮಿಲಿ ರೆಸ್ಟೋರೆಂಟ್‌ನಲ್ಲಿ ಬೇರೆ ಪ್ರಾಣಿಗಳ ಮಾಂಸದೂಟವನ್ನು ತಯಾರು ಮಾಡಿ ಗ್ರಾಹಕರಿಗೆ ಬಡಿಸುತ್ತಿದ್ದಾರೆ ಎಂದು ಸಾಮಾಜಿಕ ಜಾಲತಾಣದಲ್ಲಿ ಸುದ್ದಿ ಹರಡಿದ್ದ ಹಿನ್ನೆಲೆಯಲ್ಲಿ ಈ ದಾಳಿ ನಡೆಸಿದಾಗ ಅಲ್ಲಿ ಯಾವುದೇ ರೀತಿಯ ಬೇರೆ ಪ್ರಾಣಿಗಳ ಮಾಂಸ ಬಳಕೆ ಮಾಡಲಾಗುತ್ತಿಲ್ಲ ಎಂಬುದು ದೃಢಪಟ್ಟಿದೆ ಎಂದು ತಾಲೂಕು ಆರೋಗ್ಯಾಧಿಕಾರಿ ಡಾ. ಕೆ.ಆರ್.ಮಹೇಂದ್ರಪ್ಪ ತಿಳಿಸಿದರು.



ತಾಲೂಕು ಮಟ್ಟದ ಸಮನ್ವಯ ಸಮಿತಿಯ ಅಧ್ಯಕ್ಷರಾದ ತಹಶೀಲ್ದಾರ್ ನೇತೃತ್ವದಲ್ಲಿ ಜೂ.22 ರಂದು ಸಮಿತಿಯ ಸದಸ್ಯರೊಂದಿಗೆ ರಾಷ್ಟ್ರೀಯ ತಂಬಾಕು ನಿಯಂತ್ರಣ ಕಾರ್ಯಕ್ರಮದಡಿಯಲ್ಲಿ ರೆಸ್ಟೋರೆಂಟ್ ಮೇಲೆ ದಾಳಿ ನಡೆಸಿ ಪರಿಶೀಲಿಸಲಾಯಿತು ಎಂದು ವಿವರಿಸಿದರು. ಭೇಟಿಯ ವೇಳೆ ತಂಗಳು ಮಾಂಸ ಫ್ರಿಡ್ಜ್‌ನಲ್ಲಿ ಶೇಖರಿಸಿಟ್ಟಿರುವುದು ಕಂಡು ಬಂದಿದ್ದು, ಅದನ್ನು ನಮ್ಮ ತಂಡದಲ್ಲಿದ್ದ ಪುರಸಭಾ ಆರೋಗ್ಯ ನಿರೀಕ್ಷಕರ ತಂಡ ವಶಪಡಿಸಿಕೊಂಡು ಪುರಸಭೆಯಿಂದ 6 ಸಾವಿರ ರೂ. ಹಾಗೂ ನಮ್ಮ ಇಲಾಖೆಯಿಂದ 400 ರೂಪಾಯಿಗಳ ದಂಡ ವಿಧಿಸಿ ಎಚ್ಚರಿಕೆ ನೀಡಲಾಗಿದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ವಿವರಿಸಿದರು.

ಗುರು ಆಧ್ಯಾತ್ಮಿಕ ಮಾರ್ಗದರ್ಶಿ: ವಿರಕ್ತ ಮಠದ ಶ್ರೀಗಳು



ಸರಗೂರು, ಜು. 4–ಆಧ್ಯಾತ್ಮಿಕ ಮಾರ್ಗದರ್ಶಿ ಎಂದರೆ ಅದುವೇ ಗುರು. ತಮ್ಮ ಶಿಷ್ಯರ ಜೀವನವನ್ನು ರೂಪಿಸುವಲ್ಲಿ ಮತ್ತು ಪೋಷಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಈ ಮಾರ್ಗದರ್ಶಕರಿಗೆ ಗೌರವ ಸಲ್ಲಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ಬಿಡುಗಲು ಪಡುವಲು ವಿರಕ್ತ ಮಠದ ಮಹದೇವಸ್ವಾಮೀಜಿ ತಿಳಿಸಿದ್ದಾರೆ.

ಗುರುಪೂರ್ಣಿಮ ಪ್ರಯುಕ್ತ ಸರಗೂರು ಬಿಡುಗಲು ಪಡುವಲು ವಿರಕ್ತ ಮಠದಲ್ಲಿ ಶ್ರೀ ಕಾಳಒಡೆಯ ಗುರುಗಳ ಗದ್ದಿಗೆ ಮತ್ತು ಶ್ರೀ ವೀರಭದ್ರ ಸ್ವಾಮಿಗೆ ರುದ್ರಾಭಿಷೇಕ ಮತ್ತು ಪೂಜಾ ಕೈಂಕರ್ಯವನ್ನು ನಡೆಸಿ ಭಕ್ತರಿಗೆ ಆಶೀರ್ವಚನ ನೀಡಿ ಮಾತನಾಡಿದ ಅವರು, ಗುರು ಎಂಬ ಪದದ ಅರ್ಥ ಕತ್ತಲೆಯನ್ನು ಹೋಗಲಾಡಿಸುವವನು. ಒಬ್ಬ ಗುರುವನ್ನು ಆಧ್ಯಾತ್ಮಿಕ ಮಾರ್ಗದರ್ಶಿ ಎಂದು ಪರಿಗಣಿಸಲಾಗುತ್ತದೆ ಎಂದರು.

ತಮ್ಮ ಶಿಷ್ಯರನ್ನು ಜ್ಞಾನ, ಬುದ್ಧಿವಂತಿಕೆ ಮತ್ತು ಆಧ್ಯಾತ್ಮಿಕ ಬೆಳವಣಿಗೆಯ ಹಾದಿಯಲ್ಲಿ ಬೆಳಗಿಸುತ್ತಾರೆ ಮತ್ತು ಮುನ್ನಡೆಸುತ್ತಾರೆ. ಗುರು ಪೂರ್ಣಿಮೆಯು ತಮ್ಮ ಶಿಷ್ಯರ ಜೀವನವನ್ನು ರೂಪಿಸುವಲ್ಲಿ ಮತ್ತು ಪೋಷಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿ ಸದಾ ನಮ್ಮ ಏಳಿಗೆಯನ್ನು ಬಯಸಿದ ಗುರುಗಳಿಗೆ ಕೃತಜ್ಞತೆಯನ್ನು ಸಲ್ಲಿಸೋಣ ಎಂದು ಗುರುಪೂರ್ಣಿಮೆಯ ಮಹತ್ವವನ್ನು ಭಕ್ತರಿಗೆ ತಿಳಿಸಿಕೊಟ್ಟರು.

ಪೂಜೆ ಮತ್ತು ಮಹಾ ಮಂಗಳಾರತಿ ನಂತರ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ಗುರುಪೂರ್ಣಿಮೆ ಪ್ರಯುಕ್ತ ನೆರೆಹೊರೆಯ ತಾಲೂಕಿನಿಂದ ಭಕ್ತರು ಶ್ರೀಮಠಕ್ಕೆ ಆಗಮಿಸಿ ಗುರುಗಳ ಮತ್ತು ಗದ್ದಿಗೆ ದರ್ಶನ ಪಡೆದರು.

ಶ್ರೀಮತಿ ರೇವಮ್ಮ ಮತ್ತು ಶಿವರುದ್ರಪ್ಪ, ಮಂಜು ಎನ್. ರಾಮೇನಹಳ್ಳಿ, ಶಿವಪ್ರಕಾಶ್, ಎಂ.ಪರಮೇಶ್ವರ್ ಅವರುಗಳು ಪೂಜೆಯಲ್ಲಿ ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಶ್ರೀ ಕಾಳ ಒಡೆಯ ಗುರುಗಳ ಮಹಾವಿದ್ಯಾಪೀಠದ ಆಡಳಿತ ಮಂಡಳಿ ಸದಸ್ಯರು ಮತ್ತು ಬಿಡುಗಲು ಗ್ರಾಮಸ್ಥರು ನೆರೆದಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಕೋಟೆ ಯುವಕ ಸಾವು
ಮೃತನ ಮನೆಗೆ ತಹಸೀಲ್ದಾರ್ ಭೇಟಿ, ಸಾಂತ್ವನ





ಹೆಚ್.ಡಿ.ಕೋಟೆ, ಜು.4– ಶವವನ್ನು ಭಾರತಕ್ಕೆ ತರಲು ಎಲ್ಲಾ ರೀತಿಯ ನೆರವನ್ನು ಭಾರತದ ದೂತವಾಸ ಕಚೇರಿ ಅಧಿಕಾರಿ ಪುರುಸೋತ್ತಮ್ ಸ್ಯಾಮಲ್ ಅಮು ಮಾಡಿಕೊಡುವ ಸಾಧ್ಯತೆ ಇದೆ ಎಂದು ಮೃತ ಎಫ್ರಾಯಿಂ ಚಿಕ್ಕಪ್ಪ ಬಿಲ್ಲಾ ತಿಳಿಸಿದ್ದಾರೆ.

ತಾಲೂಕಿನ ಟೈಗರ್ ಬ್ಲಾಕ್ ನಿವಾಸಿ ಎಫ್ರಾಯಿಂ (19) ಆಫ್ರಿಕಾದ ಐವರಿಕೋಸ್ಟ್‌ನಲ್ಲಿ ಸೋಮವಾರ ಡೆಂಗ್ಯೂ ಜ್ವರದಿಂದ ಮೃತಪಟ್ಟಿದ್ದು, ಮೃತ ಎಫ್ರಾಯಿಂ, ಚಿಕ್ಕಪ್ಪ ಬಿಲ್ಲಾ ಮತ್ತು ಇತರರೊಂದಿಗೆ ಗಿಡಮೂಲಿಕೆ ಎಣ್ಣೆ ಮಾರಲು ಐವರಿಕೋಸ್ಟ್‌ಗೆ 2022ರ ಆಗಸ್ಟ್‌ನಲ್ಲಿ ತೆರಳಿದ್ದರು. ಅಲ್ಲಿನ ನಗರ ಪಟ್ಟಣಗಳಲ್ಲಿ ಗಿಡಮೂಲಿಕೆ ಎಣ್ಣೆಯನ್ನು ಮಾರುತ್ತ ಜೀವನ ಸಾಗಿಸಿದ್ದರು ಎನ್ನಲಾಗಿದೆ.


ವಿಚಾರ ತಿಳಿದು ಟೈಗರ್ ಬ್ಲಾಕ್ ಗ್ರಾಮಕ್ಕೆ ತಹಶೀಲ್ದಾರ್ ಸಣ್ಣರಾಮಪ್ಪ ತೆರಳಿ ಕುಟುಂಬದವರ ಜೊತೆ ಮಾತನಾಡಿ ಮೃತ ದೇಹವನ್ನು ಭಾರತಕ್ಕೆ ತರುವ ಬಗ್ಗೆ ಜಿಲ್ಲಾ ಅಧಿಕಾರಿಗಳಿಗೆ ಸಂಪೂರ್ಣ ವರದಿಯನ್ನು ಸಲ್ಲಿಸಿದ್ದೇವೆ ಎಂದು ತಿಳಿಸಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.

ಮೃತ ಎಫ್ರಾಯಿಂ ತಾಯಿ ಮಾತನಾಡಿ, ನನ್ನ ಮಗನೆ, ನನ್ನ ಕುಟುಂಬಕ್ಕೆ ಮುಖ್ಯ ವಾರಸುದಾರನಾಗಿ ದುಡಿಯುತ್ತಿದ್ದ, ನನ್ನ ಎರಡು ಹೆಣ್ಣು ಮಕ್ಕಳ ಸಂಪೂರ್ಣ ಜವಾಬ್ದಾರಿಯನ್ನ ಅವನೇ ಹೊತ್ತುಕೊಂಡಿದ್ದ, ದುರ್ವಿಧಿ ಇಂತ ಸಾವು ನನ್ನ ಮಗನಿಗೆ ಬರುತ್ತದೆ ಎಂದು ನಾನು ಅಂದುಕೊಂಡಿರಲಿಲ್ಲ. ನನ್ನ ಮಗನ ಮುಖ ನೋಡಲು ಸರ್ಕಾರ ಮೃತದೇಹವನ್ನು ನಮಗೆ ಕೊಡಿಸಬೇಕು ಎಂದು ಕಣ್ಣೀರಿಟ್ಟು, ಮನವಿ ಮಾಡಿದರು. ನನ್ನ ಎರಡು ಹೆಣ್ಣು ಮಕ್ಕಳು ಅನಾಥರಾಗಿದ್ದಾರೆ, ನನ್ನ ಈ ಎರಡು ಹೆಣ್ಣು ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿಕೊಡುವಂತೆ ಇದೇ ಸಂದರ್ಭದಲ್ಲಿ ಅಧಿಕಾರಿಗಳಲ್ಲಿ ಮನವಿ ಮಾಡಿದರು.

ಮೃತ ಎಫ್ರಾಯಿಂ ತಂಗಿ ಕನ್ನಿಕ ಮಾತನಾಡಿ, ನಮ್ಮಿಬ್ಬರನ್ನು ಓದಿಸಿ ದೊಡ್ಡ ಹುದ್ದೆಗೆ ಸೇರಿಸುತ್ತೇನೆ ಎಂಬ ಆಶಾಭಾವನೆಯನ್ನು ಇಟ್ಟುಕೊಂಡು ಆಫ್ರಿಕಾಗೆ ತೆರಳಿದ್ದ. ನೀವು ಚೆನ್ನಾಗಿ ಓದಿ ಅದಕ್ಕೆ ಎಷ್ಟು ಖರ್ಚಾದರೂ ಪರವಾಗಿಲ್ಲ ನಾನಿದ್ದೇನೆ ಎಂದು ಧೈರ್ಯ ತುಂಬುತ್ತಿದ್ದ. ಅವನ ಆಸೆಯಂತೆ ನಾನು ಪ್ರಥಮ ಪಿಯುಸಿ ಓದುತ್ತಿದ್ದೇನೆ. ಆದರೆ ನನ್ನ ಆರಾಧ್ಯ ದೈವ ನನ್ನ ಅಣ್ಣನನ್ನು ಕಳೆದುಕೊಂಡು ನಾನು ಯಾವ ರೀತಿ ಬದುಕಲಿ. ಸರ್ಕಾರದವರು ನನ್ನ ಅಣ್ಣನ ದೇಹವನ್ನು ದಯಮಾಡಿ ನಮಗೆ ಕೊಡಿಸಿ ಕೊಡಿ. ಅವರ ಮುಖವನ್ನು ನೋಡಬೇಕು. ಇಲ್ಲದಿದ್ದರೆ ನಾನು ಓದಲು ಸಾಧ್ಯವಿಲ್ಲ ಎಂದು ಅಳಲು ತೋಡಿಕೊಂಡರು. ಇದೇ ಸಂದರ್ಭದಲ್ಲಿ ಪರಿಶಿಷ್ಟ ಕಲ್ಯಾಣ ವರ್ಗಗಳ ಅಧಿಕಾರಿ ನಾರಾಯಣಸ್ವಾಮಿ, ಕಂದಾಯ ಅಧಿಕಾರಿ ಮಹೇಶ್, ಗ್ರಾಮ ಲೆಕ್ಕಿಗ ದಿವ್ಯಾ ಇದ್ದರು.

ಗ್ಯಾರಂಟಿಗಳನ್ನು ಜನರಿಗೆ ತಲುಪಿಸುವ ಕೆಲಸ ಮಾಡಿ

ತಿ.ನರಸೀಪುರ, ಜು.4– ರಾಜ್ಯದ ಜನತೆ ಕಾಂಗ್ರೆಸ್ ಪಕ್ಷದ ಮೇಲೆ ನಂಬಿಕೆಯಿಟ್ಟು ಅಧಿಕಾರವನ್ನು ನೀಡಿರುವುದರಿಂದ ಕಾರ್ಯಕರ್ತರು ಚುನಾವಣೆ ಪೂರ್ವದಲ್ಲಿ ನೀಡಿದ್ದ 5 ಗ್ಯಾರಂಟಿಗಳನ್ನು ಸಾಮಾನ್ಯ ಜನರಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದು ವಸತಿ ಯೋಜನೆ ಸಮಿತಿಯ ಮಾಜಿ ಅಧ್ಯಕ್ಷ ಸುನೀಲ್ ಬೋಸ್ ತಿಳಿಸಿದ್ದಾರೆ.



ತಾಲೂಕಿನ ಬನ್ನೂರು ಪಟ್ಟಣದಲ್ಲಿ ಪುರಸಭೆ ಮಾಜಿ ಅಧ್ಯಕ್ಷ ಮುನಾವ್ ಪಾಷ ಅವರ ನಿವಾಸಕ್ಕೆ ತೆರಳಿ ಅವರನ್ನು ಸನ್ಮಾನಿಸಿ ಮಾತನಾಡಿದ ಅವರು, ಬಡವರ ಬದುಕನ್ನು ಹಸನುಗೊಳಿಸುವ ಕಾಂಗ್ರೆಸ್ ಸರ್ಕಾರದ ಮಹತ್ವಾಕಾಂಕ್ಷೆಯ 5 ಗ್ಯಾರಂಟಿಗಳ ಬಗ್ಗೆ ವಿಪಕ್ಷಗಳು ಗೊಂದಲ ಸೃಷ್ಟಿಸಿದ್ದು, ನಮ್ಮ ಪಕ್ಷದ ಕಾರ್ಯಕರ್ತರು ಹಾಗೂ ಮುಖಂಡರು ಜನರ ಸಂಪರ್ಕದಲ್ಲಿ ಇದ್ದುಕೊಂಡು ಯೋಜನೆಗಳು ಅವರಿಗೆ ತಲುಪುವಂತೆ ನೋಡಿಕೊಳ್ಳಬೇಕು ಎಂದು ಮನವಿ ಮಾಡಿದರು.

ಕ್ಷೇತ್ರದ ಜನರ ಜೊತೆ ನಿರಂತರ ಸಂಪರ್ಕದಲ್ಲಿ ಇದ್ದುಕೊಂಡು ಸಮಸ್ಯೆಗಳಿಗೆ ಸ್ಪಂದಿಸಿ, ಯಾವುದೇ ಅಪಪ್ರಚಾರಕ್ಕೆ ಜನತೆ ಕಿವಿಗೊಡದೆ ಸಾರ್ವಜನಿಕ ಸಮಸ್ಯೆಗಳನ್ನು ಖುದ್ದಾಗಿ ಸಚಿವರು ಅಥವಾ ನನ್ನ ಗಮನಕ್ಕೆ ತರಬೇಕು ಎಂದು ತಿಳಿಸಿದರು. ಸೊಂಯಲ್, ಮೂರ್ತಿ, ರಾಮಲಿಂಗು, ಶಿವಮೂರ್ತಿ, ಶಿವಕುಮಾರ್, ಸರ್ದಾರ್, ಜಮರನ್, ರಮೇಶ್, ಅಶೋಕ, ಕೃಷ್ಣೇಗೌಡ ಮತ್ತಿತರಿದ್ದರು.

ಬೈಕಿಗೆ ಮತ್ತೊಂದು ಬೈಕ್ ಡಿಕ್ಕಿ: ಮೈಸೂರಿನ ವ್ಯಕ್ತಿ ಸೇರಿ ಇಬ್ಬರು ದುರ್ಮರಣ

ನಂಜನಗೂಡು, ಜು.4– ಅಪರಿಚಿತ ಬೈಕೊಂದು ಮತ್ತೊಂದು ಬೈಕಿಗೆ ಡಿಕ್ಕಿ ಹೊಡೆದ ಪರಿಣಾಮ ಇಬ್ಬರು ಬೈಕ್ ಸವಾರರು ಸಾವನ್ನಪ್ಪಿ, ಮತ್ತೋರ್ವ ಗಾಯಗೊಂಡಿರುವ ಘಟನೆ ಚಾಮರಾಜನಗರ ಮತ್ತು ನಂಜನಗೂಡು ರಸ್ತೆಯ ತಾಲೂಕಿನ ಬದನವಾಳು ಗ್ರಾಮದ ಬಳಿ ಜರುಗಿದೆ. ಮೈಸೂರು ನಗರದ ಭೋಗಾದಿ ನಿವಾಸಿ ಮಹದೇವಸ್ವಾಮಿ (35), ಕೆ.ಆರ್.ನಗರದ ಪ್ರಜ್ವಲ್ (25) ಮೃತರು. ಮಹಾದೇವಸ್ವಾಮಿ, ಪ್ರಜ್ವಲ್ ಮತ್ತು ನಂಜುಂಡ ಈ ಮೂವರು ಸ್ನೇಹಿತರಾಗಿದ್ದು, ಸೋಮವಾರ ಈ ಮೂವರು ಒಂದೇ ಬೈಕ್‌ನಲ್ಲಿ ಚಾಮರಾಜನಗರದ ಚಾಮರಾಜೇಶ್ವರ ಜಾತ್ರೆ ಮಹೋತ್ಸವದಲ್ಲಿ ಭಾಗವಹಿಸಿ ಸಂಜೆ 5 ರ ಸಮಯದಲ್ಲಿ ವಾಪಸ್ ಹಿಂತಿರುಗುತ್ತಿದ್ದರು ಎನ್ನಲಾಗಿದೆ. ಈ ವೇಳೆ ತಾಲೂಕಿನ ಬದನವಾಳು ಗ್ರಾಮದ ಬಳಿ ಮತ್ತೊಂದು ಅಪರಿಚಿತ ಬೈಕೊಂದು ವಾಹನವನ್ನು ಹಿಂದಿಕ್ಕುವ ಬರದಲ್ಲಿ ಡಿಕ್ಕಿ ಹೊಡೆದು ಪರಾರಿಯಾಯಿತು ಎನ್ನಲಾಗಿದೆ. ಒಂದೇ ಬೈಕ್‌ನಲ್ಲಿದ್ದ ಮಹದೇವಸ್ವಾಮಿ ಮತ್ತು ಪ್ರಜ್ವಲ್ ಅವರಿಗೆ ತೀವ್ರವಾದ ಗಾಯವಾಗಿ ಚಿಕಿತ್ಸೆಗೆಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು. ಚಿಕಿತ್ಸೆ ಫಲಕಾರಿಯಾಗದೆ ಮಂಗಳವಾರ ಇಬ್ಬರೂ ಮೃತಪಟ್ಟಿದ್ದಾರೆ. ಮತ್ತೊಬ್ಬ ಬೈಕ್ ಸವಾರ ನಂಜುಂಡ ಸಣ್ಣಪುಟ್ಟ ಗಾಯಗಳಿಂದ ಪ್ರಾಣಾಪಾಯದಿಂದ ಪಾರಾಗಿದ್ದಾನೆ. ಅಪಘಾತ ನಡೆಸಿದ ಬೈಕ್ ಸವಾರ ಪರಾರಿಯಾಗಿದ್ದಾನೆ ಎಂದು ಕವಲಂದೆ ಪೊಲೀಸ್ ಠಾಣೆಯ ಪಿಎಸ್‌ಐ ಕೃಷ್ಣಕಾಂತ್ ಕೋಳಿ ತಿಳಿಸಿದ್ದಾರೆ. ಈ ಸಂಬಂಧ ತಾಲೂಕಿನ ಕವಲಂದೆ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಸಹೋದರಿಯರ ವಿವಾಹವಾಗಿಲ್ಲ ಎಂದು ಮನನೊಂದು ಯುವಕ ಆತ್ಮಹತ್ಯೆ

ಮಲ್ಲುಂಡಿ, ಜು.4– ತನ್ನ ಅಕ್ಕ ಮತ್ತು ತಂಗಿಗೆ ಇನ್ನೂ ಮದುವೆಯಾಗಿಲ್ಲ ಎಂದು ಜಿಗುಪ್ಸೆಗೊಂಡ ಯುವಕನೊಬ್ಬ ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಸಮೀಪದ ಸಿದ್ದೇಗೌಡನಹುಂಡಿ ಗ್ರಾಮದಲ್ಲಿ ನಡೆದಿದೆ.



ಗ್ರಾಮದ ಮಹೇಶ್ ಕುಮಾರ್(28) ಆತ್ಮಹತ್ಯೆಗೆ ಶರಣಾದ ದುರ್ದೈವಿ. ತನಗೆ ಒಬ್ಬ ಅಕ್ಕ ಮತ್ತು ಒಬ್ಬ ತಂಗಿ ಇದ್ದು ಅವರಿಗೆ ಇನ್ನೂ ವಿವಾಹವಾಗಿಲ್ಲ ಎಂದು ತನ್ನ ಜೀವನದಲ್ಲಿ ಜಿಗುಪ್ಸೆಗೊಂಡು ಶನಿವಾರ ತಮ್ಮ ಜಮೀನಿನಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂದು ದೂರಿನಲ್ಲಿ ಹೇಳಲಾಗಿದೆ. ಸ್ಥಳಕ್ಕೆ ಹುಲ್ಲಹಳ್ಳಿ ಪಿಎಸ್‌ಐ ರಮೇಶ ಕಟ್ಟಿ ಭೇಟಿ ನೀಡಿ ಪರಿಶೀಲನೆ ನಡೆಸಿ ಪ್ರಕರಣ ದಾಖಲಿಸಿಕೊಂಡಿದ್ದಾರೆ. ಶವವನ್ನು ನಂಜನಗೂಡಿನ ಸಾರ್ವಜನಿಕ ಆಸ್ಪತ್ರೆಯಲ್ಲಿ ಶವ ಪರೀಕ್ಷೆ ನಡೆಸಿ ವಾರಸುದಾರರಿಗೆ ನೀಡಲಾಯಿತು.

ಉತ್ತರ ಪ್ರದೇಶ ಸರ್ಕಾರ ವಜಾಕ್ಕೆ ಆಗ್ರಹಿಸಿ ದಸಂಸ ಪ್ರತಿಭಟನೆ



ತಿ.ನರಸೀಪುರ, ಜು.4– ಶೋಷಿತರ ಹಕ್ಕುಗಳಿಗಾಗಿ ಉತ್ತರ ಪ್ರದೇಶದಲ್ಲಿ ಹೋರಾಟ ನಡೆಸುತ್ತಿದ್ದ ಭೀಮ್ ಆರ್ಮಿಯ ರಾಷ್ಟ್ರೀಯ ಮುಖ್ಯಸ್ಥರಾದ ಚಂದ್ರಶೇಖರ್ ಆಜಾದ್ ರಾವಣ್ ಅವರ ಮೇಲೆ ಕಿಡಿಗೇಡಿಗಳ ಗುಂಪು ಗುಂಡಿನ ದಾಳಿ ನಡೆಸಿರುವುದನ್ನು ಖಂಡಿಸಿ ದಲಿತ ಸಂಘರ್ಷ ಸಮಿತಿಯ ತಾಲೂಕು ಘಟಕದ ಸದಸ್ಯರು ಮಂಗಳವಾರ ತಾಲೂಕು ಕಚೇರಿ ಮುಂದೆ ಧರಣಿ ನಡೆಸಿದರು.

ಪಟ್ಟಣದ ಮಿನಿ ವಿಧಾನಸೌಧದಲ್ಲಿರುವ ತಾಲೂಕು ಕಚೇರಿ ಮುಂದೆ ಜಮಾವಣೆಗೊಂಡ ದಸಂಸ ಸದಸ್ಯರು ಚಂದ್ರಶೇಖರ್ ಆಜಾದ್ ರಾವಣ್ ಅವರ ಮೇಲೆ ನಡೆದ ಗುಂಡಿನ ದಾಳಿಯನ್ನು ಖಂಡಿಸಿ ಉತ್ತರ ಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ವಿರುದ್ಧ ಧಿಕ್ಕಾರದ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿ, ಉತ್ತರ ಪ್ರದೇಶ ಸರ್ಕಾರವನ್ನು ವಜಾಗೊಳಿಸಿ ರಾಷ್ಟ್ರಪತಿ ಆಡಳಿತ ಜಾರಿಗೆ ಆಗ್ರಹಿಸಿದರು.

ಈ ವೇಳೆ ಮಾತನಾಡಿದ ದಸಂಸ ತಾಲೂಕು ಸಂಚಾಲಕ ಕೆಂಪಯ್ಯನಹುಂಡಿ ಆರ್.ರಾಜು, ಜೂನ್ 27 ರಂದು ಭೀಮ್ ಆರ್ಮಿಯ ರಾಷ್ಟ್ರೀಯ ಮುಖ್ಯಸ್ಥರಾದ ಚಂದ್ರಶೇಖರ್ ಆಜಾದ್ ರಾವಣ್ ಅವರು ಅಂಬೇಡ್ಕರ್ ವಾದಿಯಾಗಿ ಅನ್ಯಾಯಕ್ಕೊಳಗಾದ ಶೋಷಿತರ ಹಕ್ಕುಗಳಿಗಾಗಿ ರಾಷ್ಟ್ರಾದ್ಯಂತ ಹೋರಾಟ ನಡೆಸುತ್ತಿದ್ದು,ಉತ್ತರ ಪ್ರದೇಶದ ಸಹಾರನ್‌ಪುರದ ದೇವಬಂದ್ ಎಂಬಲ್ಲಿ ಹೋರಾಟ ನಡೆಸುತ್ತಿದ್ದ ವೇಳೆ ಬಹುಜನ್ ಮಿಶನ್ ಹೋರಾಟ ಸಹಿಸಿಕೊಳ್ಳದ ಕೆಲ ಕಿಡಿಗೇಡಿಗಳು ಚಳುವಳಿ ನಿಲ್ಲಿಸುವ ಸಲುವಾಗಿ ಹಾಗೂ ಕೊಲೆ ಮಾಡುವ ಉದ್ದೇಶದಿಂದ ಗುಂಡಿನ ದಾಳಿ ನಡೆಸಿರುವುದು ಹೇಯಕೃತ್ಯವಾಗಿದ್ದು ಇದು ಸರ್ಕಾರದ ಬೇಜವಾಬ್ದಾರಿತನವನ್ನು ತೋರಿಸುತ್ತದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಮಿತಿಯ ಜಿಲ್ಲಾ ವಿಭಾಗೀಯ ಸಂಚಾಲಕ ಕನ್ನಾಯಕನ ಹಳ್ಳಿ ಮರಿಸ್ವಾಮಿ ಮಾತನಾಡಿ, ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಶೋಷಿತ ದಲಿತರು, ಮುಸ್ಲಿಂ ಸಮುದಾಯವರು ಭೀತಿಯಿಂದ ಜೀವಿಸುವ ಕೆಟ್ಟ ಪರಿಸ್ಥಿತಿ ನಿರ್ಮಾಣವಾಗಿದೆ. ರಾಜ್ಯದಲ್ಲಿ ಗೂಂಡಾ ಆಳ್ವಿಕೆ ನಡೆಸುವ ಮೂಲಕ ಕಾನೂನು ಸುವ್ಯವಸ್ಥೆಯನ್ನು ಸಂಪೂರ್ಣವಾಗಿ ಹಾಳುಗೆಡವಲಾಗಿದೆ. ಹಾಗಾಗಿ ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಮುನ್ನೆಚ್ಚರಿಕೆ ವಹಿಸಬೇಕಿದೆ. ಭೀಮ್ ಆರ್ಮಿಯ ರಾಷ್ಟ್ರೀಯ ಮುಖ್ಯಸ್ಥರಾದ ಚಂದ್ರಶೇಖರ್ ಆಜಾದ್ ರಾವಣ್‌ರವರ ಮೇಲೆ ಗುಂಡಿನ ದಾಳಿ ನಡೆಸಿರುವ ಘಟನೆಯ ಹಿಂದೆ ಸರ್ಕಾರದ ಕೈವಾಡ ಇರುವ ಅನುಮಾನ ಇರುವುದರಿಂದ ಕಿಡಿಗೇಡಿಗಳನ್ನು ಬಂಧಿಸಿ ದೇಶದಿಂದ ಗಡಿಪಾರು ಮಾಡಬೇಕು ಹಾಗು ಪ್ರಕರಣವನ್ನು ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಂದ ತನಿಖೆ ಮಾಡಿಸುವಂತೆ ಒತ್ತಾಯಿಸಿದರು.

ನಂತರ ತಹಶೀಲ್ದಾರ್ ಸಿ.ಜಿ.ಗೀತಾರವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಪ್ರತಿಭಟನಾ ಧರಣಿಯಲ್ಲಿ ಸಮಿತಿಯ ತಾಲೂಕು ಸಂಚಾಲಕರಾದ ಮನೋಜ್ ಕುಮಾರ್, ಸಂಘಟನಾ ಸಂಚಾಲಕರಾದ ಮಾದಿಗಹಳ್ಳಿ ಮಹೇಶ್, ನಿಲಸೋಗೆ ಕುಮಾರ್, ಚೌಹಳ್ಳಿಪರಶುರಾಂ, ಕೆಂಪಯ್ಯನಹುಂಡಿ ಜಯಣ್ಣ, ಕೊಳತ್ತೂರು ಪ್ರಭಾಕರ್, ಕೂಡ್ಲೂರು ಶಿವನಂಜು, ಯಡದೊರೆ ಚಂದ್ರಪ್ಪ ಭೈರಾಪುರ ಅರ್ಜುನ್, ಕುರುಬೂರು ಶಿವರಾಜು, ಮಹದೇವಯ್ಯ, ವಿನಯ್, ದೊಡ್ಡಪುರ ಮಂಚಯ್ಯ, ಮಾರನಪುರ ಕೇಶವಮೂರ್ತಿ, ಮಾಡ್ರಳ್ಳಿ ಗೋವಿಂದ, ದೊಡ್ಡಪುರ ಉಮೇಶ್, ಹ್ಯಾಕನೂರು ಕುಮಾರ, ಮೂಗೂರು ಸೂರ್ಯ, ಗಣೇಶ, ರವಿ, ದೊಡ್ಡಯ್ಯ, ಮಹದೇವಸ್ವಾಮಿ, ರವಿಕಾಂತ್, ನವೀನ್ ಕುಮಾರ್, ಪ್ರದೀಪ್, ನಂದಕುಮಾರ್, ಮೂಗೂರು ಮಹದೇವಸ್ವಾಮಿ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ನಂಜನಗೂಡು ಸರ್ಕಾರಿ ತಾಯಿ, ಮಕ್ಕಳ ಆಸ್ಪತ್ರೆಗೆ ಲಕ್ಷ್ಯ ಪ್ರಶಸ್ತಿ ಗರಿ




ನಂಜನಗೂಡು, ಜು.4– ಸಾಮಾನ್ಯವಾಗಿ ಸರ್ಕಾರಿ ಆಸ್ಪತ್ರೆಗಳು ಅಂದರೆ ಸಾಕು ಅಲ್ಲೇನು ಸೌಲಭ್ಯ ಸಿಗುವುದೇ ಇಲ್ಲ, ಸಾವು ನೋವೇ ಜಾಸ್ತಿ ಅನ್ನೋ ಮಾತು ಕೇಳಿ ಬರುತ್ತದೆ. ಆದರೆ ನಂಜನಗೂಡಿನ ಸರ್ಕಾರಿ ತಾಯಿ ಮತ್ತು ಮಕ್ಕಳ ಆಸ್ಪತ್ರೆಗೆ ಹೆರಿಗೆ ಹಾಗೂ ಶಸ್ತ್ರಚಿಕಿತ್ಸಾ ವಿಭಾಗದಲ್ಲಿ ಉತ್ತಮ ಕಾರ್ಯನಿರ್ವಹಣೆ ಮಾಡಿದ ಪರಿಣಾಮ ಲಕ್ಷ್ಯ ಪ್ರಶಸ್ತಿಗೆ ಭಾಜನವಾಗಿ ಗಮನ ಸೆಳೆದಿದೆ. ಹೆರಿಗೆ ವಿಭಾಗ ಮತ್ತು ಹೆರಿಗೆ ಶಸ್ತ್ರಚಿಕಿತ್ಸಾ ವಿಭಾಗಗಳ ಆರೈಕೆಯಲ್ಲಿ ಗುಣಮಟ್ಟದ ಆರೈಕೆ ನೀಡಿರುವ ಕಾರಣ ಆಸ್ಪತ್ರೆಗೆ ಲಕ್ಷ್ಯ ಪ್ರಶಸ್ತಿ ಬಂದಿದ್ದು ಆ ಮೂಲಕ ತಾಯಿ ಮತ್ತು ಮಕ್ಕಳ ಆಸ್ಪತ್ರೆಯು ರಾಷ್ಟ್ರಮಟ್ಟದಲ್ಲಿ ಗುರುತಿಸುವಂತಾಗಿದೆ. ಅಲ್ಲದೆ ಆಸ್ಪತ್ರೆಗೆ ಹೆಚ್ಚಿನ ಅನುದಾನವು ಬರಲಿದ್ದು, ಆ ಅನುದಾನದಲ್ಲಿ ಆಸ್ಪತ್ರೆಗೆ ಅವಶ್ಯಕತೆ ಇರುವ ಎಲ್ಲಾ ಸೌಲಭ್ಯಗಳನ್ನು ಅಳವಡಿಸಿಕೊಂಡು ಬಡವರಿಗೆ ಉತ್ತಮ ಆರೋಗ್ಯ ಸೌಲಭ್ಯಗಳನ್ನು ಒದಗಿಸಲು ಸಹಾಯಕವಾಗಲಿದೆ ಎಂದು ಆಸ್ಪತ್ರೆಯ ಅಧೀಕ್ಷಕ ಶಿವಪ್ರಸಾದ್ ತಿಳಿಸಿದರು.

ಆಸ್ಪತ್ರೆಯ ವೈದ್ಯರು, ಶುಶ್ರೂಷಕಿಯರು, ದಾದಿಯರು, ಮತ್ತು ಆಸ್ಪತ್ರೆಯ ಸಿಬ್ಬಂದಿ ವರ್ಗದವರ ಪರಿಶ್ರಮದಿಂದ ಆಸ್ಪತ್ರೆಗೆ ಲಕ್ಷ್ಯ ಪ್ರಶಸ್ತಿ ಗರಿ ಲಭಿಸಿರುವುದು ಸಂತಸ ತಂದಿದೆ. ಪ್ರಶಸ್ತಿ ಬರಲು ಕಾರಣರಾದ ಆಸ್ಪತ್ರೆಯ ಎಲ್ಲಾ ಸಿಬ್ಬಂದಿ ವರ್ಗದವರಿಗೆ ಇದೇ ಸಂದರ್ಭದಲ್ಲಿ ಧನ್ಯವಾದಗಳು ಅರ್ಪಿಸುತ್ತೇನೆ ಎಂದರು.

ಪೂಜ್ಯ ಶ್ರೀ ಚಂದ್ರಶೇಖರಸ್ವಾಮಿಗಳು ನಿಧನ

ತಿ.ನರಸೀಪುರ, ಜು 4– ತಲಕಾಡಿನ ಮುಡುಕುತೊರೆ ಶ್ರೀಕ್ಷೇತ್ರದ ವಿರಕ್ತ ಕಲ್ಮಠದ ಪರಮ ಪೂಜ್ಯ ಶ್ರೀ ಚಂದ್ರಶೇಖರಸ್ವಾಮಿಗಳವರು(81) ಇಂದು (ಜು.4) ವಿಧಿವಶರಾಗಿದ್ದಾರೆ. ಪೂಜ್ಯರ ಅಂತ್ಯಕ್ರಿಯೆಯು ಬುಧವಾರ ಮುಡುಕುತೊರೆ ಕಲ್ಮಠದಲ್ಲೇ ನೆರವೇರಲಿದ್ದು ಶ್ರೀಮಠದ ಭಕ್ತರು ಆಗಮಿಸಿ ಪೂಜ್ಯರ ದರ್ಶನ ಪಡೆಯಲು ಕೋರಿದೆ. ಸ್ವಾಮೀಜಿರವರ ನಿಧನಕ್ಕೆ ಸಮಾಜ ಕಲ್ಯಾಣ ಸಚಿವ ಡಾ.ಎಚ್.ಸಿ.ಮಹದೇವಪ್ಪ, ಮಾಜಿ ಶಾಸಕ ಎಂ. ಅಶ್ವಿನ್ ಕುಮಾರ್, ಮೈಮುಲ್ ಮಾಜಿ ಅಧ್ಯಕ್ಷ ಓಂ ಪ್ರಕಾಶ್ ಹಾಗೂ ಸುನಿಲ್ ಬೋಸ್ ಸಂತಾಪ ಸೂಚಿಸಿದ್ದಾರೆ.



ಕೆಂಗಣ್ಣ ಶೆಟ್ಟಿ




ಬೆಟ್ಟದಪುರ, ಜು. 4– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರ ಹೋಬಳಿ ಅತ್ತಿಗೋಡು ಗ್ರಾಮದ ಪಟೇಲ್ ಕೆಂಗಣ್ಣ ಶೆಟ್ಟಿ (96) ಅವರು ವಯೋಸಹಜ ಕಾಯಿಲೆಯಿಂದ ಇಂದು ಬೆಳಗ್ಗೆ ನಿಧನ ಹೊಂದಿದ್ದಾರೆ. ದಿವಂಗತರು ಪತ್ನಿ ಶಾರದಮ್ಮ, ಮೂವರು ಪುತ್ರರು, ಮೂವರು ಪುತ್ರಿಯರು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಗ್ರಾಮದ ವೀರಶೈವ ಲಿಂಗಾಯಿತ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು. ಇವರ ನಿಧನಕ್ಕೆ ಕೆಪಿಸಿಸಿ ಸದಸ್ಯ ನಿತಿನ್ ವೆಂಕಟೇಶ್, ಜಿಲ್ಲಾ ಪಂಚಾಯತಿ ಮಾಜಿ ಸದಸ್ಯ ಕೆ.ಎಸ್. ಮಂಜುನಾಥ್, ವೀರಶೈವ ಲಿಂಗಾಯತ ಸಮಾಜದ ಅಧ್ಯಕ್ಷರು ಹಾಗೂ ಸದಸ್ಯರು ಹಾಗೂ ಗ್ರಾಮದ ವೀರಶೈವ ಲಿಂಗಾಯತ ಸಮಾಜದ ಬಂಧುಗಳು ಸಂತಾಪ ಸೂಚಿಸಿದ್ದಾರೆ.

ಚಾಮುಂಡಿಬೆಟ್ಟ ಪಾದದ ಬಳಿ ಸ್ವಚ್ಛತೆ; ಪ್ಲಾಸ್ಟಿಕ್ ನಿಷೇಧ ಜಾಗೃತಿ



ಮೈಸೂರು, ಜು.4(ಎಂಕೆ)– ಜಿಲ್ಲಾಡಳಿತ, ಜಿಪಂ, ಕ್ಲೀನ್ ಮೈಸೂರು ಫೌಂಡೇಶನ್ ಹಾಗೂ ಇತರೆ ಎನ್‌ಜಿಓ ಸಹಯೋಗದೊಂದಿಗೆ ಚಾಮುಂಡಿಬೆಟ್ಟದ ಪಾದದ ಬಳಿ ಮಂಗಳವಾರ ಸ್ವಚ್ಛತೆ ಹಾಗೂ ಪ್ಲಾಸ್ಟಿಕ್ ನಿಷೇಧದ ಬಗ್ಗೆ ಅರಿವು ಮೂಡಿಸಲಾಯಿತು. ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಜಿಲ್ಲಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾತನಾಡಿ, ಪ್ರತಿಯೊಬ್ಬರು ಪ್ಲಾಸ್ಟಿಕ್ ಬಳಕೆ ಮಾಡುವುದನ್ನು ಬಿಡುವುದರ ಜೊತೆಗೆ ಸ್ವಚ್ಛತೆ ಕಡೆಗೆ ಗಮನ ಹರಿಸಬೇಕು. ಸ್ವಚ್ಛತೆ ಕಾಪಾಡಿದಷ್ಟೇ ಆರೋಗ್ಯಕರ ಪರಿಸರ ನಿರ್ಮಾಣ ಸಾಧ್ಯ ಎಂದರು. ಮೈಸೂರು ತಾಪಂ ಕಾರ್ಯನಿರ್ವಾಹಕ ಅಧಿಕಾರಿ ಹೆಚ್.ಡಿ. ಗಿರೀಶ್, ಚಾಮುಂಡಿಬೆಟ್ಟ ಗ್ರಾಪಂ ಪಿಡಿಓ ರೂಪೇಶ್ ಮತ್ತಿತರರು ಉಪಸ್ಥಿತರಿದ್ದರು.

ಅಮೆರಿಕದಲ್ಲಿ ಭಾರತದ ಕಾನ್ಸುಲೇಟ್‌ಗೆ ಬೆಂಕಿ ಹಚ್ಚಿ ಖಲಿಸ್ತಾನ್ ಬೆಂಬಲಿಗರಿಂದ ದಾಂಧಲೆ



- ಅಮೆರಿಕದ ಸ್ಯಾನ್ ಫ್ರಾನ್ಸಿಸ್ಕೋದ ಭಾರತೀಯ ಕಾನ್ಸುಲೇಟ್‌ನಲ್ಲಿ ದಾಂಧಲೆ
- ಕಾನ್ಸುಲೇಟ್ ಕಟ್ಟಡದ ಮೇಲೆ ದಾಳಿ ನಡೆಸಿ ಬೆಂಕಿ ಹಚ್ಚಿದ ಖಲಿಸ್ತಾನಿ ಬೆಂಬಲಿಗರು
- ಇಂತಹ ದಾಳಿಗಳನ್ನು ಸಹಿಸುವುದಿಲ್ಲ ಎಂದು ಅಮೆರಿಕ ವಿದೇಶಾಂಗ ಇಲಾಖೆ ಖಂಡನೆ

ಸ್ಯಾನ್ ಫ್ರಾನ್ಸಿಸ್ಕೋ: ಅಮೆರಿಕದಲ್ಲಿ ಮತ್ತೆ ಖಲಿಸ್ತಾನಿಗಳ ಹಾವಳಿ ಜೋರಾಗಿದೆ. ಖಲಿಸ್ತಾನ್ ಪ್ರತ್ಯೇಕತಾವಾದಿಗಳು ಭಾನುವಾರ ನಸುಕಿನಲ್ಲಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿನ ಭಾರತೀಯ ಕಾನ್ಸುಲೇಟ್‌ಗೆ ನುಗ್ಗಿ ದಾಂಧಲೆ ನಡೆಸಿದ್ದಾರೆ. ಇದನ್ನು ಅಮೆರಿಕದ ವಿದೇಶಾಂಗ ಇಲಾಖೆ ಬಲವಾಗಿ ಖಂಡಿಸಿದೆ.

ಮುಂಜಾನೆ ಕಾನ್ಸುಲೇಟ್‌ಗೆ ಬೆಂಕಿ ಹಚ್ಚಲಾಗಿದೆ. ಖಲಿಸ್ತಾನಿ ಬೆಂಬಲಿಗರು ಈ ಕೃತ್ಯ ಎಸಗಿದ್ದಾರೆ ಎನ್ನಲಾಗಿದ್ದು, ಕಳೆದ ಐದು ತಿಂಗಳಲ್ಲಿ ಇಲ್ಲಿ ನಡೆದ ಎರಡನೇ ದಾಂಧಲೆ ಇದಾಗಿದೆ. ಮಾರ್ಚ್‌ನಲ್ಲಿ ಕೂಡ ಭಾರತೀಯ ಕಾನ್ಸುಲೇಟ್ ಮೇಲೆ ಖಲಿಸ್ತಾನ್ ಬೆಂಬಲಿಗರು ದಾಳಿ ನಡೆಸಿದ್ದರು.

ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಭಾರತದ ಕಾನ್ಸುಲೇಟ್‌ನಲ್ಲಿ ದಾಂಧಲೆ ನಡೆಸಿ, ಬೆಂಕಿ ಹಚ್ಚಲು ಪ್ರಯತ್ನಿಸಿದ ವರದಿಗಳನ್ನು ಅಮೆರಿಕ ಬಲವಾಗಿ ಖಂಡಿಸುತ್ತದೆ. ಅಮೆರಿಕದಲ್ಲಿನ ರಾಜತಾಂತ್ರಿಕ ಕಚೇರಿಗಳು ಅಥವಾ ವಿದೇಶಿ ರಾಜತಾಂತ್ರಿಕರ ಮೇಲಿನ ದಾಂಧಲೆ ಅಥವಾ ಹಿಂಸಾಚಾರ ಕ್ರಿಮಿನಲ್ ಅಪರಾಧವಾಗಿದೆ ಎಂದು ಅಮೆರಿಕ ವಿದೇಶಾಂಗ ಇಲಾಖೆ ವಕ್ತಾರ ಮ್ಯಾಥ್ಯೂ ಮಿಲ್ಲರ್ ತಿಳಿಸಿದ್ದಾರೆ.

ಅಗ್ನಿ ಶಾಮಕ ಇಲಾಖೆ ಕೂಡಲೇ ಭಾರತೀಯ ಕಾನ್ಸುಲೇಟ್‌ಗೆ ತೆರಳಿ ಬೆಂಕಿಯನ್ನು ನಂದಿಸುವಲ್ಲಿ ಯಶಸ್ವಿಯಾಗಿದೆ. ಯಾವುದೇ ಪ್ರಮುಖ ಹಾನಿ ಅಥವಾ ಗಾಯಗಳು ಉಂಟಾಗಿಲ್ಲ. ಸ್ಥಳೀಯ ರಾಜ್ಯ ಹಾಗೂ ಫೆಡರಲ್ ಅಧಿಕಾರಿಗಳಿಗೆ ಈ ಬಗ್ಗೆ ಮಾಹಿತಿ ನೀಡಲಾಗಿದೆ ಎಂದು ವರದಿಯಾಗಿದೆ.

ನಿಜ್ಜಾರ್ ಹತ್ಯೆಗೆ ಪ್ರತೀಕಾರ: ಸ್ಯಾನ್ ಫ್ರಾನ್ಸಿಸ್ಕೋ ಮೂಲದ ದಿಯಾ ಟಿವಿಯು ಕಾನ್ಸುಲೇಟ್‌ಗೆ ಬೆಂಕಿ ಹಚ್ಚಿದ ವಿಡಿಯೋವನ್ನು ಪ್ರಸಾರ ಮಾಡಿದೆ. 'ಹಿಂಸೆಯು ಹಿಂಸೆಯನ್ನೇ ಪಡೆಯುತ್ತದೆ ಎಂದು ಅದು ಹೇಳಿದೆ. ವಿಡಿಯೋದಲ್ಲಿ ಅದು ಕೆನಡಾದಲ್ಲಿ ಕಳೆದ ತಿಂಗಳು ಹತ್ಯೆಯಾದ ಖಲಿಸ್ತಾನ್ ಟೈಗರ್ ಫೋರ್ಸ್ ಹಾಗೂ ಕೆನಡಾದ ಸಶಸ್ತ್ರ ಗುಂಪು ಸಿಖ್ ಫಾರ್ ಜಸ್ಟೀಸ್‌ನ (ಎಸ್‌ಎಫ್‌ಜೆ) ಮುಖ್ಯಸ್ಥ ಹರ್ದೀಪ್ ಸಿಂಗ್ ನಿಜ್ಜಾರ್‌ನ ಸಾವಿನ ವರದಿಯಿರುವ ಪತ್ರಿಕಾ ತುಣುಕುಗಳನ್ನು ತೋರಿಸಿದೆ

ಪಂಜಾಬ್‌ನ ಜಲಂಧರ್ ನಿವಾಸಿಯಾದ 46 ವರ್ಷದ ನಿಜ್ಜಾರ್, ಕೆನಡಾ ಮೂಲದ ಅತ್ಯಂತ ಹಳೆಯ ಖಲಿಸ್ತಾನಿ ಉಗ್ರ ಸಂಘಟನೆಗಳಲ್ಲಿ ಒಂದಾದ ಬಬ್ಬರ್ ಖಲ್ಸಾ ಇಂಟರ್‌ನ್ಯಾಷನಲ್‌ಗೆ (ಬಿಕೆಐ) ಆರ್ಥಿಕ ಸಹಾಯ ಒದಗಿಸಿದ ಆರೋಪ ಎದುರಿಸುತ್ತಿದ್ದ.

ಕೆನಡಾದಲ್ಲಿ ಖಲಿಸ್ತಾನ ಪರ ಬೆಂಬಲಿಗರು 'ಫ್ರೀಡಂ ರ್‍ಯಾಲಿ'ಗೆ ಕರೆ ನೀಡಿದ್ದಾರೆ. ಒಟ್ಟಾವದಲ್ಲಿರುವ ಭಾರತದ ರಾಯಭಾರ ಕಚೇರಿ ಹಾಗೂ ಟೊರಾಂಟೋದಲ್ಲಿನ ಕಾನ್ಸುಲ್ ಜನರಲ್ ಕಚೇರಿಗಳಿಗೆ ಫ್ರೀಡಂ ರ್‍ಯಾಲಿ ಕುರಿತಾದ ಪೋಸ್ಟರ್‌ಗಳಲ್ಲಿ ಬೆದರಿಕೆ ಒಡ್ಡಲಾಗಿದೆ.

ಕರ್ನಾಟಕ ಸರ್ಕಾರ
ಸಹಾಯಕ ಕೃಷಿ ನಿರ್ದೇಶಕರ ಕಛೇರಿ ತಿ.ನರಸೀಪುರ ತಾಲ್ಲೂಕು

Telephone No : 08277-261435 E-mail :adatnpur@rediffmail.com

ಸಂಖ್ಯೆ: ಸಕೃ/ತಿನಸು/ಲೆಕ್ಕ-2/ವಾ.ಬಾ/ಟೆಂ.ಪ್ರ/2023-24 ದಿನಾಂಕ: 03-07-2023

ಟೆಂಡರ್ ಪ್ರಕಟಣೆ

ವಿಷಯ: ಹೊರಗುತ್ತಿಗೆ ಆಧಾರದ ಮೇಲೆ ಈ ಕಛೇರಿಗೆ ವಾಹನ ಸೇವೆ ಒದಗಿಸಲು ದರಪಟ್ಟಿ ಕರೆಯುವ ಬಗ್ಗೆ. ಉಲ್ಲೇಖ: ಕೃಷಿ ಆಯುಕ್ತರು ಬೆಂಗಳೂರು ರವರ ಪತ್ರ ಸಂಖ್ಯೆ: ಸಾಮಾನ್ಯ/ವಾ-2/ಬಾಡಿಗೆ ವಾಹನ/ಮುಂದುವರಿಕೆ/ 65/13-14 ದಿನಾಂಕ: 25-03-2023.

2023-24ನೇ ಸಾಲಿಗೆ ಸಹಾಯಕ ಕೃಷಿ ನಿರ್ದೇಶಕರು, ತಿ-ನರಸೀಪುರ ರವರಿಗೆ ತಾಲ್ಲೂಕಿನಲ್ಲಿ ಇಲಾಖಾ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸುವ ಸಂಬಂಧ ಪ್ರವಾಸ ಕೈಗೊಳ್ಳಲು ಹೊರಗುತ್ತಿಗೆ ಆಧಾರದ ಮೇಲೆ ಒಂದು ವಾಹನದ (ಕಾರು) ಅವಶ್ಯಕತೆ ಇದ್ದು, ಅಧಿಕೃತ (ನೋಂದಾಯಿತ) ಟ್ರಾವೆಲ್ ಏಜೆನ್ಸಿಗಳಿಂದ ವಾಹನ ಸರಬರಾಜು ಮಾಡಬಯಸುವ ಟೆಂಡರ್‌ದಾರರು (ಟ್ರಾವೆಲ್ ಏಜೆನ್ಸಿಗಳು) ಮೊಹರು ಮಾಡಿದ ಲಕೋಟೆಯಲ್ಲಿ ದರಪಟ್ಟಿಯನ್ನು ನಿಬಂಧನೆಗಳಿಗೆ ಒಳಪಟ್ಟು ಆಹ್ವಾನಿಸಲಾಗಿದೆ.

1	ಟೆಂಡರ್ ಅರ್ಜಿ ಬೆಲೆ	ರೂ.200/-
2	ಟೆಂಡರ್ ಅರ್ಜಿ ವಿತರಿಸುವ ದಿನಾಂಕ	04-07-2023 ರಿಂದ 14-07-2023 ರವರೆಗೆ ಅಪರಾಹ್ನ 3.00 ಗಂಟೆಯೊಳಗೆ
3	ಭರ್ತಿ ಮಾಡಿದ ಟೆಂಡರ್ ಅರ್ಜಿ ಸಲ್ಲಿಸಲು ಅಂತಿಮ ದಿನಾಂಕ	17-07-2023 ಸಂಜೆ 5.00 ಗಂಟೆಯೊಳಗೆ
4	ಟೆಂಡರ್ ತೆರೆಯುವ ದಿನಾಂಕ	18-07-2023 ಬೆಳಗ್ಗೆ 11.00 ಗಂಟೆಗೆ
5	ಟೆಂಡರ್ ತೆರೆಯುವ ಸ್ಥಳ	ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ತಿ-ನರಸೀಪುರ.
6	ಇ.ಎಂ.ಡಿ. ಮೊಬಲಗು (ಡಿ.ಡಿ) (ಒಂದು ವಾಹನಕ್ಕೆ)	ರೂ. 8500/-
7	ಡಿ.ಡಿ. ತೆಗೆಯಬೇಕಾದ ವಿಳಾಸ	ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತಿ-ನರಸೀಪುರ

ಸಹಾಯಕ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ತಿ ನರಸೀಪುರ ಇವರ ಹೆಸರಿನಲ್ಲಿ ರೂ. 200/- ನೀಡಿ ಟೆಂಡರ್ ಅರ್ಜಿಯನ್ನು ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ತಿ-ನರಸೀಪುರ ಇವರಿಂದ ಪಡೆಯಬಹುದು. ಟೆಂಡರಿನ ಷರತ್ತುಗಳ ಇನ್ನಿತರೆ ವಿವರಗಳನ್ನು ಈ ಕಛೇರಿ ಪತಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಸಹಿ/- ಸಹಾಯಕ ಕೃಷಿ ನಿರ್ದೇಶಕರು, ತಿ-ನರಸೀಪುರ.

ಮೈಸೂರು ಮಹಾನಗರಪಾಲಿಕೆ

ಕಾರ್ಯಪಾಲಕ ಅಭಿಯಂತರವರ ಕಛೇರಿ
ನೀಸಕಂಒಚ (ಪೂರ್ವ) ವಿಭಾಗ, ವಾಣಿವಿಲಾಸ ಆವರಣ, ಯಾದವಗಿರಿ, ಮೈಸೂರು

ಟೆಂಡರ್ ಪ್ರಕಟಣೆ ಸಂಖ್ಯೆ : ಮೈನಪಾ/ಕಾಇಂ/ನೀಸ&ಒಚ(ಪೂರ್ವ)/ಟಿಎನ್-1/204/2023-24 ದಿನಾಂಕ: 04-07-2023

ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ

ಮೈಸೂರು ಮಹಾನಗರ ಪಾಲಿಕೆಯ ವಿವಿಧ ಲೆಕ್ಕ ಶೀರ್ಷಿಕೆಗಳಾದ ನಗರಪಾಲಿಕೆ ಸಾಮಾನ್ಯ ನಿಧಿ ಅನುದಾನದಡಿ KTPP ನಿಯಮಗಳಿಗೆ ಒಳಪಟ್ಟಂತೆ ಟೆಂಡರ್‌ಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ. ವಿವರ ಈ ಕೆಳಕಂಡತಿರುತ್ತದೆ.

ಕ್ರ ಸಂ.	ವಿವರ	ಕಾಮಗಾರಿಗಳು	ಟೆಂಡರ್ ಮೊತ್ತ (ರೂ.ಲಕ್ಷಗಳಲ್ಲಿ)	ಸಂಜೆ 5:30 ಗಂಟೆ ನಂತರ ಇ-ಪೋರ್ಟಲ್‌ನಲ್ಲಿ ಟೆಂಡರ್ ಚಾಲ್ತಿಗೆ ಬರುವ ದಿನಾಂಕ	ಸಂಜೆ 5:30 ಗಂಟೆ ಒಳಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ಸಂಜೆ 5:45 ಗಂಟೆಯ ನಂತರ ಟೆಂಡರ್ / ತಾಂತ್ರಿಕ ಬಿಡ್ ತೆರೆಯುವ ದಿನಾಂಕ
1	Kw-1&Kw-2	52 ಸಂಖ್ಯೆ	832.55	07-07-2023	24-07-2023	25-07-2023
2	Service Tender Kc-2	7 ಸಂಖ್ಯೆ	163.15	07-07-2023	24-07-2023	25-07-2023
3	Service Tender Kc-2	6 ಸಂಖ್ಯೆ	-	12-07-2023	28-07-2023	31-07-2023
4	Goods Tender	1 ಸಂಖ್ಯೆ	37.70	07-07-2023	24-07-2023	25-07-2023

ವಿಶೇಷ ಸೂಚನೆ: ಮುಂದೆ ಯಾವುದೇ ಸೂಚನೆ/ಬದಲಾವಣೆ/ತಿದ್ದುಪಡಿಗಳಿದ್ದಲ್ಲಿ – ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ ಪ್ರಕಟಿಸಲಾಗುವುದು ಮತ್ತು ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಲಾಗುವುದಿಲ್ಲ.

ಸಹಿ/– ಕಾರ್ಯಪಾಲಕ ಅಭಿಯಂತರರು, ನೀಸ&ಒಚ(ಪೂರ್ವ) ವಿಭಾಗ, ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಸಾರ್ವಜನಿಕ ಪ್ರಕಟಣೆ

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ಷೆಡ್ಯೂಲ್‌ನಲ್ಲಿ ನಮೂದಿಸಿರುವ ಸ್ವತ್ತನ್ನು ನನ್ನ ಕಕ್ಷಿದಾರರು ಅದರ ಮಾಲೀಕರಾದ, ಮೈಸೂರು, ಬೋಗಾದಿ 2ನೇ ಹಂತ, ಟ್ರೆಷರಿ ಲೇಯೌಟ್, 8ನೇ ಅಡ್ಡ ರಸ್ತೆ, ಟಿ. ಬ್ಲಾಕ್-2, ನಂ. 1 ರ ನಿವಾಸಿಯಾದ, ಶ್ರೀಮತಿ, ಅಕ್ಷಿನೇತ್ರಿ ಕೆ. ಪರಶಿವಮೂರ್ತಿ ಮತ್ತು ಇವರ ಕುಟುಂಬದ ಸದಸ್ಯರುಗಳಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.

ಷೆಡ್ಯೂಲ್ ಸ್ವತ್ತಿನ ಪರಬಾರೆಯ ವಿಚಾರದಲ್ಲಿ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇದ್ದಲ್ಲಿ, ಇಂದಿನಿಂದ ಹದಿನೈದು (15) ದಿನಗಳ ಒಳಗೆ ತಮ್ಮ ಲಿಖಿತ ತಕರಾರು ಮತ್ತು ಪೂರಕ ದಾಖಲಾತಿಗಳನ್ನು ಈ ಕೆಳಗೆ ಸಹಿ ಮಾಡಿದವರಿಗೆ ಸಲ್ಲಿಸತಕ್ಕದ್ದು. ಒಂದು ವೇಳೆ ಈ ಅವಧಿಯಲ್ಲಿ ಯಾವುದೇ ತಕರಾರುಗಳು ಈ ಕೆಳಗೆ ಸಹಿ ಮಾಡಿದವರಿಗೆ ಬಾರದಿದ್ದಲ್ಲಿ, ಷೆಡ್ಯೂಲ್ ಸ್ವತ್ತಿನ ಮೇಲೆ ಇತರ ಯಾರಿಗೂ ಯಾವುದೇ ರೀತಿಯ ಹಕ್ಕು, ಹಿತಾಸಕ್ತಿ, ಭಾಗಾಂಶ, ಋಣ, ಬಾಧ್ಯತೆಗಳು ಇರುವುದಿಲ್ಲ ಮತ್ತು ಷೆಡ್ಯೂಲ್ ಸ್ವತ್ತನ್ನು ಮಾರಾಟ ಮಾಡಲು ಸ್ವತ್ತಿನ ಮಾಲೀಕರು ಪೂರ್ಣ ಹಕ್ಕುಳ್ಳವರಾಗಿರುತ್ತಾರೆ ಎಂದು ಪರಿಗಣಿಸಿ ಕ್ರಯದ ಪ್ರಕ್ರಿಯೆಯನ್ನು ಪೂರ್ಣಗೊಳಿಸಲಾಗುವುದು.

ಷೆಡ್ಯೂಲ್: ಮೈಸೂರು ಜಿಲ್ಲೆ ಮತ್ತು ತಾಲ್ಲೂಕು, ಜಯಪುರ ಹೋಬಳಿ, ಸಿಂಧುವಳ್ಳಿ ಗ್ರಾಮದ ಸರ್ವೆ ನಂಬ 147/3 ರಲ್ಲಿನ ಒಂದು ಎಕರೆ ಮೂವತ್ತಾರು ಗುಂಟೆ (1.36.00.00) ವಿಸ್ತೀರ್ಣದ ಖುಷ್ಕಿ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ :- ಸರ್ಕಾರಿ ಕೆರೆ, ಪಶ್ಚಿಮಕ್ಕೆ :- ಸದಾಶಿವಪ್ಪ ರವರ ಜಮೀನು, ಉತ್ತರಕ್ಕೆ : ಸರ್ಕಾರಿ ಕೆರೆ, ದಕ್ಷಿಣಕ್ಕೆ: ಕೆಂಡಯ್ಯನ ದೇವಪ್ಪ ರವರ ಜಮೀನು.

Sd/- M.N Prakash kalappa, KAR 1996-2000, Advocate and legal consultant #2-3, First Floor, PRI Complex, 67/7A, New Sayyajirao Road, Fort mohalla, Mysore 570004, Cell: 9343112535 E-mail: mnprakashkalappa@gmail.com

ಮೈಸೂರು: 04/07/2023